ಕರ್ನಾಟಕ ಗೌರವ ಗ್ರಂಥಮಾಲಾ.

ನಂಬರು ೧

ನೀತಿಬೋಧ

ಇದನ್ನು

ವಿಷ್ಣು ಶ್ರೀನಿವಾಸ ರಂಗೈಶೇಣ್ವಿ

ಸೆಕ್ರಟರಿ—ಕರ್ನಾಟಕ ಗೌರವ ಗ್ರಂಥಮಾಲಾ

ಯಲ್ಲಾಪೂರ

ಇವರು ಬರೆದರು

ಮೊದಲನೇ ಆವೃತ್ತಿ

೧೯೧೭ನೇ ಎಪ್ರಿಲ್

ಉಡುಪಿ "ಸದಾನಂದ" ಮುದ್ರಾಶಾಲೆಯಲ್ಲಿ

ಯು: ನರಸಿಂಹ ಮಲ್ಯರಿಂದ ಮುದ್ರಿತವಾದುದು

[ಬೆಲೆ: ೧॥ ಆಣೆ

ಕರ್ನಾಟಕ ಗೌರವ ಗ್ರಂಥಮಾಲಾ—ನಂಬರು ೧.

ನೀತಿಬೋಧ

ಇದನ್ನು

ವಿಷ್ಣು ಶ್ರೀನಿವಾಸ ರಂಗೈಶೇಣ್ವಿ

ಸೆಕ್ರೆಟರಿ—ಕರ್ನಾಟಕ ಗೌರವ ಗ್ರಂಥಮಾಲಾ

ಯಲ್ಲಾಪೂರ

ಇವರು ಬರೆದರು

ಮೊದಲನೇ ಆವೃತ್ತಿ

೧೯೧೭ನೇ ಎಪ್ರಿಲ್

ಬೆಲೆ: ೫ ಆಣೆ

ಉಡುಪಿಯ

"ಸದಾನಂದ" ಮುದ್ರಾಶಾಲೆಯಲ್ಲಿ

ಯು. ನರಸಿಂಹ ಮಲ್ಯರಿಂದ ಮುದ್ರಿತವಾದುದು.

ಕರ್ಣಾಟಕ ಗೌರವ ಗ್ರಂಥಮಾಲಾ

ಉದ್ದೇಶ

ಈಗಿನ ಕಾಲದ ಕನ್ನಡಭಾಷೆಯ ಸ್ಥಿತಿಯನ್ನು ನೋಡಿದರೆ ಈ ಭಾಷೆಯಲ್ಲಿ ಉತ್ತಮಗ್ರಂಥಗಳ ಸಮೂಹವು ತೀರ ಕಡಿಮೆ ಇರುತ್ತದೆಂದು ಕಂಡುಬರುವುದು. ಒಂದು ಪಕ್ಷದಲ್ಲಿ ಇಲ್ಲವೆಂದರೂ ಚಿಂತೆಯಿಲ್ಲ. ಆದ್ದರಿಂದ ಈ ಕೊರತೆಯನ್ನು ದೂರಮಾಡುವುದಕ್ಕಾಗಿ ಕರ್ಣಾಟಕದೊಳಗಣ ಕೆಲವರು ಪ್ರಮುಖಜನರ ಸಹಾಯದಿಂದ ಈ ಮಂಡಲವು ಸ್ಥಾಪಿತವಾಗಿರುತ್ತದೆ. ಕನಿಷ್ಟಪಕ್ಷಕ್ಕೆ ೨-೩ ಯೋಗ್ಯ ಗ್ರಂಥಗಳನ್ನು ಬೆಳಕಿಗೆ ತರುವುದು ಮಂಡಲದ ಉದ್ದೇಶವಿದ್ದು, ಅದಕ್ಕನುಸಾರವಾಗಿ 'ನೀತಿಬೋಧ' ವೆಂಬ ಅತ್ಯುತ್ತಮವಾದ ಪುಸ್ತಕವು ಈಗ ಅಚ್ಚಾಗಿ ಸಿದ್ಧವಾಗಿರುತ್ತದೆ. ಕ್ರಯ ೫ ಆಣೆ. ಪುಸ್ತಕಗಳನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು ಈ ನಮ್ಮ ಗ್ರಂಥಮಾಲೆಯ ಬಗ್ಗೆ ಇದಕ್ಕೂ ಹೆಚ್ಚಿನ ಸಂಗತಿಗಳನ್ನು ಗೊತ್ತುಮಾಡಿಕೊಳ್ಳಲಿಚ್ಛಿಸುವವರು ನಮ್ಮ ಗ್ರಂಥಮಾಲೆಯ 'ಉದ್ದೇಶಪತ್ರ'ವನ್ನು ನೋಡಬೇಕು. ಈ ಪತ್ರಗಳನ್ನು ನಾವು ಎಲ್ಲರಿಗೂ ಮುಫತ್ತಾಗಿ ರವಾನಿಸುವೆವು.

ವ್ಹಿ. ಎಸ್. ರಂಗೈಶೇಣಾವಿ.

ಸೆಕ್ರೆಟರಿ—ಕರ್ನಾಟಕ ಗಾರವ ಗ್ರಂಥಮಾಲಾ

ಪೋಸ್ಟ್—ಯಲ್ಲಾಪುರ

ಜಿಲ್ಲಾ—ಕಾರವಾರ.

ಪ್ರಸ್ತಾವನೆ

ಕನ್ನಡಭಾಷೆಯ ಏಳ್ಗೆಯನ್ನೂ, ಕನ್ನಡಿಗರ ಉತ್ಕರ್ಷವನ್ನೂ, ಕರ್ಣಾಟಕದ ಅಭ್ಯುದಂ ವನ್ನೂ, ಬಯಸಿ ಇವುಗಳಿಗಾಗಿ ಪ್ರಸ್ತುತಕಾಲಕ್ಕೆ ಅವಶ್ಯವಾಗಿ ಮಾಡಬೇಕಾಗಿರುವ ಪ್ರಯತ್ನಗಳಲ ಕನ್ನಡಗ್ರಂಥಗಳ ಪ್ರಕಾಶನವು ಅವಶ್ಯವೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ಇತರಭಾಷೆಗ ಸ್ಥಿತಿಗೆ ನಮ್ಮ ಕನ್ನಡದ ಸದ್ಯಸ್ಥಿತಿಯನ್ನು ಹೋಲಿಸಿನೋಡಿದರೆ ಸಹೃದಯರಾದ ನಮ್ಮ ಕನ್ನಡಿಗ ಮನಸ್ಸಿನಲ್ಲಿಯೂ ಕಳವಳವಾಗದೆ ಇರದು. ಉಳಿದವರು ತಮ್ಮ ಭಾಷೆಯ ಗ್ರಂಥಭಾಂಡಾರಗಳನ ಬಗೆಬಗೆಯ ಹೊಸ ಗ್ರಂಥಗಳಿಂದ ಬಳೆಯಿಸುತ್ತಿರುವಾಗ ನಾವು ಮಾತ್ರ ಕೃತಕೃತ್ಯರಾದವರಂತೆ ಸುಮ್ಮ ಸೋಮಾರಿಗಳಾಗಿ ಕುಳಿತುಕೊಳ್ಳುವುದು ಸರ್ವಥಾ ಸರಿಯಲ್ಲ. ಭಾಷೋನ್ನತಿಯ ವಿಷಯದಲ ನಾವು ಸರ್ವಪ್ರಕಾರದಿಂದಲೂ ಶ್ರಮಪಡಲೇ ಬೇಕು.

ಪ್ರಸ್ತುತಕಾಲಕ್ಕೆ ನಮ್ಮ ಈ ಕನ್ನಡಭಾಷೆಯಲ್ಲಿ ಜ್ಞಾನ ಹಾಗೂ ಮನೋರಂಜನವನ್ನುಂಟ ಮಾಡುವ ಗ್ರಂಥಗಳು ತೀರ ಕಡಿಮೆ ಇರುತ್ತವೆಂಬ ಮಾತು ಎಲ್ಲರಿಗೂ ವಿದಿತವಾದದ್ದೇ. ಆದುದರಿಂ ಈ ಕೊರತೆಯನ್ನು ಈಗಿನ ದೊಡ್ಡದೊಡ್ಡ ಕನ್ನಡವಿದ್ವಾಂಸರು ಕಡಿಮೆಮಾಡಿಕೊಳ್ಳತಕ್ಕದ್ದು.

ಇನ್ನು „ಜನರಲ್ಲಿ ಹಬ್ಬಿರುವ ಅಜ್ಞಾನವು ಮಲಿನವಾಗಬೇಕು”. ನಮ್ಮ ಸಮಾಜದಲ್ಲಿ ನ ನಾಗರಿಕತೆಯುಂಟಾಗಬೇಕು! ಜನರೆಲ್ಲರೂ ಸದಾಚಾರಿಗಳಾಗಬೇಕು! ಎಂಬ ಈ ಉದ್ದೇಶದಿಂದಲೂ ಕರ್ಣಾಟಕವಾಙ್ಮಯಾಭಿವೃದ್ಧಿಗೆ ನನ್ನಿಂದ ಅಲ್ಪವಾದರೂ ಸಹಾಯವಾಗಬೇಕೆಂಬ ಈ ಎರಡನೆಯ ಉದ್ದೇಶದಿಂದಲೂ ನಾನು ಈ ಚಿಕ್ಕ ಪುಸ್ತಕವನ್ನು ಹಲವು ಗ್ರಂಥಗಳ ಆಧಾರದಿಂದ ಬರೆದಿದ್ದೇನೆ.

ಇದು ನನ್ನ ಪ್ರಥಮಕೃತಿಯಾದ್ದರಿಂದ ಇದರಲ್ಲಿ ಅನೇಕ ದೋಷಗಳಿರಬಹುದು. ಈ ದೋ ಗಳನ್ನು ಕನ್ನಡಭಾಷಾಭಿಮಾನಿಗಳು ತಿಳಿಸಬೇಕಾಗಿ ವಿನಂತಿಇದೆ. ಕನ್ನಡಭಾಷಾಭಿಮಾನಿಗಳಾದ ಎಲ್ಲರ ಈ ಪುಸ್ತಕವನ್ನು ಒಮ್ಮೆಯಾದರೂ ಓದಿನೋಡಿ ಯೋಗ್ಯಪ್ರೋತ್ಸಾಹನವನ್ನು ಕೊಡುವಿರಾಗಿ ತುಂಬ ನಂಬಿದ್ದೇನೆ.

ಇನ್ನು ಈ ಚಿಕ್ಕ ಪುಸ್ತಕವನ್ನು ಸಿದ್ಧಪಡಿಸುವುದರಲ್ಲಿ ನೆರವಾದ ನಮ್ಮ ಮಿತ್ರರ ಉಪಕಾ ವನ್ನೂ, ರಾ|| ರಾ|| ಯು. ನರಸಿಂಹ ಮಲ್ಯ, ಮೆನೇಜರ್, ಸದಾನಂದ ಪ್ರಿಂಟಿಂಗ್ ವರ್ಕ್ಸ್, ಉಡುಪಿ —ಇವರು ಪುಸ್ತಕವನ್ನು ಆದಷ್ಟು ಜಾಗ್ರತೆಯಿಂದ ಮುದ್ರಿಸಿಕೊಟ್ಟದ್ದರಿಂದ ಅವರ ಉಪಕಾರವನ್ನೂ ಸ್ಮರಿಸುತ್ತೇನೆ.

ವಿಷ್ಣು ಶ್ರೀನಿವಾಸರಾವ ರಂಗ್ಯೈಶೇಣ್ವಿ
ಯಲ್ಲಾಪುರ
ಗ್ರಂಥಕರ್ತ

CONTENTS

ಅನುಕ್ರಮಣಿಕಾ

ನೀತಿಬೋಧೆ

"ಅತಿ ಸರ್ವತ್ರ ವರ್ಜಯೇತ್"

ಈ ಸೃಷ್ಟಿಯಲ್ಲಿ ದೇವರು ಮನುಷ್ಯನ ಸುಖೋಪಭೋಗಕ್ಕಾಗಿ ಅನೇಕ ವಸ್ತು ಗಳನ್ನು ನಿರ್ಮಾಣಮಾಡಿರುವನಷ್ಟೆ! ಆದರೆ ಈ ಸೃಷ್ಟಿಯಲ್ಲಿರುವ ಸಕಲವಸ್ತುಗಳಿಂದ ಲೂ ನಾವು ಸುಖವನ್ನನುಭವಿಸುವುದು ನ್ಯಾಯವೇ ಆಗಿದ್ದರೂ, ಅವುಗಳನ್ನು ಮಿತಿವಿೂರಿ ಉಪಯೋಗಿಸುವುದರಿಂದ ನಾವು ಅನೇಕ ಸಂಕಟಗಳಿಗೆ ಗುರಿಯಾಗ ಬೇಕಾಗುತ್ತದೆ. ಆದುದರಿಂದ ಆರೋಗ್ಯವನ್ನು ಬಯಸಿ ಚಿರಕಾಲವೂ ಸೌಖ್ಯ ವನ್ನೇ ಅನುಭವಿಸಬೇಕೆಂದಪೇಕ್ಷಿಸುವರು ಯಾವ ವಿಷಯದಲ್ಲಿಯೂ ಯೋಗ್ಯರೀತಿ ಯಿಂದ, ಎಂದರೆ ಮಿತಭಾವದಿಂದಿರಲಿಕ್ಕೆ ಪ್ರಯತ್ನಿಸತಕ್ಕುದು.

"**ಅತಿ ಸರ್ವತ್ರ ವರ್ಜಯೇತ್**" ಎಂದು ಶಿರೋಲೇಖದಲ್ಲಿ ಬರೆದ ನೀತಿ ವಾಕ್ಯವನ್ನು ಸಮಸ್ತರೂ ಕೇಳಿರಬಹುದು. ಅತಿಭೋಜನ, ಅತಿಪಾನ, ಅತಿನಿದ್ರೆ, ಅತಿಭೋಗ ಮುಂತಾದ ಮಿತಿವಿೂರಿದ ಕಾರ್ಯಗಳೆಲ್ಲವೂ ಅಂತ್ಯದಲ್ಲಿ ಕೇಡಿಗೆ ಕಾರಣೀಭೂತಗಳಾಗುವುವು. ಅನ್ನಪಾನಾದಿಗಳಲ್ಲಿ ಮಿತಿವಿೂರಿ ವರ್ತಿಸಿ ಮಡಿಯು ತ್ತಿರುವರ ಸಂಖ್ಯೆ ಪ್ರತಿದೇಶದಲ್ಲಿಯೂ ಹೆಚ್ಚುತ್ತಿರುವುದು. ನಮ್ಮಲ್ಲಿಯೂ ಹಲ ವರು ಮೌಢ್ಯದಿಂದ ಆಹಾರವನ್ನು ಹೆಚ್ಚಾಗಿ ತಿಂದಷ್ಟೂ ಶಕ್ತಿ ವೃದ್ಧಿಯಾಗುವುದೆಂಬ ಭ್ರಮೆಯಿಂದ ಸಿಕ್ಕಿದುದನ್ನು ತಿನ್ನುವರು; ಹಾಗೂ ಅಳತೆಗೆಟ್ಟುಣ್ಣುವರು. ಹೀಗೆ ಮಾಡುವುದರಿಂದ ಆರೋಗ್ಯವು ಕೆಟ್ಟು ಒಮ್ಮೊಮ್ಮೆ ಭಯಂಕರಾಪಾಯಗಳು ಸಂಭ ವಿಸುತ್ತವೆ. ಇನ್ನು ನಮ್ಮ ಕುಟುಂಬದೊಳಗಣ ಹಲವರು ಸ್ತ್ರೀಯರು ಬಡಿಸು ವಾಗ, ಊಟಮಾಡುವರು ಬಡಿಸಲಿಕ್ಕೆ ತಂದ ಪದಾರ್ಥವನ್ನು ಬೇಡಬೇಡವೆಂದು ಕೈಯನ್ನು ಅಡ್ಡಹಿಡಿದರೂ ಬಿಡದೆ ಬಲಾತ್ಕಾರದಿಂದ ಅವರನ್ನು ತಿನ್ನಿಸುವುದನ್ನು ಎಲ್ಲರೂ ನೋಡಿರಬಹುದು. ಹೀಗೆ ಮಾಡುವುದರಿಂದ ಅಜೀರ್ಣ ಮೊದಲಾದ ವ್ಯಾಧಿಗಳು ಹುಟ್ಟುವುವು. ಈ ಅನರ್ಥಗಳಿಗೆಲ್ಲ ನಮ್ಮ ಸ್ತ್ರೀಯರಲ್ಲಿ ವ್ಯಾಪಿಸಿರುವ ಮೌಢ್ಯವೇ ಮುಖ್ಯಕಾರಣವಾಗಿರುವುದು. ಇಂತಹ ಮೌಢ್ಯವನ್ನು ಪರಿಹರಿಸ ಲೋಸುಗ ಸ್ತ್ರೀಯರನ್ನೂ ವಿದ್ಯಾವತಿಯರನ್ನಾಗಿ ಮಾಡುವುದು ಪುರುಷರಾದ ನಮ್ಮ ಆದ್ಯಕರ್ತವ್ಯವಾಗಿರುತ್ತದೆಂದು ಹೇಳಬಹುದು.

ಇನ್ನು ಅತಿಪಾನದಿಂದಾಗುವ ಹಾನಿಗಳಾವುವೆಂಬುದನ್ನು ನೋಡುವ. ಅತಿ ಪಾನದಿಂದ ದೇಹವೆಲ್ಲ ಕೆಟ್ಟು ಬಾಲ್ಯದಶೆಯಲ್ಲಿಯೇ ಮುಪ್ಪು ಸಂಭವಿಸಿ ಅಕಾಲಮೃತ್ಯು

ಏಗೆ ಗುರಿಯಾದವರನ್ನು ನಾವು ದಿನಂಪ್ರತಿ ನೋಡುತ್ತೇವೆ. ಅತಿನಿದ್ರೆಯಿಂದ ಮೈ ಯಲ್ಲಿ ಆಲಸ್ಯವುಂಟಾಗಿ ಅವಯವಗಳ ಪಟುತ್ವವು ದಿನೇದಿನೇ ಕಡಿಮೆಯಾಗಿ ತಿಂದ ಅನ್ನವು ಜೀರ್ಣಿಸದೆ ನಿರಂತರವೂ ವೈದ್ಯರ ಕಡೆಗೆ ಹೋಗುವ ಸಂಭವವು ಬರುವುದು. ಅತಿಸಂಭೋಗದಿಂದ ಕ್ಷಯವೇ ಮೊದಲಾದ ಭಯಂಕರರೋಗಗಳು ಹುಟ್ಟುತ್ತವೆಂಬ ಮಾತು ಎಲ್ಲರಿಗೂ ವಿದಿತವಾದದ್ದೇ. ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಮಿತಿ ಮಾರಿ ನಡೆದರೆ ಬಹಳ ಅನರ್ಥಗಳು ಸಂಭವಿಸುವುವು. ಅದುಕಾರಣ ಶ್ರೀಮಂತನಾ ಗಲಿ ಬಡವನಾಗಲಿ, ಸುಶಿಕ್ಷಿತನಾಗಲಿ ಅಶಿಕ್ಷಿತನಾಗಲಿ, ಸುಖದಿಂದ ಕಾಲಕಳೆಯ ಲಪೇಕ್ಷಿಸುವ ಯಾವನಾದರೂ ಎಲ್ಲ ವಿಷಯಗಳಲ್ಲಿಯೂ ಮಿತಭಾವದಿಂದಿರಲಿಕ್ಕೆ ಪ್ರಯತ್ನಿಸತಕ್ಕುದು.

ತೃಪ್ತಿ

"Live contented, you will be a king
(An English Proverb.)

Some have too much, yet still they crave;
I little have, yet seek no more;
They are but poor though much they have
And I am rich with little store.

—*Addison.*

ತೃಪ್ತಿ ಎಂಬ ಶಬ್ದವು ಬರೀ ಎರಡು ವರ್ಣಗಳಿಂದ ರೂಪಿಸಲ್ಪಟ್ಟರೂ, ಅನೇಕ ಸದ್ಗುಣಗಳ ಮೇಲೆ ಅವಲಂಬಿಸಿಕೊಂಡು ಮನುಷ್ಯರಿಗೆ ಇಹಕ್ಕೂ ಪರಕ್ಕೂ ಸುಖ ವನ್ನುಂಟುಮಾಡುವುದಾಗಿರುತ್ತದೆ.

ಈ ಲೋಕದಲ್ಲಿ ಎಷ್ಟೋ ಜನರು ತಮ್ಮ ಸ್ಥಿತಿಯನ್ನು ಕುರಿತು ತೃಪ್ತಿಪಡದೆ ಆಗಾಗ್ಗೆ ಅಸಂತುಷ್ಟರಾಗಿ ಗೊಣಗುಟ್ಟುವುದುಂಟು. ಬಡವರು ಧನವಂತರನ್ನೂ, ಧನ ವಂತರು ಶ್ರೀಮಂತರನ್ನೂ ಕಂಡು, ದೇವರು ಪಕ್ಷಪಾತಿಯೆಂದೂ ಅಥವಾ ತಮ್ಮ ದುರ್ದೈವವೆಂದೂ ದಯಾಪರನಾದ ಪರಮೇಶ್ವರನನ್ನು ದೂರುವುದು ಸರಿಯಲ್ಲ. ಈ ಲೋಕದಲ್ಲಿ ನಮ್ಮ ಸ್ಥಿತಿ ಎಂಥದಾಗಿದ್ದರೂ ಪರಲೋಕದಲ್ಲಿ ನಮ್ಮ ಯೋಗ್ಯ ತಾನುಸಾರವಾಗಿ ಫಲಪ್ರಾಪ್ತಿಯಾಗುವುದು. ದೇವರು ನಮ್ಮ ಅಧಿಕಾರ, ಐಶ್ವರ್ಯ, ಯಶಸ್ಸು, ಮೊದಲಾದುವುಗಳನ್ನು ನೋಡುವುದಿಲ್ಲ. ಸತ್ಯ, ಸೌಜನ್ಯ, ಭಕ್ತಿ—ಇವು ಗಳೇ ಆತನಿಗೆ ಬೇಕಾದ ಗುಣಗಳು. ಇವುಗಳಿದ್ದ ಮೇಲೆ ಐಹಿಕಸುಖವನ್ನು ಮಾತ್ರ

ಕೊಡುವ ವಸ್ತುಗಳನ್ನು ಏತಕ್ಕೆ ಬಯಸಬೇಕು? ಇದಲ್ಲದೆ ನಾವು ಬದುಕಿರುವುದು ಸ್ವಲ್ಪಕಾಲ. ಬಡವನೂ, ಶ್ರೀಮಂತನೂ, ಅರಸನೂ, ರೋಗಿಯೂ, ದೃಢಾಂಗನೂ, ಎಲ್ಲರೂ ಒಂದೇ ರೀತಿಯಲ್ಲಿ ಮರಣದಬಾಯಿಗೆ ತುತ್ತಾಗುವರು. ಆದುದರಿಂದ ಭೂಮಿಯ ಮೇಲೆ ಇರುವ ವರೆಗೂ ಅತೃಪ್ತಿಪಟ್ಟು ಏಕೆ ಕಳವಳಗೊಳ್ಳಬೇಕು?

"ನನ್ನ ನೆರೆಮನೆಯವನಷ್ಟು ಐಶ್ವರ್ಯವು ನನಗಿದ್ದರೆ ಸಾಕು" ಎಂದು ಒಬ್ಬನು ಹೇಳಬಹುದು. ಆದರೆ ನೆರೆಮನೆಯವನಷ್ಟು ಐಶ್ವರ್ಯವಂತನಾದಾಗ ಅದೇ ಮನುಷ್ಯನು ತನಗಿಂತ ಭಾಗ್ಯವಂತನಾದ ಮತ್ತೊಬ್ಬನ ಮೇಲೆ ಕಣ್ಣುಹಾಕುತ್ತಾನೆ. ಹೀಗೆ ಪ್ರತಿಯೊಬ್ಬನೂ ತಾನಿರುವ ಸ್ಥಿತಿಗಿಂತ ಸ್ವಲ್ಪ ಉಚ್ಚಸ್ಥಿತಿ ಪ್ರಾಪ್ತವಾದ ಕೂಡಲೇ ತನಗಿಂತ ಭಾಗ್ಯವಂತನಾದ ಮತ್ತೊಬ್ಬನ ಮೇಲೆ ಕಣ್ಣುಹಾಕುವುದು ವಾಡಿಕೆಯಾಗಿದೆ. ಆದರೆ ಹೀಗೆ ಮಾಡುವುದು ಸರಿಯಲ್ಲ. ಇಂಥ ಪ್ರಕಾರದ ಅತೃಪ್ತಿಯಿಂದ ಮನಸ್ಸಿಗೆ ತುಂಬ ವ್ಯಥೆಯೂ, ಕಳವಳವೂ ಉಂಟಾಗುವುವು.

ತೃಪ್ತಿಯೆಂಬ ಗುಣವನ್ನು ವೃದ್ಧಿಪಡಿಸಿಕೊಳ್ಳಬಹುದು. ನಮಗಿಂತ ಉತ್ತಮ ಸ್ಥಿತಿಯಲ್ಲಿರುವರೊಡನೆ ನಮ್ಮನ್ನು ಹೋಲಿಸಿಕೊಳ್ಳುವುದರಿಂದಲೂ, ನಮಗೆ ಬೇಕಾಗಿ, ಅಥವಾ ನಮ್ಮಲ್ಲಿ ಇಲ್ಲದೆ ಇರುವ ವಸ್ತುಗಳ ವಿಷಯವಾಗಿ ಸದಾ ಕಾಲ ಯೋಚಿಸುವುದರಿಂದಲೂ ನಮಗೆ ಅತೃಪ್ತಿಯುಂಟಾಗುವುದು. ತೃಪ್ತರಾಗಿರುವುದಕ್ಕೆ ಬಯಸುವರು ತಮ್ಮ ಸ್ಥಿತಿಯನ್ನು ತಮಗಿಂತ ಕೀಳಾದವರೊಡನೆ ಹೋಲಿಸಿಕೊಳ್ಳುವುದಕ್ಕೆ ಮನಸ್ಸುಮಾಡಬೇಕು. ತಮಗಿಂತ ಉತ್ತಮಪದವಿಯಲ್ಲಿರುವರೊಡನೆ ತಮ್ಮನ್ನು ಹೋಲಿಸಿಕೊಂಡರೆ ತಮ್ಮಲ್ಲಿರುವ ಕೊರತೆಗಳು ಸ್ಪಷ್ಟವಾಗಿ ಕಂಡುಬಂದು ಅತೃಪ್ತಿಗೆ ಕಾರಣವಾಗುವುದು.

ತೃಪ್ತಿಗೂ ಮಿತಿಯುಂಟು. ಅದನ್ನು ಮೀರಿದರೆ ಉಪೇಕ್ಷೆ, ಸೋಮಾರಿತನ, ಮುಂತಾದ ದುರ್ಗುಣಗಳು ಹುಟ್ಟುವುವು. ಹೀಗಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ. ಅತೃಪ್ತಿಯು ಅನೇಕರನ್ನು ಸೋಮಾರಿಗಳನ್ನಾಗಿ ಮಾಡಿ, ಅವರ ಏಳ್ಗೆಗೆ ಕುಂದನ್ನು ತಂದಿದೆ. ಐರಲಂಡುದೇಶದ ಒಕ್ಕಲಿಗರ ಅಧಮಸ್ಥಿತಿಗೆ ಅವರ ಅತೃಪ್ತಿಯೇ ಕಾರಣವಾಗಿರುವುದು. ಅತೃಪ್ತಿಯಿಂದ ಅನೇಕ ಹಾನಿಗಳಾಗುತ್ತವೆ.

"ನಾನಿರುವ ಸ್ಥಿತಿಗಿಂತ ಇನ್ನೂ ಕೆಟ್ಟ ಸ್ಥಿತಿಯಲ್ಲಿರಬಹುದಾಗಿತ್ತು. ಆದರೆ ದಯಾಸಾಗರನಾದ ದೇವರು ಹಾಗೆ ಮಾಡದೆ ಇಷ್ಟಾದರೂ ಕೊಟ್ಟಿದ್ದಾನೆಯಲ್ಲ? ಇದೇ ಸಾಕು"—ಎಂದು ಪ್ರತಿಯೊಬ್ಬನೂ ಯೋಚಿಸಿಕೊಂಡರೆ ಕೆಲವುಮಟ್ಟಿಗೆ ತೃಪ್ತಿ ದೊರೆವುದೆಂಬುದರಲ್ಲಿ ಸಂದೇಹವಿಲ್ಲ.

ಮರಣ

ಈ ಜಗತ್ತಿನಲ್ಲಿ ಹುಟ್ಟಿದ ಮನುಷ್ಯನು ಎಂದಾದರೂ ಒಮ್ಮೆ ಸಾಯಲೇ ಬೇಕು. ಹಣ್ಣಾದೆಲೆ ಎಂದಾದರೂ ಒಮ್ಮೆ ಉದುರಿ ಬೀಳಲೇ ಬೇಕು. ಎಂದ ಮೇಲೆ ಈ ನರದೇಹಕ್ಕೆ ಮರಣವು ತಪ್ಪುವುದು ಹೇಗೆ? ಬಾಲಕರು ಭೂತಪ್ರೇತಾದಿಗಳ ಕಥೆಯನ್ನು ಕೇಳಿ ಅಂಜುವಂತೆ ಮನುಷ್ಯರು ಮರಣಕ್ಕೆ ಅಂಜುತ್ತಾರೆ. ಆದರೆ ಮರಣಕ್ಕೆ ಭಯಪಡುವುದು ಕೇವಲಮೂಢತೆ.

ಪುಣ್ಯವಂತರು ಮೃತಪಟ್ಟರೆ ಅವರನ್ನು ಕರೆದೊಯ್ಯುವುದಕ್ಕೆ ಇಂದ್ರನು ತನ್ನ ವಿಮಾನವನ್ನು ಕಳುಹುತ್ತಾನೆಂತಲೂ, ಅಲ್ಲಿ ಹೋದ ತರುವಾಯ ಅವರಿಗೆ ನಾನಾ ವಿಧ ಶಾಶ್ವತವಾದ ಸುಖವು ದೊರೆವುದೆಂತಲೂ ನಮ್ಮಲ್ಲಿಯ ಭಾವುಕರು ತಿಳಿಯುತ್ತಾರೆ. ಆದರೆ ಇದೆಲ್ಲ ಮೂಢತನದ ಕಲ್ಪನೆ. ಇದರ ಅನುಭವವನ್ನು ಪಡೆಯಲಪೇಕ್ಷಿಸುವರು ತಾವು ಸ್ವತಃ ಸ್ವರ್ಗಸ್ಥರಾಗಿ ನೋಡಬೇಕು. ಮರಣದ ಸ್ವರೂಪವು ಬಹುಭಯಂಕರವಾದುದೆಂದು ಕೆಲವರೆನ್ನುವರು. ಕೆಲವರು ಅದು ಪಾಪಿಷ್ಠರಿಗೆ ಮಾತ್ರ ವೇದನೆಯನ್ನುಂಟುಮಾಡುವುದೆನ್ನುವರು. ಆದರೆ ಈ ಅಭಿಪ್ರಾಯಗಳಲ್ಲಿ ಏನೂ ಅರ್ಥವಿಲ್ಲ. ಏಕೆಂದರೆ ಎಷ್ಟೋ ಜನರು ಕುಳಿತಲ್ಲಿಯೇ ಪ್ರಾಣಬಿಡುವರು. ದೇವರ ಪೂಜೆಯನ್ನು ಮಾಡುವಾಗ್ಗೆ ಮರಣಪಟ್ಟಂಥ ಉದಾಹರಣೆಗಳು ಅನೇಕವುಂಟು. ಎಂದ ಮೇಲೆ ಈ ಪ್ರಕಾರದ ಮರಣಗಳಾಗುವಾಗ ವೇದನೆಯೆಲ್ಲಿಂದ?

“ಮಾನಹಾನಿಯಾಗಿ ಬದುಕುವುದಕ್ಕಿಂತ ಸಾವುದೇ ಲೇಸು” ಎಂಬ ಗಾದೆಯನ್ನು ಸಮಸ್ತರೂ ಕೇಳಿರಬಹುದು. ಒಮ್ಮೊಮ್ಮೆ ಜನರು ತಮಗೆ ಮಾನಹಾನಿಯಾದುದನ್ನು ನೋಡಿ ಆತ್ಮಹತ್ಯೆಯನ್ನಾಗಲೀ ಇಲ್ಲವೆ ವಿಷಪ್ರಯೋಗವನ್ನಾಗಲೀ ಮಾಡಿಕೊಳ್ಳುವರು. ಈ ಪ್ರಕಾರ ಮರಣಪಟ್ಟ ಉದಾಹರಣೆಗಳೂ ಅನೇಕವುಂಟು.

ಹುಟ್ಟುವುದು ನೈಸರ್ಗಿಕಧರ್ಮವಿರುವಂತೆ ಸಾವುದೂ ನೈಸರ್ಗಿಕಧರ್ಮವೆಂಬ ಮಾತು ಲಕ್ಷ್ಯದಲ್ಲಿರಬೇಕು.

ಬ್ರಹ್ಮಚರ್ಯ

ಸಾಂಪ್ರತಕಾಲಕ್ಕೆ ಹಿಂದುಸ್ಥಾನದ ಜನರ ವಯೋಮಾನದ ಕಡೆಗೆ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ದೀರ್ಘಾಯುಷಿಗಳಾದ ಜನರು ತೀರ ಕಡಿಮೆಯೆಂದು

ಕಂಡುಬರುತ್ತದೆ. ಪೂರ್ವಕಾಲದ ಸಂಗತಿಯನ್ನು ಬಿಟ್ಟು, ಸುಮಾರು ನೂರು ವರ್ಷಗಳ ಹಿಂದಿನ ಸ್ಥಿತಿಯನ್ನು ನೋಡಿದರೂ, ಆ ಕಾಲಕ್ಕೆ ದೀರ್ಘಾಯುಷಿಗಳಾದ ಜನರು ಸಮಾಜದಲ್ಲಿ ಹೆಚ್ಚಿದ್ದುದು ಕಂಡುಬರುವುದು.

ನಮ್ಮ ಜನರ ವಯೋಮಾನವು ದಿನದಿನಕ್ಕೆ ಕಡಿಮೆಯಾಗುತ್ತ ನಡೆದಿರುವು ದಕ್ಕೆ ಕೆಲವು ಸಂಗತಿಗಳು ಅಂಶತಃ ಕಾರಣವಾಗಿದ್ದರೂ, ಬ್ರಹ್ಮಚರ್ಯಾಶ್ರಮದ ಅಭಾವವು ಒಂದು ಬಲವಾದ ಕಾರಣವಾಗಿರುತ್ತದೆಂದು ಬೇರೆ ಹೇಳುವ ಕಾರಣವಿಲ್ಲ.

ಮನುಷ್ಯಪ್ರಾಣಿ ೧೫-೧೬ ವರುಷದವನಾಗುತ್ತಲೇ ಆತನ ಶರೀರದಲ್ಲಿ ಜೀವ ಕಣಗಳು ಪಸರಿಸತೊಡಗುತ್ತವೆ. ಈ ಜೀವಕಣಗಳಿಗೆ ಧಾತು, ಶುಕ್ರ, ರೇತಸ್ ಮುಂತಾದ ಹೆಸರುಗಳುಂಟು. ಈ ಜೀವಕಣಗಳು ಅತ್ಯಂತ ಅಮೂಲ್ಯವಾದ ವಸ್ತುಗಳಾದುದರಿಂದ ಅಯೋಗ್ಯಕಾಲಕ್ಕೆ ಅದನ್ನು ವ್ಯಯಮಾಡುವುದು ಆರೋಗ್ಯಕ್ಕೆ ಅತ್ಯಂತಹಾನಿಕರವಾದ ಸಂಗತಿಯಾಗಿದೆ. ಎಲ್ಲ ತರದ ಮಾನಸಿಕ ಹಾಗೂ ಶಾರೀರಕಶಕ್ತಿಯನ್ನು ಬಳೆಯಿಸಲಿಚ್ಛಿಸುವವನು ಬ್ರಹ್ಮಚರ್ಯವನ್ನು ಬಹುದಕ್ಷತೆಯಿಂದ ಕಾಯ್ದುಕೊಳ್ಳಬೇಕು.

ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳುವುದು ಅವಶ್ಯವೆಂದು—ಆಜನ್ಮಸ್ತ್ರೀಪರಾಙ್ಮುಖರಾಗಿರಬೇಕೆಂದು, ನಾವು ಹೇಳುವುದಿಲ್ಲ. ಜಿತೇಂದ್ರಿಯರಾಗಿ ಇಡೀ ಜನ್ಮವನ್ನು ಸನ್ಯಾಸಿಗಳಂತೆ ಕಳೆಯಬೇಕೆಂದೂ ನಾವು ಹೇಳುವುದರ ಉದ್ದೇಶವಿಲ್ಲ. ಗೃಹಸ್ಥಾಶ್ರಮಿಗಳಾಗಿ ಪ್ರಾಪಂಚಿಕಸುಖವನ್ನನುಭವಿಸಬೇಕೆಂಬ ಹೇತುವಿನಿಂದ ಪರಮೇಶ್ವರನು ಸ್ತ್ರೀಪುರುಷಜಾತಿಯನ್ನು ನಿರ್ಮಿಸಿರುವನು. ಆದರೆ ಗೃಹಸ್ಥಾಶ್ರಮದಲ್ಲಿಯೂ ಸ್ತ್ರೀ ಸಂಬಂಧವಾದ ಸುಖವನ್ನು ಮನುಷ್ಯನೆಷ್ಟು ಪಡೆಯಬೇಕೆಂಬುದು ಸೃಷ್ಟಿನಿಯಮದಿಂದ ಮರ್ಯಾದಿತವಾಗಿದೆ. ಆ ಮರ್ಯಾದೆಯಲ್ಲಿಯೇ ನಾವು ಇರತಕ್ಕುದುಚಿತವು. ಬ್ರಹ್ಮಚರ್ಯಾಶ್ರಮದ ಉಲ್ಲಂಘನೆಯಿಂದಾಗುವ ಹಾನಿಗಳನ್ನು ಲಕ್ಷ್ಯಕ್ಕೆ ತಂದರೆ, ನಮ್ಮ ಪ್ರಿಯವಾಚಕರಿಗೆ ಬ್ರಹ್ಮಚರ್ಯೆಯ ಮಹತ್ವವು ಸಹಜವಾಗಿ ತಿಳಿಯುವಂತಿದೆ. ಬ್ರಹ್ಮಚರ್ಯಾಭಾವದಿಂದ ಮೈಯಲ್ಲಿ ಅಶಕ್ತತೆ, ಉತ್ಸಾಹಹೀನತೆ, ಕ್ಷುಧಾಮಾಂದ್ಯ, ಹ್ರಸ್ವದೃಷ್ಟಿ ಮುಂತಾದ ಅನೇಕ ವಿಕಾರಗಳುಂಟಾಗುವುವು. ಒಮ್ಮೊಮ್ಮೆ ಈ ಅತಿಕ್ರಮಣವು ಹೆಚ್ಚಾದರೆ ಪ್ರಮೇಹಾದಿ ಭಯಂಕರ ರೋಗಗಳಾಗುವುವು.

ಬ್ರಹ್ಮಚರ್ಯೆಯನ್ನು ಪಾಲಿಸಿದವನ ಶರೀರದಲ್ಲಿ ಹೆಚ್ಚಾಗಿ ರಕ್ತವನ್ನುಂಟುಮಾಡುವ ಸಾಮರ್ಥ್ಯವು ಪ್ರಾಪ್ತವಾಗುವುದರಿಂದಲೂ, ಜೀವಕಣಗಳು ಮಿತಿವಿಾರಿ ಬಳೆಯುವುದರಿಂದಲೂ, ಮಿದುಳು ಬಲವುಳ್ಳುದಾಗಿ ದೀರ್ಘಾಯುಷಿಯಾಗು

ತ್ತಾನೆ. ಬಲವಾದ ಮಿದುಳೇ ಮೇಲಾದ ಬುದ್ಧಿಸಾಮರ್ಥ್ಯದ ಆಧಾರವಾಗಿರುವುದು. ಶಂಕರಾಚಾರ್ಯ, ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ ಮೊದಲಾದವರಿಗೆ ತಮ್ಮ ಅಲೌಕಿಕಸಾಮರ್ಥ್ಯವನ್ನು ತೋರುವ ಶಕ್ತಿ ಹೇಗೆ ಪ್ರಾಪ್ತವಾಯಿತು? ೩೦ ವರ್ಷದೊಳಗಾಗಿ ವೇದಾಂತದಂಥ ಗಹನವಿಷಯದ ಮೇಲೆ ನೂರಾರು ಗ್ರಂಥಗಳನ್ನು ಬರೆಯುವ ಸಾಮರ್ಥ್ಯವು ಶಂಕರಾಚಾರ್ಯರಿಗೆ ಬಂದುದರ ಮರ್ಮವೇನು? ಅರ್ವಾಚೀನಶಾಸ್ತ್ರಜ್ಞರಲ್ಲಿ ಅಗ್ರಣಿಯಾದ ಎಡಿಸನು ನೂರಾರು ಶೋಧಗಳನ್ನು ಏತರ ಬಲದಿಂದ ಮಾಡಿದನು? ಉತ್ತರವೇನೆಂದರೆ— "ಬ್ರಹ್ಮಚರ್ಯ", "ಬ್ರಹ್ಮಚರ್ಯ".

ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳಲಿಚ್ಛಿಸುವರು ಕೆಳಗೆ ಬರೆದ ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದು. ವಿದ್ಯಾರ್ಥಿಗಳಂತೂ ಈ ಸಂಗತಿಗಳ ಕಡೆಗೆ ವಿಶೇಷ ಜಾಗರೂಕರಾಗಿರಬೇಕು.

(೧) ಲಗ್ನವಾಗಿ ಯೋಗ್ಯಕಾಲಕ್ಕೆ ಗರ್ಭಾಧಾನವಾಗುವ ವರೆಗೆ ಮೂತ್ರೋತ್ಸರ್ಗದ ಹೊರತು ಯಾವ ಕಾರಣದಿಂದಲೂ ಜನನೇಂದ್ರಿಯವನ್ನು ಸ್ಪರ್ಶ ಮಾಡಬಾರದು.

(೨) ಶೃಂಗಾರವಿಷಯಸಂಬಂಧವಾದ ವಿಚಾರಗಳನ್ನಾಗಲೀ, ವಾಗ್ವಾದಗಳನ್ನಾಗಲೀ ಮಾಡಬಾರದು. ಪರಸ್ತ್ರೀಯರನ್ನು ಕಾಮವಾಸನೆಯಿಂದ ನೋಡಬಾರದು.

(೩) ಸಾಯಂಕಾಲದಲ್ಲಿ ಸಾಕಷ್ಟು ವ್ಯಾಯಾಮವನ್ನು ಸ್ವಚ್ಛವಾದ ಹವೆಯಲ್ಲಿ ಮಾಡಬೇಕು. ವ್ಯಾಯಾಮದಿಂದ ಮನುಷ್ಯನು ಸಶಕ್ತನಾಗಿ ತಾರುಣ್ಯವು ತಡವಾಗಿ ಪ್ರಾಪ್ತವಾಗುತ್ತದೆ. ವ್ಯಾಯಾಮದಿಂದ ಬ್ರಹ್ಮಚರ್ಯೆಯ ರಕ್ಷಣವಾಗುತ್ತದೆ.

(೪) ಕಾಮೋತ್ತೇಜಕವಾದ ಆಹಾರವನ್ನು ಸೇವಿಸಬಾರದು. ಚಟ್ನಿ, ಮಸಾಲೆ, ಚಹಾ, ತಂಬಾಕು, ಮದ್ಯ ಮುಂತಾದುವುಗಳನ್ನು ಮುಖ್ಯವಾಗಿ ವಿದ್ಯಾರ್ಥಿಗಳು ತ್ಯಜಿಸಬೇಕು.

(೫) ರಾತ್ರಿಯಲ್ಲಿ ಊಟವಾದ ಕೂಡಲೇ ಮಲಗಬಾರದು. ಊಟವಾದ ತರುವಾಯ ಎರಡು ತಾಸು ಎಚ್ಚರವಾಗಿದ್ದು ಆ ಮೇಲೆ ಮಲಗಲಿಕ್ಕೆ ಹೋಗಬೇಕು. ಬೇಗನೆ ಮಲಗಿದರೆ ಪಚಸಕ್ರಿಯೆ ಸಾಗುವುದಿಲ್ಲ. ಊಟವಾದ ಕೂಡಲೇ ಮಲಗಿದರೆ ಸ್ವಪ್ನಾವಸ್ಥೆಯ ಸಂಭವವಿದೆ.

ಮೇಲೆ ಹೇಳಿದ ರೀತಿಯಂತೆ ಬ್ರಹ್ಮಚರ್ಯೆಯನ್ನು ಕಾಯ್ದುಕೊಳ್ಳಲಿಚ್ಛಿಸುವರು ತಮ್ಮ ಜನ್ಮವನ್ನು ಸುಖಸಮಾಧಾನದಿಂದ ಕಳೆವರೆಂಬುದರಲ್ಲಿ ಸಂದೇಹವಿಲ್ಲ.

ಗೃಹಶಿಕ್ಷಣ

"ಶಿಕ್ಷಣವನ್ನು ಕೊಡದಿರುವ ತಾಯಿತಂದೆಗಳು ತಮ್ಮ ಮಕ್ಕಳ ವೈರಿಗಳು. ರಾಜ ಹಂಸಪಕ್ಷಿಗಳ ಮಧ್ಯದಲ್ಲಿ ಬಕಪಕ್ಷಿಯು ಹ್ಯಾಗೆ ಶೋಭಿಸದೋ ಹಾಗೆಯೇ ವಿದ್ವಾನಜನರ ಸಭೆಯಲ್ಲಿ ಮೂರ್ಖರಾದ ಮಕ್ಕಳು ಶೋಭಿಸರು. ಆದ್ದರಿಂದ ತಾಯಿತಂದೆಗಳು ತಮ್ಮ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಬೇಕು." —ಹಿತೋಪದೇಶ.

ಇಹಲೋಕದಲ್ಲಿ ಮನುಷ್ಯನು ತನ್ನ ಜನ್ಮದ ಸಾರ್ಥಕ್ಯವನ್ನು ಮಾಡಿ ಮುಂದೆ ಪರಲೋಕದಲ್ಲಿ ಮೋಕ್ಷವನ್ನು ಪಡೆಯಬೇಕು ಎಂದು ನಮ್ಮ ಪ್ರಾಚೀನ ಗ್ರಂಥಗಳು ಹೇಳುತ್ತವೆ. ದೇವರು ನಮಗೆ ಮನುಷ್ಯಜನ್ಮವನ್ನು ಕೊಟ್ಟದ್ದು ಕೇವಲ ಸುಖಕ್ಕಾಗಿ ಅಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷ, ಈ ಚತುರ್ವಿಧಪುರುಷಾರ್ಥಗಳನ್ನು ಸಂಪಾದಿಸಿ ನಾವು ಈ ನಮ್ಮ ನರದೇಹದ ಸಾರ್ಥಕ್ಯವನ್ನು ಮಾಡಬೇಕು. ಹೀಗೆ ಮಾಡದಿದ್ದರೆ ನಾವು ದೇವರಿಗೆ ಒಂದು ಬಗೆಯಿಂದ ದ್ರೋಹಚಿಂತನಮಾಡಿದಂತಾಗುವುದು. ಮೇಲೆ ಹೇಳಿದ ರೀತಿಯಂತೆ ತಮ್ಮ ದೇಹದ ಸಾರ್ಥಕ್ಯವನ್ನು ಮಾಡಿಕೊಳ್ಳಲಿಚ್ಛಿಸುವರು ದೇವರಲ್ಲಿ ಭಕ್ತಿಯನ್ನಿಟ್ಟು ಶ್ಲಾಘ್ಯವಾದ ಆಚರಣೆಯಿಂದ ನಡೆಯಬೇಕು.

ಮನುಷ್ಯನ ಮನಸ್ಸಿನಲ್ಲಿ ಶ್ಲಾಘ್ಯವಾದ ಆಚರಣೆಯ ಅಥವಾ ಸದಾಚಾರದ ಮೂಲತತ್ವಗಳು ಪೂರ್ಣವಾಗಿ ಬಿಂಬಿಸಬೇಕಾದರೆ ಮನೆಯೇ ಎಲ್ಲಕ್ಕೂ ಮೊದಲ ಮಹತ್ವವುಳ್ಳ ಶಾಲೆ. ಈ ಶಾಲೆಯಲ್ಲಿಯೇ ಮನುಷ್ಯನು ಸದಾಚಾರದ ಇಲ್ಲವೆ ದುರಾಚಾರದ ತತ್ವಗಳನ್ನು ಕಲಿಯುವುದುಂಟು. ಈ ಮೂಲತತ್ವಗಳು ಆತನು ಬದುಕಿರುವ ವರೆಗೂ ಬಾಳುವುವು.

ಮನುಷ್ಯನ ದುರಾಚಾರದ ತತ್ವಗಳನ್ನು ಹೋಗಲಾಡಿಸುವುದಕ್ಕೆ "ಗೃಹಶಿಕ್ಷಣ"ವು ಮೇಲಾದ ಉಪಾಯವಾಗಿರುತ್ತದೆ. "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ" ಎಂಬ ಗಾದೆಯೂ ಗೃಹಶಿಕ್ಷಣದ ಮಹತ್ವವನ್ನೇ ಹೇಳುತ್ತದೆ.

ಮನುಷ್ಯರು ಮಾಡುವ ಯೋಗ್ಯಾಯೋಗ್ಯಕಾರ್ಯಗಳು ಅವರಿಗೆ ದೊರೆದ ಗೃಹಶಿಕ್ಷಣವನ್ನೇ ಅವಲಂಬಿಸಿರುವುವು. ಆದುದರಿಂದ ತಾಯಿತಂದೆಗಳು ತಮ್ಮ ಮಕ್ಕಳಿಗೆ ಚಿಕ್ಕಂದೇ ಗೃಹಶಿಕ್ಷಣವನ್ನು ಯೋಗ್ಯರೀತಿಯಿಂದ ಕೊಡತಕ್ಕದು. ಏಕೆಂದರೆ ಬಾಲ್ಯಾವಸ್ಥೆಯೇ ಸದ್ವರ್ತನವನ್ನು ನಾಟುವುದಕ್ಕೆ ಯೋಗ್ಯವಾದ ಕಾಲವು. ಈ ಸಮಯದಲ್ಲಿ ಅವರ ಸ್ವಭಾವವು ಬಹುಕೋಮಲವಾದುದರಿಂದ ಅವರು ಹೇಳಿದ ಪ್ರಕಾರ ನಡೆದುಬಿಡುವರು. ಆದರೆ ದೊಡ್ಡವರಾದ ಮೇಲೆ ಅವರ ಬುದ್ಧಿ ವಿದ್ಯೆಯಿಂದ ಎಷ್ಟು ಸಂಸ್ಕೃತವಾದರೂ ಅವರ ಚಿಕ್ಕಂದಿನ ಸ್ವಭಾವವು ಬಹುತರ ಬದಲಾಗದು.

ಹುಡುಗರು ಒಳ್ಳೆಯವರಾಗಬೇಕಾದರೆ ಅವರಿಗೆ ಒಳ್ಳೆಯ ಮಾದರಿಯನ್ನು ಅವರ ಪಾಲಕರು ಹಾಕಿಕೊಡಲೇ ಬೇಕು. ಹೀಗೆ ಮಾಡುವುದರಿಂದ ಹುಡುಗರು ಸುಸ್ವಭಾವದವರೂ, ಸುವಿಚಾರಿಗಳೂ, ಸದಾಚಾರಿಗಳೂ ಆಗುವರು. ಯಾವ ಮನೆಯಲ್ಲಿ ಜನರು ಪರಸ್ಪರಪ್ರೇಮದಿಂದಲೂ, ಸದ್ವರ್ತನದಿಂದಲೂ ನಡೆಯುವು ದಿಲ್ಲವೋ ಆ ಮನೆಯ ಮಕ್ಕಳು ಕುವಿಚಾರಿಗಳೂ, ದುರಾಚಾರಿಗಳೂ ಆಗುವರು. ಇದನ್ನು ನಾವು ಬೇರೆ ಹೇಳುವ ಕಾರಣವಿಲ್ಲ. ಯಾವ ಹುಡುಗರೇ ಆಗಲಿ, ಅವರಿಗೆ ಒಳ್ಳೆಯ ಇಲ್ಲವೆ ಕೆಟ್ಟ ಗೃಹಶಿಕ್ಷಣವು ದೊರೆಯುವುದು ವಾಡಿಕೆಯಾಗಿ ಅವರ ಮನೆ ಯೊಳಗಣ ಮುಖ್ಯಜನರ ವರ್ತನವನ್ನು ಅವಲಂಬಿಸಿರುತ್ತದೆಂಬ ಮಾತನ್ನೆಲ್ಲರೂ ಲಕ್ಷ್ಯದಲ್ಲಿಡಬೇಕು.

ಪರಲೋಕವಾಸಿಯಾದ ಗೋಪಾಲ ಕೃಷ್ಣ ಗೋಖಲೆಯವರು

ಸ್ವಾರ್ಥವನ್ನು ತ್ಯಜಿಸಿ, ನಿರ್ಮಲವಾದ ಮನಸ್ಸಿನಿಂದ ತಮ್ಮ ದೇಶದ ಹಿತಕ್ಕಾ ಗಿಯೇ ಹಗಲಿರುಳೂ ಹೆಣಗುತ್ತಿದ್ದ ಗೋಪಾಲ ಕೃಷ್ಣ ಗೋಖಲೆ ಎಂಬ ಈ ದೇಶ ಭಕ್ತರು ೧೯೧೫ನೆಯ ಇಸವಿಯ ಫೇಬ್ರವರಿ ೧೯ನೆಯ ದಿನ ರಾತ್ರಿಯಲ್ಲಿ ಈ ನಶ್ವರ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಪ್ರಯಾಣಮಾಡಿದರೆಂಬ ಹೃದಯದ್ರಾವಕವಾದ ವಾರ್ತೆಯನ್ನು ಸಮಸ್ತರೂ ಕೇಳಿರಬಹುದು. ಇವರ ಅಕಾಲಮರಣದಿಂದ ಆಸೇತು ಹಿಮಾಲಯವ್ಯಾಪಿಯಾದ ಭರತಖಂಡವೇ ಕಣ್ಣೀರುಬಿಟ್ಟಿತು. ಈ ಮಹನೀಯರ ಚರಿತ್ರವು ಸಮಸ್ತ ಭಾರತೀಯರಿಗೆ ಆದರ್ಶಪ್ರಾಯವಾಗಿರುವುದರಿಂದ ಅದನ್ನಿಲ್ಲಿ ನಮ್ಮ ಪ್ರಿಯವಾಚಕರಿಗಾಗಿ ಬರೆಯತೊಡಗುವೆವು.

ಈ ನಮ್ಮ ಚರಿತ್ರನಾಯಕರು ರತ್ನಾಗಿರಿಜಿಲ್ಹೆಯೊಳಗಣ ಕಾತುಳಕವೆಂಬ ಸಣ್ಣ ಹಳ್ಳಿಯೊಳಗೆ ಸನ್ ೧೮೬೬ನೆಯ ಇಸವಿಯ ಮೇ ತಿಂಗಳಲ್ಲಿ ಹುಟ್ಟಿದರು. ಇವರ ತಾಯಿತಂದೆಗಳು ಬಡವರು. ತಂದೆಯವರಾದ ಕೃಷ್ಣರಾಯರು ಕಾಗಲ ವೆಂಬ ಊರಿನ ಫೌಜುದಾರರಾಗಿದ್ದರು. ಆದರೆ ಈ ಕೆಲಸವನ್ನು ಕೈಕೊಂಡ ೫ನೆಯ ವರ್ಷಕ್ಕೆ ಇವರು ದುರ್ದೈವದಿಂದ ಕೈಲಾಸವಾಸಿಗಳಾದರು. ಮರಣಸಮಯಕ್ಕೆ ಕೃಷ್ಣರಾಯರು ೪೬ ವರುಷದವರು.

ಗೋಪಾಲರಾಯರು ಮೊದಲು ಕಾಗಲದೊಳಗಣ ಮರಾಠೀಶಾಲೆಯಲ್ಲಿ ತಮ್ಮ ಪ್ರಾಥಮಿಕಶಿಕ್ಷಣವನ್ನು ಮುಗಿಸಿ ಅಲ್ಲಿಂದ ಕೊಲ್ಹಾಪುರಕ್ಕೆ ಇಂಗ್ಲಿಷು ಕಲಿ ಯುವ ಉದ್ದೇಶದಿಂದ ಬಂದರು. ಮುಂದೆ ಅಲ್ಲಿ ಅವರು ೧೮೮೧ನೆಯ ಇಸವಿಯಲ್ಲಿ ಮೆಟ್ರಿಕ್ಯುಲೇಶನ್‌ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಮೇಲೆ ಪುಣೆಯಲ್ಲಿರುವ

ಡೆಕ್ಕನ್ ಕಾಲೇಜಿನಲ್ಲಿಯೂ ಅನಂತರ ಕೆಲವುಕಾಲ ಬೊಂಬಾಯಿ ನಗರದಲ್ಲಿರುವ ಎಲ್ ಫಿನ್ ಸ್ಟನ್ ಕಾಲೇಜಿನಲ್ಲಿಯೂ ಓದಿ ೧೮೮೪ರಲ್ಲಿ ಬಿ. ಎ. ಡಿಗ್ರಿಯನ್ನು ಸಂಪಾದಿಸಿದರು. ಮುಂದೆ ೧೮೮೫ನೆಯ ಇಸವಿಯಲ್ಲಿ ಇವರು ಪುಣೆಯಲ್ಲಿರುವ ಒಂದು ಶಿಕ್ಷಣಾಲಯದ ಮುಖ್ಯೋಪಾಧ್ಯಾಯರಾದರು. ೧೮೮೭ನೆಯ ಸಪ್ಟಂಬರು ತಿಂಗಳಲ್ಲಿ ಅಂಕಗಣಿತವೆಂಬ ಒಂದು ಪುಸ್ತಕವನ್ನು ಇಂಗ್ಲಿಷು ಭಾಷೆಯಲ್ಲಿ ಬರೆದರು. ಈ ಅಂಕಗಣಿತದ ಕನ್ನಡಭಾಷಾಂತರವನ್ನೂ, ಮರಾಠಿ ಭಾಷಾಂತರವನ್ನೂ ಈಗ ಬಹುತರವಾಗಿ ಎಲ್ಲ ವಿದ್ಯಾರ್ಥಿಗಳ ಕೈಯಲ್ಲಿಯೂ ನೋಡಬಹುದಾಗಿದೆ. ಮುಂದೆ ಇವರು ಫರ್ಗುಸನ್ ಕಾಲೇಜಿನಲ್ಲಿ ಗಣಿತ ವಿಷಯದ ಉಪಾಧ್ಯಾಯರಾಗಿ ಸೇರಿದರು. ಅಲ್ಲಿ ಇವರಿಗೆ ೭೫ ರೂ. ಸಂಬಳವು ದೊರೆಯುತ್ತಿತ್ತು. ಇದೇ ಸಂಬಳದ ಮೇಲೆ ಇವರು ಸುಮಾರು ೨೦ ವರ್ಷದ ವರೆಗೆ ಏಕ ನಿಷ್ಠೆಯಿಂದ ಅಲ್ಲಿಯೇ ಕೆಲಸ ಮಾಡಿದರು.

೧೮೯೭ನೆಯ ಇಸವಿಯಲ್ಲಿ ಲಾರ್ಡ್ ವೆಲ್ಬಿ ಎಂಬರ ಅಧ್ಯಕ್ಷತೆಯಿಂದ ನೇಮಿಸಲ್ಪಟ್ಟ ಕಮಿಶನಿನ ಮುಂದೆ ಹಿಂದುಸ್ಥಾನದ ಜಮಾಖರ್ಚಿನ ಸಾಕ್ಷ್ಯವನ್ನು ಕೊಡುವ ಬಗ್ಗೆ ಗೋಪಾಲರಾಯರು ವಿಲಾಯತಿಗೆ ಹೋಗಬೇಕಾಯಿತು ಅಲ್ಲಿ ಎಷ್ಟೋ ವಿದ್ವಾಂಸರು ಗೋಪಾಲರಾಯರ ವಿದ್ವತ್ತೆಯನ್ನು ನೋಡಿ ಆಶ್ಚರ್ಯಚಕಿತರಾದರು.

ಮುಂದೆ ೧೯೦೨ನೆಯ ಇಸವಿಯ ಕಡೆಯ ಭಾಗದಲ್ಲಿ ಗೋಪಾಲರಾಯರು ಫರ್ಗುಸನ್ ಕಾಲೇಜಿನ ಶಿಕ್ಷಕೋದ್ಯೋಗದಿಂದ ನಿವೃತ್ತರಾದರು. ಅಲ್ಲಿಂದ ಅವರು ಸುಮಾರು ೧೩ ವರುಷಗಳ ವರೆಗೆ ಎಂದರೆ ೧೯೧೫ನೆಯ ಇಸವಿಯ ವರೆಗೆ ಅನೇಕ ಲೋಕಹಿತಕಾರ್ಯಗಳನ್ನು ಮಾಡಿದುದು ಎಲ್ಲರಿಗೂ ವಿದಿತವಾದ ಸಂಗತಿ. ಅದನ್ನು ಈ ಚಿಕ್ಕ ಪುಸ್ತಕದಲ್ಲಿ ವರ್ಣಿಸಲು ಸ್ಥಳವಿಲ್ಲ.

ಗೋಖಲೆಯವರು ಒಳ್ಳೆಯ ಬುದ್ಧಿಶಾಲಿಗಳೂ ರಾಜಕಾರ್ಯಧುರಂಧರರೂ ಸ್ವಾರ್ಥತ್ಯಾಗಿಗಳೂ ಆಗಿದ್ದರು. ತಮಗೆ ಸತ್ಯವೆಂದು ತೋರಿದ ಮಾತಿನಲ್ಲಿ ಅವರು ಅಸ್ಥಿರ ವಿಚಾರಗಳಿಗೆ ಸರ್ವಥಾ ಈಡಾಗುತ್ತಿದ್ದಿಲ್ಲ. ಅವರಷ್ಟು ದೀರ್ಘೋದ್ಯೋಗಿಗಳನ್ನು ಕಾಣುವುದು ದುರ್ಲಭ!! ಅವರ ಆಚರಣೆ ಶುದ್ಧವಾದುದು. ಅವರ ರಾಜಕಾರ್ಯಪಟುತ್ವದ ಅನುಭವವು ಪ್ರತ್ಯಕ್ಷವಾಗಿ ಲಾರ್ಡ್ ಕರ್ಜನರಂಥ ಮಹಾಧಿಕಾರಿಗಳಿಗೆ ತಟ್ಟಿರಲು ಮಿಕ್ಕವರ ಮಾತೇನು? ಅವರ ವಕ್ತೃತ್ವಶಕ್ತಿ ವಿಲಕ್ಷಣವಾದುದು. ಇಂಥ ಮಹಾತ್ಮರಿಗೆ ದೇವರು ಪರಲೋಕದಲ್ಲಿ ಶಾಶ್ವತಸುಖವನ್ನು ದಯೆಪಾಲಿಸಲಿ!

ಹಾಸ್ಯವಿನೋದ.

"Laugh and grow fat"

(An Italian proverb.)

೧. ವಿಷಯಾಭಿಲಾಷೆಯೆಂಬ ರೋಗಕ್ಕೆ ಔಷಧ.

ಎರಡು ದ್ರಾಮುಗಳ "ತಿರಸ್ಕಾರ"ವನ್ನೂ ಒಂದು ಔನ್ಸು "ನಿಷ್ಕರ್ಷೆ"ಯನ್ನೂ ಹನ್ನೆರಡು ಗ್ರೇನುಗಳ "ಸ್ವಾಭಾವಿಕಬುದ್ಧಿ"ಯನ್ನೂ ಎರಡು ಔನ್ಸು "ಅನುಭವ" ವನ್ನೂ ಬೆರೆಯಿಸಿ, ಆರು ಔನ್ಸು "ಯೋಚನೆ" ಎಂಬ ಸ್ವಚ್ಛವಾದ ನೀರಿನಲ್ಲಿ ಮೇಲೆ ಬರೆದ ವಸ್ತುಗಳನ್ನು ಸೇರಿಸಿ, ಆ ನೀರನ್ನು ಕಡೆಗೆ "ಆತ್ಮಸಂಯಮನ" ಎಂಬ ಬಟ್ಟಲಲ್ಲಿ ಸುರಿದು ಬಟ್ಟಲನ್ನು "ಪ್ರೇಮ"ವೆಂಬ ಬೆಂಕಿಯಲ್ಲಿ ಕಾಯಿಸಿ ಉಕ್ಕಿಬರುವ ನೊರೆಯನ್ನು ತೆಗೆದು "ಶ್ರದ್ಧೆ"ಯೆಂಬ ಸಕ್ಕರೆಯನ್ನು ಹಾಕಿ ಮುಂದೆ ಅದನ್ನು "ಪಾಪ ಭೀತಿ"ಯೆಂಬ ವಸ್ತ್ರದಿಂದ ಶೋಧಿಸಿ ಮನಃಪೂರ್ವಕವಾಗಿ ಏಳು ದಿವಸಗಳ ವರೆಗೆ ಸೇವಿಸಿದರೆ "ವಿಷಯಾಭಿಲಾಷೆ"ಯೆಂಬ ಭಯಂಕರವ್ಯಾಧಿ ಖಂಡಿತವಾಗಿಯೂ ನಷ್ಟವಾಗುವುದು. ಇದರ ಅನುಭವವನ್ನು ಪ್ರತಿಯೊಬ್ಬನೂ ತೆಗೆದುಕೊಳ್ಳಬೇಕು.

---

೨ ದುಡ್ಡಿನ ಮಹತ್ವ.

ಮನುಷ್ಯನು ಯಾವ ಸ್ಥಿತಿಯಲ್ಲಿಯೇ ಇರಲಿ, ಯಾವ ಉದ್ಯೋಗವನ್ನೇ ಮಾಡಲಿ,—ದುಡ್ಡಿಲ್ಲದೆ ಅವನಿಂದ ಯಾವ ಕಾರ್ಯವೂ ಆಗುವುದಿಲ್ಲ. ದುಡ್ಡನ್ನು ಇಚ್ಛಿಸದೆ ಇದ್ದವರು ಈ ಭೂಮಂಡಲದಲ್ಲಿ ಬಹುವಿರಳ. ಪ್ರತಿಯೊಬ್ಬನೂ ನಾಲ್ಕು ದುಡ್ಡನ್ನು ಹ್ಯಾಗೆ ಸಂಪಾದಿಸಲಿ ಎಂಬ ಚಿಂತೆಯಲ್ಲಿಯೇ ಸರ್ವದಾ ನಿರತನಾಗಿದ್ದಾನೆ. ಶಿಕ್ಷಕನಿಗೆ ದುಡ್ಡಿನ ಚಿಂತೆ, ಶಿಷ್ಯನಿಗೆ ದುಡ್ಡಿನ ಚಿಂತೆ; ಹರಿದಾಸರಿಗೆ ದುಡ್ಡಿನ ಚಿಂತೆ, ಪುರಾಣಿಕರಿಗೆ ದುಡ್ಡಿನ ಚಿಂತೆ; ಶ್ರೀಮಂತನಿಗೆ ದುಡ್ಡಿನ ಚಿಂತೆ, ಬಡವನಿಗೆ ದುಡ್ಡಿನ ಚಿಂತೆ; ವೈದ್ಯನಿಗೆ ದುಡ್ಡಿನ ಚಿಂತೆ, ರೋಗಿಗೆ ದುಡ್ಡಿನ ಚಿಂತೆ:—ಹೀಗೆ ಪ್ರತಿಯೊಬ್ಬನಿಗೂ ದುಡ್ಡಿನ ಚಿಂತೆ ಇದ್ದ ಮೂಲಕ ಪ್ರಸ್ತುತಕಾಲಕ್ಕೆ ದುಡ್ಡಿಗೆ ದೇವರಿಗಿಂತಲೂ ಹೆಚ್ಚು ಮಹತ್ವವನ್ನು ಕೊಡತೊಡಗಿದ್ದಾರೆ. ಏಕೆಂದರೆ ಪೂರ್ವಕಾಲದಲ್ಲಿ ಯಾವುದಾದರೊಂದು ಕಾರ್ಯದ ಆರಂಭದಲ್ಲಿ ವಿಘ್ನನಿವಾರಣಕ್ಕಾಗಿ ಗಣಪತಿಯನ್ನು ಪೂಜಿಸುತ್ತಿದ್ದರು. ಆದರೆ ಈಗ ಎಲ್ಲ ವಿಘ್ನಗಳೂ ದುಡ್ಡಿನಿಂದ ಪರಿಹಾರವಾಗುವುವೆಂದು ನಾವು ತಿರಿಗಿ ಹೇಳುವ ಅವಶ್ಯವಿಲ್ಲ.

---

೩ ಯೋಗ್ಯಸೂಚನೆ.

ತುಂಗಾತೀರದಲ್ಲಿ ಕಾಂತಪ್ಪನೆಂಬ ಒಬ್ಬ ವೇದಶಾಸ್ತ್ರಜ್ಞನ ಬಳಿಯಲ್ಲಿ ಅಧ್ಯಯನ

ಕ್ಕಾಗಿ ಹಲವು ಶಿಷ್ಯರಿದ್ದರು. ಈ ಶಿಷ್ಯರಲ್ಲೊಬ್ಬನು ಕಾಂತಪ್ಪನವರನ್ನು ಕುರಿತು—"ಗಂಡನು ಸತ್ತರೆ ಹೆಂಡತಿಯ ಕೂದಲುಗಳನ್ನು ಕತ್ತರಿಸುವರು. ಆದರೆ ಪತ್ನಿ ಮೃತಪಟ್ಟರೆ ಪತಿಗೆ ಏನು ಮಾಡಬೇಕು?"

ಕಾಂತಪ್ಪನವರು (ಸ್ವಲ್ಪ ವಿಚಾರಮಾಡಿ)—"ಅಂಥವರಿಗೆ ಸನ್ಯಾಸದೀಕ್ಷೆಯನ್ನು ಕೊಡಬೇಕು."

---

೪. ಸಮರ್ಪಕ ಉತ್ತರ.

ತಾಯಿ—"ಸುಬ್ಬೀ! ನಿನ್ನನ್ನು ನೋಡುವುದಕ್ಕೆ ರಾಮಚಂದ್ರರಾಯರು ಬರುತ್ತಾರಂತೆ; ಮೋರೆಗೀರೆ ತೊಳೆದುಕೊಂಡು ಚೊಕ್ಕಟವಾಗಿರು."

ಸುಬ್ಬಿ—"ಅವರು ಬಾರದೆ ಹೋದರೆ?"

---

೫. ಅಂಚೆಯ ಜವಾನ.

ಒಬ್ಬನು—"ನಮ್ಮ ಊರೊಳಗಿನ ಒಬ್ಬನಿಗೆ ದಿನಾಲೂ 500 ಕಾರ್ಡುಗಳು ಬರುತ್ತವೆ.

ಎರಡನೆಯವನು (ಆಶ್ಚರ್ಯದಿಂದ)—"ಅವನು ಯಾರಪ್ಪ!"

ಒಬ್ಬನು—"ಗೊತ್ತಿಲ್ಲವೇ? ನಮ್ಮ ಓಣಿಯ ಅಂಚೆಯ ಜವಾನ!"

---

೬ ಹಾಲಿನಲ್ಲಿ ನೀರು.

ವ್ಯಾಪಾರಿ—"ಈ ಹಾಲಿನಲ್ಲಿ ನೀರು ಹಾಕಿದ್ದೀಯೋ?"

ಗೌಳಿಗ—"ಇಲ್ಲಿಯ ಹವೆಯೇ ವಿಲಕ್ಷಣ. ದನಗಳಲ್ಲಿ ಏನೂ ದೋಷವಿಲ್ಲ!"

---

೭ ಯೋಗ್ಯ ಉತ್ತರ.

ಶಿಕ್ಷಕ—"ಕೃಷ್ಣ! "ಭೂತಾನ"ದ ರಾಜಧಾನಿ ಯಾವುದು?"

ವಿದ್ಯಾರ್ಥಿ (ಉತ್ಸುಕತೆಯಿಂದ)—"ಸ್ಮಶಾನ".

---

೮ ಒಳ್ಳೆಯ ಹಂಚಿಕೆ.

ನಾರಾಯಣರಾವ್—"ಅಯ್ಯಾ! ನಮ್ಮ ಮನೆಗೆ ಧನಿ ಸುಮ್ಮನೆ ಬಾಡಿಗೆ ಹೆಚ್ಚಿಸಿದನಲ್ಲವೆ?"

ಮಾಧವರಾವ್—"ಇದಕ್ಕೆ ಇಷ್ಟು ಭಯವೇಕೆ? ಒಂದೆರಡು ಸತ್ತ ಇಲಿಗಳನ್ನು ತಂದುಹಾಕಿ ಮನೆಬಿಟ್ಟರಾಯಿತು."

---

೯. ತೃಪ್ತಿ.

ಒಮ್ಮೆ ಒಬ್ಬ ಶ್ರೀಮಂತಮನುಷ್ಯನು ಹದಿನೈದುಸಾವಿರ ರೂಪಾಯಿಯನ್ನು "ಯಾರು ತನಗೆ ಈ ಲೋಕದೊಳಗಣ ಯಾವ ವಸ್ತುವೂ ಬೇಕಾಗಿಲ್ಲ" ಎಂದು ಮನಃಪೂರ್ವಕವಾಗಿ ಹೇಳುವನೋ ಅವನಿಗೆ ಇನಾಮು ಕೊಡುತ್ತೇನೆಂದು ಪ್ರಕಟ ಪಡಿಸಿದನು.

ಕೆಲವು ಕಾಲದ ಮೇಲೆ ಒಬ್ಬ ಮುದುಕನು ಬಂದು, ಈ ಪ್ರಕಾರ ನುಡಿದನು:— "ಮಹನೀಯರೇ! ನನಗೆ ಈ ಲೋಕದೊಳಗಣ ಯಾವ ವಸ್ತುವೂ ಬೇಕಾಗಿಲ್ಲ."

ಅದಕ್ಕೆ ಆ ಶ್ರೀಮಂತನು—"ಒಳ್ಳೆಯದು ಹಾಗಾದರೆ. ನಿನಗೆ ಹದಿನೈದುಸಾವಿರ ರೂಪಾಯಿ ಕೊಡುವ ಅವಶ್ಯವಿಲ್ಲ. ಹೋಗು."—ಎಂದನು. ಆಗ ಆ ಮುದುಕನು ನಿರುತ್ತರನಾಗಿ ಹೊರಟುಹೋದನೆಂದು ಹೇಳುವ ಕಾರಣವಿಲ್ಲ.

---

೧೦. ಉತ್ತಮಗೃಹಿಣಿ.

ಕೃಷ್ಣರಾಯರು—"ನಮ್ಮ ಹೆಂಗಸಿಗೆ ಕಪಟವೆಂದರೇನೆಂಬುದು ತಿಳಿಯದು. ಯಾರು ಏನು ಹೇಳಿದರೆ ಅದು ನಿಜವೆಂದು ನಂಬುತ್ತಾಳೆ."

ಆನಂದರಾಯರು—"ಹಾಗೆಯೇ? ಅದೇನು ದೊಡ್ಡದು? ನಮ್ಮಾಕೆ ಯಾರು ಏನು ಹೇಳದೆ ಹೋದರೂ ನಿಜವೆಂದು ನಂಬುತ್ತಾಳೆ."

---

೧೧. ಉದಾರಾಶ್ರಯ.

ಒಬ್ಬನು—"ಏನಿರಯ್ಯಾ! ನೀವು ಆ "ಅನಾಥಬಾಲಿಕಾಶ್ರಮಕ್ಕೆ" ಏನು ಕೊಟ್ಟಿರಿ?"

ಎರಡನೆಯವನು—"ನಾನು ನನ್ನ ಎಲ್ಲ ಮಕ್ಕಳನ್ನೂ ಆ ಆಶ್ರಮಕ್ಕೆ ಕೊಟ್ಟಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ಆಶ್ರಯವು ಯಾವುದು?"

---

೧೨. ಪ್ರೊಫೆಸರ್ ಕೃಷ್ಣಮೂರ್ತಿ.

ಪ್ರೊಫೆಸರು ಕೃಷ್ಣಮೂರ್ತಿ ಎಂಬರೊಬ್ಬರು ತಮ್ಮ ಒಂದು ಉಪನ್ಯಾಸದಲ್ಲಿ ಈ ಪ್ರಕಾರ ನುಡಿದರು:—"ರೇಲ್ವೆಕಂಪನಿಯವರು "ಮೇಲ್‌ಟ್ರೇನ್ಸ್"ಗಳಂತೆ "ಫಿಮೇಲ್‌ಟ್ರೇನ್ಸ್"ಗಳನ್ನು ಪ್ರಚಾರದಲ್ಲಿ ಏಕೆ ತರುವುದಿಲ್ಲ?" ಇದನ್ನು ಕೇಳಿ ಪ್ರೇಕ್ಷಕರು ಬಹಳ ನಕ್ಕರೆಂಬುದು ಪ್ರೊಫೆಸರ್ ಸಾಹೇಬರಿಗೆ ಇನ್ನೂ ತಿಳಿಯಲಿಲ್ಲ.

---

೧೩. ಕಳ್ಳರ ಸಮ್ಮೇಳನ.

ಕಳೆದ ಜೂನ್ ತಿಂಗಳಲ್ಲಿ ನೆರೆದ ಕಳ್ಳರ ಸಮ್ಮೇಳನಕ್ಕಾಗಿ ಪ್ರೊಫೆಸರ್ "ದುರಾಚಾರ" ಎಂಬರೊಬ್ಬ ಬಂಗಾಲೀಗೃಹಸ್ಥರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು.

ಅವರು ಈ ಕೆಳಗೆ ಬರೆದ ಸುಧಾರಣೆಗಳನ್ನು ಆದಷ್ಟು ಬೇಗನೆ ಮಾಡಬೇಕಾಗಿ ಸಮ್ಮೇಳನದ ವ್ಯವಸ್ಥಾಪಕರಿಗೆ ಸೂಚಿಸಿದರು. ಹಾಗೂ ವ್ಯವಸ್ಥಾಪಕರು ಅದಕ್ಕೆ ಜನರ ಪೂರ್ಣಸಮ್ಮತಿ ಇರುವುದೆಂದು ನಿರ್ಣಯಿಸಿದರು.

೧. "ಕಳ್ಳತನ"ದ ಶಿಕ್ಷಣಕ್ಕಾಗಿ ಅಲ್ಲಲ್ಲಿ ಪ್ರಾಥಮಿಕಶಾಲೆಗಳನ್ನು ಸ್ಥಾಪಿಸಬೇಕು.

೨. "ಕಳ್ಳತನ"ದ ಅಭಿವೃದ್ಧಿಗಾಗಿ ಒಂದೆರಡು ವರ್ತಮಾನಪತ್ರಗಳನ್ನೂ ಮಾಸಪತ್ರಿಕೆಗಳನ್ನೂ ಪ್ರಸಿದ್ಧಮಾಡಿಸಬೇಕು.

೩. ಕಳ್ಳರಿಗೆ ಮಾರ್ಗಗಳಲ್ಲಿರುವ ಕಂದೀಲುಗಳಿಂದ ಅನೇಕ ತೊಂದರೆಗಳಾಗುವುದರಿಂದ ಮುನಿಸಿಪಾಲಿಟಿಯವರು ಈ ಕಂದೀಲುಗಳನ್ನು ತೆಗೆದುಬಿಡಬೇಕು.

೪. ಬಡಬಗ್ಗರಿಗೆ "ಕಳ್ಳತನದ ಶಿಕ್ಷಣ"ವನ್ನು ಫೀಯಿಲ್ಲದೆ ಕಲಿಸಬೇಕು.

೫. ಸರಕಾರದವರಿಂದ ಯೋಗ್ಯಸಹಾಯವು ದೊರೆಯುವ ಹಾಗಿದ್ದರೆ ಒಂದು ಕಾಲೇಜನ್ನೂ ಸ್ಥಾಪಿಸಬೇಕು.

---

೧೪. ಸಮರ್ಪಕ ಉತ್ತರ.

ಹೋದ ಸಪಟಂಬರು ತಿಂಗಳಲ್ಲಿ ಆದ "ಡಿಪಾರ್ಟುಮೆಂಟು"ಪರೀಕ್ಷೆಗೆ ಬಹುಮಂದಿ ಉಮೇದುವಾರರು ಬಂದಿದ್ದರು. ಅವರೊಳಗೊಬ್ಬನನ್ನು ಕುರಿತು ಕಲೆಕ್ಟರು ಹೀಗೆ ಪ್ರಶ್ನೆಮಾಡಿದರು:—

ಕಲೆಕ್ಟರು—"ನೀನು ಒಂದು ಗ್ರಾಮದ ಶಾನುಭೋಗನೆಂದು ತಿಳಿ. ನಿನ್ನ ಗ್ರಾಮದ ಹಟ್ಟಿಯಲ್ಲಿ ಒಂದು ಗಬ್ಬದ ಆಕಳು ಕಟ್ಟಲ್ಪಟ್ಟಿತ್ತು. ಮುಂದೆ ಆ ಆಕಳು ಈಯಿತೆಂದರೆ ಕರುವಿನ ಮೇಲಣ ಹಕ್ಕು ಯಾರದು?"

ಶ್ಯಾನುಭೋಗ (ವಿಚಾರಮಾಡಿ)—"ಆ ಆಕಳದು."

---

೧೫ ಭಿಕ್ಷುಕನ ಚಾತುರ್ಯ.

ಒಬ್ಬ ಬಡ ಭಿಕ್ಷುಕನು ಒಬ್ಬ ಸಾವುಕಾರನ ಮನೆಗೆ ಹೋಗಿ ಭಿಕ್ಷೆಯನ್ನು ಬೇಡಿದನು. ಅದಕ್ಕೆ ಸಾವುಕಾರನು "ನಾಳೆ" ಎಂದು ಹೇಳಿದನು. ಅದಕ್ಕನುಸಾರವಾಗಿ ಭಿಕ್ಷುಕನು ಅವನ ಮನೆಗೆ ಹೋಗಿ ಸ್ವಲ್ಪ ಅನ್ನ ಹಾಕಿರಿ ಎಂದು ಹೇಳಿದನು. ಸಾವುಕಾರನು ಇನ್ನೂ ಅಡಿಗೆಯಾಗಲಿಲ್ಲವೆಂದನು.

ಅದಕ್ಕೆ ಭಿಕ್ಷುಕನು—"ಅಡಿಗೆಯಾಗದಿದ್ದರೆ ಒಂದು ದುಡ್ಡನ್ನು ಕೊಡಿರಿ."

ಸಾವುಕಾರ—"ಒಂದು ಪೈ ಸಹ ನನ್ನಲ್ಲಿ ಇಲ್ಲ."

ಭಿಕ್ಷುಕನು—"ಹಾಗಾದರೆ ಸ್ವಲ್ಪ ಎಣ್ಣೆಯನ್ನಾದರೂ ಕೊಡಿರಿ."

ಸಾವುಕಾರ—"ಮನೆಯೊಳಗೆ ಎಣ್ಣೆಯೇ ಇಲ್ಲ."—

ಭಿಕ್ಷುಕನು—"ಏನೂ ಇಲ್ಲದಿದ್ದರೆ ಸುಮ್ಮನೇಕೆ ಕುಳಿತಿರುವಿರಿ? ನನ್ನ ಸಂಗಡ ಬನ್ನಿ. ನೆರೆಮನೆಯವನ ಹತ್ತಿರ ಹೋಗಿ ಏನಾದರೂ ಭಿಕ್ಷೆಬೇಡೋಣ."

ಬಡತನ

"Blessed be ye poor; for yours is the kingdom of God."

—Addison.

ಇದುವರೆಗೆ ಅನೇಕವಿದ್ವಾಂಸರು ಸಂಪತ್ತು ಇಹಲೋಕದ ಮುಖ್ಯಸುಖ ಸಾಧನಗಳಿಗೆ ಅವಶ್ಯವಾದದ್ದೆಂದೂ, ವಿಪತ್ತು ದುಃಖಗಳ ಮತ್ತೂ ಕ್ಲೇಶಗಳ ಆಗರ ವೆಂದೂ ಪ್ರತಿವಾದಿಸಿದ್ದಾರಷ್ಟೇ! ಆದರೆ ಸೂಕ್ಷ್ಮವಿಚಾರದ ಮೂಲಕ ಈ ಸಂಗತಿ ಸುಳ್ಳೆಂದು ಸಹಜವಾಗಿ ತೋರುವುದು. ನಾವು ಯಾರನ್ನು ಶ್ರೀಮಂತರೆನ್ನುತ್ತೇವೋ ಅವರು ಅನೇಕಸಂಗತಿಗಳಲ್ಲಿ ಬಡವರು. ಯಾರನ್ನು ಬಡವರೆನ್ನುತ್ತೇವೋ ಅವರು ಶ್ರೀಮಂತರು. ವಾಡಿಕೆಯಾಗಿ ಜನರು ಒಬ್ಬ ಮನುಷ್ಯನ ಶ್ರೀಮಂತತೆಯನ್ನು ಅಥವಾ ಬಡತನವನ್ನು ಆತನಲ್ಲಿರುವ ದುಡ್ಡಿನ ಮೇಲೆ ಗೊತ್ತುಮಾಡುತ್ತಾರೆ. ಆದರೆ ಯಾರೊಬ್ಬನ ಐಸಿರಿ ಅಥವಾ ಬಡತನವು ಆತನ ಆದಾಯ ಮತ್ತೂ ವೆಚ್ಚದ ಮೇಲೆ ಅವಲಂಬಿಸಿರುವುದಿಲ್ಲ. ಅವನಲ್ಲಿರುವ ಉದಾರತೆ, ಕರ್ತೃತ್ವಶಕ್ತಿ, ಉದ್ಯೋಗಪ್ರಿ ಯತೆ ಮುಂತಾದುವುಗಳ ಮೇಲೆ ಅವಲಂಬಿಸಿರುತ್ತದೆ. ಯಾವ ಮನುಷ್ಯನಿಗೆ ಯೋಗ್ಯವಾದ ಇಚ್ಛೆಗಳನ್ನು ಪೂರೈಸುವುದಕ್ಕೂ ಅವಶ್ಯವಾದ ವ್ಯಯಕ್ಕೂ ಸಾಕ ಷ್ಟು ಆದಾಯವಿಲ್ಲವೋ ಅವನು ಬಡವನೆಂದು ನಿರ್ವಿವಾದವಾಗಿ ಹೇಳಬಹುದು. ಅದೇ ಮೇರೆಗೆ ಯಾವನ ಇಚ್ಛೆ ಅತ್ಯಲ್ಪವೋ, ಅವಶ್ಯವಾದ ವ್ಯಯವನ್ನೂ ಮಾಡಿ ಕೊಂಡು ಸ್ವಲ್ಪವಾದರೂ ಹಣವನ್ನು ಸಂಗ್ರಹಮಾಡಲಿಕ್ಕಾಗುವುದೋ ಅವನು ಜನರ ದೃಷ್ಟಿಯಿಂದ ಬಡವನಿದ್ದರೂ ಶ್ರೀಮಂತನೆಂದು ಧಾರಾಳವಾಗಿ ಹೇಳಬಹುದು.

ಇನ್ನು ಶ್ರೀಮಂತನು ಯಾರು ಎಂಬುದನ್ನು ನೋಡುವ! ವಾಡಿಕೆಯಾಗಿ ಜನರು ಯಾರಲ್ಲಿಯಾದರೂ ಬಹಳ ಸಂಪತ್ತಿದ್ದರೆ ಅಥವಾ ಅವನು ಅನೇಕವೈಭವ ಗಳನ್ನು ಭೋಗಿಸುತ್ತಿದ್ದರೆ ಆತನನ್ನು ಶ್ರೀಮಂತನೆಂದು ಕರೆವರು. ಆದರೆ, ಸ್ವಲ್ಪ ಹಣವಿದ್ದರೂ ಯಾರು ನಿರ್ಮಲವಾದ ವರ್ತನ, ಪವಿತ್ರವಾದ ಅಂತಃಕರಣ, ಶ್ರೇಷ

ವಾದ ಬುದ್ಧಿಮತ್ತೆ ಮುಂತಾದ ಸುಗುಣಗಳಿಂದ ಮಂಡಿತರಾಗಿದ್ದಾರೋ ಅವರೇ ಶ್ರೀಮಂತರೆಂಬ ಪದವಿಗೆ ನಿಜವಾಗಿಯೂ ಅರ್ಹರು.

ಈಹೊತ್ತಿನ ವರೆಗೆ ಆಗಿಹೋದ ಅಲೌಕಿಕಪುರುಷರೆಲ್ಲರೂ ಬಹುಶಃ ಬಡತನದಲ್ಲಿಯೇ ಬೆಳೆದವರೆಂದು ಇತಿಹಾಸವು ಹೇಳುತ್ತದೆ. ವ್ಯಕ್ತಿಯ ಸ್ಥಿತಿಯೇ ರಾಷ್ಟ್ರದ ಸ್ಥಿತಿ. ಇಂದು ಅತಿಬಲಾಢ್ಯರಾಷ್ಟ್ರಗಳೆಂದು ಖ್ಯಾತಿವಡೆದಿರುವ ಇಂಗ್ಲಂಡು, ಜರ್ಮನಿ, ಅಮೇರಿಕಾ ಮುಂತಾದ ಪಾಶ್ಚಾತ್ಯರಾಷ್ಟ್ರಗಳು ಎಷ್ಟೋ ಬಡತನದಲ್ಲಿ ಬೆಳೆದುಬಂದುವೆಂದು ಇತಿಹಾಸದ ಮೂಲಕ ನಾವು ತಿಳಿದುಕೊಳ್ಳಬಹುದು.

ಬಡತನವೇ ಜನರನ್ನು ದುರ್ಗುಣಗಳಿಂದ ದೂರವಾಗಿಡುವುದು; ಬಡತನವೇ ಸದ್ಗುಣಗಳನ್ನು ವೃದ್ಧಿಮಾಡುವುದು;--ಬಡತನವೇ ದೊಡ್ಡದೊಡ್ಡ ರಾಷ್ಟ್ರಗಳ ಸಂಸ್ಥಾಪನೆಯನ್ನು ಮಾಡಿರುವುದು. ತುಕಾರಾಮ, ರಾಮದಾಸ ಮುಂತಾದವರ ಮನಸ್ಸಿನಲ್ಲಿ ಭಕ್ತಿವೈರಾಗ್ಯಗುಣಗಳನ್ನು ಹುಟ್ಟಿಸುವುದಕ್ಕೂ, ಶಂಕರಾಚಾರ್ಯ ಮೊದಲಾದವರಲ್ಲಿ ಬಾಲ್ಯದಿಂದಲೇ ಜ್ಞಾನಾಂಕುರವನ್ನು ಊರುವುದಕ್ಕೂ, ಶೇಕ್ಸಪೀಯರು ಮುಂತಾದವರ ಹೃತ್ಪಟಲದಲ್ಲಿ ಕವಿತ್ವಶಕ್ತಿಯನ್ನು ಪ್ರೇರಿಸುವುದಕ್ಕೂ ಬಡತನವೇ ಮುಖ್ಯಕಾರಣ.

ಧಾರ್ಮಿಕದೃಷ್ಟಿಯಿಂದ ವಿಚಾರಮಾಡಿದರೂ ಬಡತನವೇ ಮೋಕ್ಷವನ್ನು ಸಂಪಾದಿಸುವುದಕ್ಕೆ ವಿಶೇಷಸಹಕಾರಿಯೆಂದು ಹೇಳಬಹುದು. ಅವಶ್ಯವಾದ ವಸ್ತುಗಳನ್ನು ಕಡಿಮೆಮಾಡುತ್ತ ಹೋದ ಹಾಗೆ ಮನುಷ್ಯನು ಹೆಚ್ಚುಹೆಚ್ಚು ದೇವರ ಸಮೀಪಕ್ಕೆ ಹೋಗುತ್ತಾನೆ. ದೇವರ ಸಾನ್ನಿಧ್ಯಕ್ಕೆ ಬಡತನವೇ ಸುಲಭವಾದ ಸಾಧನವಾಗಿದೆ. ಒಬ್ಬ ವಿದ್ವಾಂಸನು ಒಂದು ಸಭೆಯ ಮುಂದೆ "ಐಶ್ವರ್ಯಕ್ಕಿಂತ ಬಡತನವೇ ಲೇಸು" ಎಂಬುದನ್ನು ಸಿದ್ಧಮಾಡುವುದಕ್ಕಾಗಿ ಕೆಳಗೆ ಬರೆದ ಮೇರೆಗೆ ತನ್ನ ಅನುಭವವನ್ನು ವಿವರಿಸಿದನು:—

"ಭೀತಿಗೆ ಒಳಗಾಗಿರುವುದಕ್ಕಿಂತ ಭೀತಿಯಿಲ್ಲದೆ ಇರುವುದೊಳ್ಳೆಯದು. ಒಬ್ಬನ ಆಳಾಗಿ ದುಡಿಯುವುದಕ್ಕಿಂದ ಸ್ವತಂತ್ರವಾಗಿರುವುದೊಳ್ಳೆಯುದು. ಜನರಿಗೆಲ್ಲ ಬೇಡವಾಗುವಂತೆ ಇರುವುದಕ್ಕಿಂತ ಎಲ್ಲರಿಗೂ ಬೇಕಾಗುವಂತೆ ಇರುವುದೊಳ್ಳೆಯದು. ಎಂಬೀ ಮಾತುಗಳನ್ನು ನೀವು ಒಪ್ಪಿಕೊಳ್ಳುತ್ತೀರಷ್ಟೇ! ಎಂದ ಮೇಲೆ ನನ್ನ ಸ್ಥಿತ್ಯಂತರವನ್ನೂ ಅದರ ಹಿತಾಹಿತಪರಿಣಾಮಗಳನ್ನೂ ಕೇಳಿ. ಹಿಂದೆ ನಾನು ಶ್ರೀಮಂತನಾಗಿದ್ದಾಗ ನನ್ನ ಮನೆಗೆ ಕಳ್ಳರು ಕನ್ನಹಾಕಿ ಹಣವನ್ನು ಕದಿಯುವರೆಂತಲೂ ನನ್ನ ಜೀವಕ್ಕೆ ಅಪಾಯವನ್ನುಂಟುಮಾಡುವರೆಂತಲೂ ಯಾವಾಗಲೂ ಭೀತಿಯಿಂದ ಕಾಲಹರಣಮಾಡಿದೆನು. ಮೊದಲು ರಾತ್ರಿ ನಿದ್ರೆಯೇ ಇರಲಿಲ್ಲ. ಈಗ ನನಗೆ ಸರಿಯಾಗಿ ನಿದ್ರೆಬರುತ್ತದೆ. ಮೊದಲು ನನ್ನ ಹಣದ ಮೇಲೆ ಇತರರ ಕಣ್ಣಿದ್ದಿತು. ಅದು ಈಗ

ತಪ್ಪಿಹೋಗಿದೆ. "ಜೋಗಿ ಎದ್ದರೆ ಜಿಡಾಸನವು ಹೆಗಲು ಮೇಲೆ" ಎಂಬಂತೆ ಬೇಕು ಬೇಕಾದಾಗ ನಾನು ಊರುಬಿಟ್ಟು ಹೊರಡಲಿಕ್ಕೆ ತಡೆಯಿಲ್ಲ. ಇದಲ್ಲದೆ ಇನ್ನೂ ಅನೇಕಕಷ್ಟಗಳು ಬಡವನಾದ ಮೇಲೆ ನನಗೆ ತಪ್ಪಿದವು. ಬಡತನವು ಪ್ರಾಪ್ತವಾದರೂ ಉದ್ಯೋಗ ಮಾಡಿ ಜೀವನವನ್ನು ದೊರೆಯಿಸಿಕೊಳ್ಳುವ ಶಕ್ತಿಯನ್ನು ದೇವರು ನನ್ನಲ್ಲಿ ಇನ್ನೂ ಇಟ್ಟಿರುತ್ತಾನೆ. ಇದೇ ಸಾಕು."

ವಿದ್ವಾಂಸನು ನಿರಾಶೆಯಿಂದ ಈ ದುಃಖೋದ್ಗಾರಗಳನ್ನು ಮಾಡಿರಬಹುದು. ಆದರೆ ಇದರಲ್ಲಿ ಹೆಚ್ಚು ಸತ್ಯಾಂಶವಿದೆ. ಬಡತನವು ಪ್ರಾಪ್ತವಾದ ಬಗ್ಗೆ ದೇವರನ್ನು ದೂಷಿಸದೆ, ಬಡತನವನ್ನು ಕೊಟ್ಟ ಬಗ್ಗೆ ಅವನ ಉಪಕಾರವನ್ನು ಸ್ಮರಿಸಿ, ಪ್ರತಿಯೊಬ್ಬನೂ ಸದಾಚಾರದಿಂದ ನಡೆದು, ತನ್ನ ಕರ್ತವ್ಯವನ್ನು ಒಳ್ಳೆಯ ರೀತಿಯಿಂದ ಮಾಡಿದರೆ, ಅವನಿಂದ ಈ ಜಗತ್ತಿಗೆ ಕಲ್ಯಾಣವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಲಂಡನು.

"See London and then die."

—**An English Proverb.**

ಲಂಡನು ಇಂಗ್ಲಂಡಿನ ರಾಜಧಾನಿ. ಇದರಷ್ಟು ಭವ್ಯವಾದ ಪಟ್ಟಣವು ಇಡೀ ಪೃಥ್ವಿಯಲ್ಲಿ ಬೇರೊಂದಿಲ್ಲ. ಇದು ತೇಮ್ಸನದಿಯ ಆಚೆಯೂ ಈಚೆಯೂ ವಿಸ್ತರಿಸಿರುವುದು. ಜನಸಂಖ್ಯೆ ಸುಮಾರು ೭ ಲಕ್ಷಕ್ಕೂ ಹೆಚ್ಚು, ಎಂದರೆ ನಮ್ಮ ಮುಂಬಯಿ ಪಟ್ಟಣದ ಏಳರಷ್ಟಿರುತ್ತದೆ.

ಲಂಡನು ಇಂಗ್ಲಂಡಿನೊಳಗೆ ಮುಖ್ಯವ್ಯಾಪಾರಸ್ಥಳ. ಇಲ್ಲಿಯ ವರ್ತಕರು ಜಗತ್ತಿನ ಎಲ್ಲ ದೇಶಗಳೊಡನೆಯೂ ವ್ಯಾಪಾರ ಮಾಡುತ್ತಾರೆ. ಪಟ್ಟಣದಲ್ಲಿ ಸುಮಾರು ೫೨,೦೦೦ಕ್ಕಿಂತ ಹೆಚ್ಚು ಓಣಿಗಳಿರುತ್ತವೆ. ೫೦-೬೦ ಅಂತಸ್ತುಗಳುಳ್ಳ ಕಟ್ಟಡಗಳೂ ಹಲವುಂಟು. ರೋಗಿಗಳ ಬಗ್ಗೆ ಔಷಧಾಲಯಗಳೂ, ಬಡವರ ಬಗ್ಗೆ ಅನಾಥಶಾಲೆಗಳೂ, ಕುರುಡ ಕಿವುಡಮೂಗರಿಗಾಗಿ ಶಿಕ್ಷಣಶಾಲೆಗಳೂ ಕಂಡುಬರುವುವು. "ಸೆಂಟ್‌ಪೌಲ್" ಎಂಬ ಮಠವು ನೋಡತಕ್ಕದ್ದಾಗಿದೆ. ಅದರ ೩೬೦ ಫೂಟು ಎತ್ತರವಾದ ಕಲಶವು ಮುಗಿಲನ್ನು ಮುದ್ದಿಡುವಂತಿರುವುದು. ಆ ಮಠದ ಎತ್ತರವಾದ ಗೋಡೆಗಳೂ, ಭವ್ಯವಾದ ಕಮಾನುಗಳೂ, ವಿಸ್ತಾರವಾದ ಅಂತಃಪ್ರದೇಶಗಳೂ ಮನಸ್ಸಿಗೆ ಆನಂದವನ್ನು ಕೊಡುತ್ತವೆ. ಮಠದಲ್ಲಿ ಪರೋಪಕಾರಿಯಾದ ಜಾನ್ ಹಾವರ್ಡ, ವಿದ್ವಾಂಸನಾದ ಡಾಕ್ಟರ ಜಾನ್‌ಸನ, ಶೂರರಾದ ನೆಲಸನ, ವೆಲಿಂಗಟನ ಮೊದಲಾದ ಅನೇಕಪ್ರಸಿದ್ಧಪುರುಷರ ಪ್ರತಿಮೆಗಳೂ ಸಮಾಧಿ

ಳೂ ಮೇಲಾಗಿ ಕಂಡುಬರುತ್ತವೆ. ಪಟ್ಟಣದ "ಹಾಯಿಡಪಾರ್ಕ್" ಎಂಬ ಉಪ
ನವು ಅತಿರಮಣೀಯವಾಗಿದೆ.

ತೇಮ್ಸನದಿಯ ತೀರದಲ್ಲಿ ಪಾರ್ಲಿಮೆಂಟಿನ ಸಭಾಗೃಹಗಳಿವೆ. ಈ ಕಟ್ಟಡವು
ಲುದೊಡ್ಡದು. ಇದರಲ್ಲಿ ಸುಮಾರು ೮೦೦ ಕೋಣೆಗಳಿವೆ.

ಇನ್ನೂ ಸುಮಾರು ೫೦೦ಕ್ಕೂ ಹೆಚ್ಚು ನೋಡತಕ್ಕ ಸ್ಥಳಗಳಿವೆ. ಅವುಗಳ
ರ್ಣನೆಯನ್ನು ಮಾಡಲಿಕ್ಕೆ ಚಿಕ್ಕ ಪುಸ್ತಕದಲ್ಲಿ ಸ್ಥಳವಿಲ್ಲ. ಜನರ ಅನುಕೂಲತೆ
ಾಗಿ ರೇಲ್ವೆಕಂಪನಿಯವರು ನೆಲದೊಳಗಿಂದ ಲೋಹಮಾರ್ಗಗಳನ್ನೊಯ್ದಿರುತ್ತಾರೆ.
ಂದರದಲ್ಲಿ ವಿಗ್ದೇಶದ ನೂರಾರು ಹಡಗುಗಳು ಯಾವಾಗಲೂ ನಿಂತಿರುತ್ತವೆ.

"ಬ್ರಿಟಿಷ ಮ್ಯುಝಿಯಂ" ಎಂಬ ಗ್ರಂಥಾಲಯವು ಬಹಳಪ್ರಸಿದ್ಧವಾದುದು.
ಇಲ್ಲಿ ಸುಮಾರು ೧೦ ಸಾವಿರ ಜನರು ಕೂತು ಓದುವ ಹಾಗೆ ವ್ಯವಸ್ಥೆಮಾಡಿರುತ್ತಾರೆ.
ಮೇಲಾಗಿ ಅಲ್ಲಿ ಅನೇಕ ಅತ್ಯಾಶ್ಚರ್ಯಕರವಾದ ವಸ್ತುಗಳ ಸಂಗ್ರಹವಿದೆ. ಅದರ
ಸಮೀಪದಲ್ಲಿಯೇ "ವೆಸ್ಟಮಿನಿಸ್ಟರ್ ಅಬೆ" ಎಂಬ ದೊಡ್ಡ ಮಠವಿದೆ. ಅಲ್ಲಿ ಅನೇಕ
ಪ್ರಸಿದ್ಧಪುರುಷರ ಗೋರಿಗಳೂ ಸ್ಮಾರಕಗಳೂ ಇವೆ. ಅವುಗಳನ್ನು ನೋಡಿ ಪ್ರೇಕ್ಷ
ಕನು ಮೋಹಿತನಾಗುತ್ತಾನೆ.

ಈ ಪಟ್ಟಣವನ್ನು ಪ್ರತ್ಯಕ್ಷ ನೋಡಿದ ಹೊರತು ಅದರ ನಿಜವಾದ ಕಲ್ಪನೆ
ಯಾಗದು. ಹಣದ ಅನುಕೂಲತೆಯುಳ್ಳವರು ನೋಡಬಹುದು. ಬಡವರು ಪಟ್ಟ
ಣದ ಬರೀ ವರ್ಣನೆಯಿಂದಲೇ ತೃಪ್ತರಾಗಬೇಕು.

ಮಹತ್ವಾಕಾಂಕ್ಷೆ.

निस्स्वो वष्टि शतं शती दशशतं लक्षं सहस्राधिपो ।
लक्षेशः क्षितिराजतां क्षितिपतिश्चक्रेशतां वांछति ।
चक्रेशस्सुरराजतां सुरपतिर्ब्रह्मास्पदं वांछति ।
ब्रह्मा विष्णुपदं हरिः शिवपदं तृष्णावधिं कोगतः ॥

सुभाषिते

ಮನುಷ್ಯನು ಯಾವ ಸ್ಥಿತಿಯಲ್ಲಿಯೇ ಇರಲಿ, ಯಾವ ಉದ್ಯೋಗವನ್ನೇ ಮಾಡಲಿ,
ಯಾವುದಾದರೊಂದು ರೀತಿಯಿಂದ ತಾನು ವಾಸಮಾಡುವ ದೇಶದಲ್ಲಿ, ಇಲ್ಲವೆ
ವ್ಯವಹಾರವನ್ನು ಮಾಡುವ ಜನರ ಸಮೂಹದಲ್ಲಿ ತಾನು ಸುಪ್ರಸಿದ್ಧನೆನಿಸಿ
ಕೊಳ್ಳುವ ಅಭಿಲಾಷೆ ಅವನಲ್ಲಿ ಇದ್ದೇ ಇರುತ್ತದೆ. ವಿದ್ಯಾರ್ಥಿ ತನ್ನ ವರ್ಗದಲ್ಲಿ

ಎಲ್ಲರಿಗೂ ಮೇಲಾಗುವುದಕ್ಕೆ ಯತ್ನಿಸುವನು. ಅಕ್ಕಸಾಲಿಗನು ಅಕ್ಕಸಾಲಿಗ ರಲ್ಲಿ ಬಲ್ಲಿದನಾಗಲಿಕ್ಕೆ ಇಚ್ಛಿಸುವನು. ವ್ಯಾಪಾರಸ್ಥನು ವ್ಯಾಪಾರಸ್ಥರಲ್ಲಿ ಪ್ರಸಿದ್ಧ ನಾಗಲು ಬಯಸುವನು. ಉಪಾಧ್ಯಾಯನು ತನ್ನ ಸರಿಕರನ್ನು ದೂಡನೋಡುವನು. ಹೀಗೆ ಜನರು ತಮ್ಮತಮ್ಮ ಉದ್ಯೋಗವ್ಯವಸಾಯಗಳಲ್ಲಿ ಉಳಿದವರಿಗಿಂತ ಶ್ರೇಷ್ಠ ರೆನಿಸಿಕೊಳ್ಳಬೇಕೆಂದು ಆತುರಪಡುವುದು ಸ್ವಾಭಾವಿಕವಾಗಿದೆ. ಮನುಷ್ಯರಲ್ಲಿರುವ ಈ ಗುಣಕ್ಕೇ ಮಹತ್ವಾಕಾಂಕ್ಷೆಯೆನ್ನುವರು.

ಈ ಗುಣವು ಮನುಷ್ಯನನ್ನು ಸುಮ್ಮನೆ ಕುಳ್ಳಿರಗೊಡುವುದಿಲ್ಲ. ಯಾವಾಗಲೂ ಅವನನ್ನು ಒಂದಿಲ್ಲ ಒಂದು ಕೆಲಸಕ್ಕೆ ಹಚ್ಚುತ್ತದೆ. ಸುಶಿಕ್ಷಿತನಾಗಿ ನ್ಯಾಯದಿಂದ ವರ್ತಿಸಿ ಕೀರ್ತಿಯನ್ನು ಪಡೆಯುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ ವೇ ಸರಿ. ಆದರೆ ಶರೀರಸಾಮರ್ಥ್ಯದಿಂದ ಎರಡನೆಯವರನ್ನು ಪೀಡಿಸಿ, ಮಹತ್ವ ವನ್ನು ಪಡೆಯಬೇಕೆಂಬ ಇಚ್ಛೆ ಅತಿಗರ್ಹ್ಯವಾದದ್ದು. ದೇವರು ನಮಗೆ ಶಕ್ತಿಯನ್ನು ಪರಪೀಡನಾರ್ಥವಾಗಿ ಕೊಟ್ಟಿಲ್ಲ. ಶಕ್ತಿವಂತರ ಕಡೆಯಿಂದ ದುರ್ಬಲರಿಗೆ ಏನಾ ದರೂ ಸಹಾಯವಾಗಬೇಕು ಎಂಬ ಈ ಉದ್ದೇಶದಿಂದಲೇ ಆ ಶಕ್ತಿಯನ್ನು ದೇವರು ದಯಪಾಲಿಸಿರುವನು. ಸ್ವದೇಶಹಿತ ಮೊದಲಾದ ಕಾರ್ಯಗಳಲ್ಲಿ ಮಹತ್ವವನ್ನು ಪಡೆ ಯುವ ಇಚ್ಛೆಯುಳ್ಳ ಮನುಷ್ಯರು ಈ ಲೋಕದಲ್ಲಿ ಶ್ರೇಷ್ಠರೆಂದು ಹೇಳಲ್ಪಡುತ್ತಾರೆ. ಇಂಥ ಜನರಿಗೆ ನಾವೆಲ್ಲರೂ ನಮ್ಮ ಕೈಲಾದ ಮಟ್ಟಿಗೂ ಸಹಾಯಮಾಡಬೇಕು. ಆದರೆ ಸಾಂಪ್ರತಕಾಲದಲ್ಲಿ ದೇಶಕಲ್ಯಾಣ, ಪರೋಪಕಾರ ಮೊದಲಾದ ಕಾರ್ಯ ಗಳ ನೆವನದಿಂದ ಪರರಿಗೆ ಮೋಸಮಾಡಿ ತಮ್ಮ ಮನೆಯನ್ನು ತುಂಬಿಕೊಳ್ಳುವ ದಾಂಭಿಕರೇ ಬಹಳ. ಇಂಥ ನೀಚಕೃತಿಗಳಾದ ನರಾಧಮರಿಗೆ ಈ ಲೋಕದಲ್ಲಿ ಶಿಕ್ಷೆ ಯಾಗದಿದ್ದರೂ ಪರಲೋಕದಲ್ಲಿ ನಿಶ್ಚಯವಾಗಿಯೇ ಆಗುವುದು.

ಯಾವ ಮನುಷ್ಯನು ತನ್ನ ಯೋಗ್ಯತೆಯನ್ನೂ ಬಳಿಯಲ್ಲಿರುವ ಸಾಧನ ಗಳನ್ನೂ ವಿಚಾರಿಸಿ ಅವುಗಳಿಗೆ ಅನುರೂಪವಾದ ಕೀರ್ತಿಯನ್ನೇ ಸಂಪಾದಿಸಲಿಕ್ಕೆ ಪ್ರಯತ್ನಮಾಡುತ್ತಾನೋ ಅಂಥವನ ಯತ್ನವು ಬಹುತರ ಸಫಲವಾಗುತ್ತದೆ. ಯೋ ಗ್ಯತೆಯನ್ನು ಮೀರಿ ಕೀರ್ತಿಯನ್ನು ಸಂಪಾದಿಸಲಿಕ್ಕೆ ಹವಣಿಸುವನ ಆಶೆ ಬಹುತರ ಭಂಗವಾಗುತ್ತದೆ. ಯಾವನೇ ಆಗಲೀ, ತನ್ನ ಯೋಗ್ಯತೆಯನ್ನೂ ಬಳಿಯಲ್ಲಿರುವ ಸಾಧನಗಳನ್ನೂ ಪೂರ್ಣವಿಚಾರಮಾಡಿ ಯಾವುದಾದರೊಂದು ಮಹತ್ವದ ಕಾರ್ಯ ವನ್ನು ಆರಂಭಿಸಬೇಕು.

ಮಹತ್ವಾಕಾಂಕ್ಷೆಯಿಂದ ಮನುಷ್ಯನು ಉದ್ಯೋಗಿಯಾಗುತ್ತಾನೆಂಬುದು ನಿಜ. ಆದರೆ ಪರರ ಮನಸ್ಸನ್ನು ನೋಯಿಸಿಯಲ್ಲದೆ ಪ್ರಾಪ್ತವಾಗಲಾರದವಸ್ತುವನ್ನು ದೊರ ಕಿಸುವುದಕ್ಕೆ ಪ್ರಯತ್ನಮಾಡುವುದು ಸರಿಯಲ್ಲ. ದೈವಿಕವಾಗಿ ಒದಗಿದ ಸ್ಥಿತಿ

ಯಲ್ಲಿ ಸುಖಿಯಾಗಿರದೆ ಎರಡನೆಯವರ ಸ್ಥಿತಿಯನ್ನು ನೋಡಿ ಮನದೊಳಗೆ ಕುದಿಯುವನು ಎಂದೂ ಸುಖಿಯಾಗನು. ಅಭ್ಯುದಯವನ್ನು ದೊರಕಿಸುವುದಕ್ಕಾಗಿ ಪ್ರತಿಯೊಬ್ಬನು ಪ್ರಯತ್ನಮಾಡುವುದುಂಟು. ಎಂದ ಮೇಲೆ ಅವನೇ ಹೇಗೆ ಶ್ರೇಷ್ಠನಾಗುವನು? ಒಂದು ವೇಳೆ ತಾನು ಎಲ್ಲರಿಗಿಂತ ಮಿಗಿಲಾದರೂ ಅವನ ಮನಸ್ಸು ಶಾಂತತೆಯನ್ನು ಹೊಂದಲಾರದು. ಜ್ಯುಲಿಯಸ್ ಸೀಝರೆಂಬ ಒಬ್ಬ ವೀರನು ರೋಮು ದೇಶದ ಪ್ರಭುತ್ವವನ್ನು ಕೊಟ್ಟರೂ ತೃಪ್ತಿಹೊಂದಲಿಲ್ಲವಂತೆ. ಅವನ ತೃಪ್ತಿಯನ್ನು ಅಲ್ಲಿಯೇ ಮುಗಿಸುವ ಉದ್ದೇಶದಿಂದ ಅವನ ಪ್ರಿಯಮಿತ್ರನೇ ಅವನನ್ನು ಕೊಂದನು. ಇಡೀ ಯುರೋಪಖಂಡವನ್ನು ಪಾದಾಕ್ರಾಂತವಾಗಮಾಡಿದ ವೀರನಾದ ನೆಪೋಲಿಯನಿನ ಗತಿಯಾದರೂ ಇದೇ ಆಯಿತು. ಇಡೀ ಜಗತ್ತನ್ನೆಲ್ಲಾ ಏಕಾಪೋಶನಮಾಡಿಬಿಡಬೇಕೆಂಬ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಬೆಲ್‌ಜಮ್‌ದೇಶದ ಜನರ ಮೇಲೆಯೂ ನಮ್ಮ ಬ್ರಿಟಿಷರ ಮೇಲೆಯೂ ಅಸಹನೀಯವಾದ ಅತ್ಯಾಚಾರಗಳನ್ನು ನಡೆಯಿಸಿದ ಜರ್ಮನದೇಶದ ಅರಸನಾದ ಕೈಸರನ ಸ್ಥಿತಿ ಇದೇ ಆಗಲಿರುವುದೆಂದು ತಿರಿಗಿ ಹೇಳಬೇಕೇ?

ತಾತ್ಪರ್ಯವೇನೆಂದರೆ—ಸಾತ್ವಿಕವೃತ್ತಿ, ಸತ್ಸಹವಾಸ, ತಾರತಮ್ಯ ಮುಂತಾದ ಸುಗುಣಗಳಿಂದ ವರ್ತಿಸಿದರೆ ಮನುಷ್ಯನು ಸಮಾಜಕ್ಕೆ ವಂದ್ಯನಾಗುತ್ತಾನೆ. ಅದೇ, ತಾಮಸವೃತ್ತಿ, ದುಸ್ಸಹವಾಸ, ಅವಿವೇಕ, ಮೊದಲಾದದುರ್ಗುಣಗಳಿಂದ ವರ್ತಿಸಿದರೆ ದುಷ್ಕೀರ್ತಿಯನ್ನು ಪಡೆಯುತ್ತಾನೆ.

ಯುರೋಪಖಂಡದೊಳಗಣ ಮಹಾಯುದ್ಧ

೨೦ನೆಯ ಶತಮಾನದೊಳಗಣ ಅತಿಪ್ರಚಂಡವಾದ ಈ ಮಹಾಯುದ್ಧವು ಪ್ರಾರಂಭವಾಗಿ ಇಂದಿಗೆ ಸುಮಾರು $2\frac{1}{2}$ ವರ್ಷಗಳಾಗುತ್ತ ಬಂತು. ಈ ಘೋರವಾದ ಯುದ್ಧವನ್ನು ಅನೇಕಜನರು ಕೌರವಪಾಂಡವರ ಯುದ್ಧಕ್ಕೆ ಹೋಲಿಸುತ್ತಿರುವರು. ಉಭಯಪಕ್ಷಗಳಲ್ಲಿ ಕಾದುವುದಕ್ಕೆ ನಿಂತಿರುವ ಸೈನ್ಯಗಳ ಸಂಖ್ಯೆಯನ್ನು ಪರಿಗಣಿಸಿದರೆ, ಪ್ರಾಯಶಃ ಈ ಯುದ್ಧವು ಕೌರವಪಾಂಡವರ ಯುದ್ಧಕ್ಕಿಂತಲೂ ಅದ್ಭುತವಾದದ್ದೆಂದು ಹೇಳಬಹುದು. "ಅತ್ಯಾಶೆ ಗತಿಗೆಡಿಸಿತು" ಎಂಬಂತೆ ಇಡೀ ಯುರೋಪಖಂಡವನ್ನು ಕೈವಶಮಾಡಿಕೊಳ್ಳಬೇಕೆಂಬ ದುರಾಕಾಂಕ್ಷೆಯಿಂದ ಕಳೆದ ೪೦ ವರುಷಗಳಿಂದ ಈ ಮಹಾಯುದ್ಧಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಿದ್ಧಮಾಡುತ್ತಿದ್ದು, ಪ್ರಪಂಚಕ್ಕೆಲ್ಲ ಅತಿಶಯಖೇದವನ್ನೂ ಆಶ್ಚರ್ಯವನ್ನೂ ಉಂಟುಮಾಡತಕ್ಕ "ಸಬ್‌ಮೆರಿನ್" "ಟಾರ್ಪೆಡೊ" ಮೊದಲಾದ ಅನೇಕ ಮಾನುಷಸಂಹಾರಕಯಂತ್ರಗಳ ಬಲ

ದಿಂದ ನಿರಪರಾಧಿಗಳಾದ ಬೆಲ್‌ಜಮ್‌ಜನರ ಮೇಲೆ ಬಲಾತ್ಕಾರದಿಂದ ನುಗ್ಗಿ, ಅವ
ರನ್ನು ಅನೇಕತರದಿಂದ ಪೀಡಿಸಿ, ದೇಶವನ್ನೆಲ್ಲಾ ಹಾಳುಮಾಡಿದ ಜರ್ಮನಿಯ ಕೈಸ
ರನು ಯಾವ ತರದ ಅಪಮಾನಕ್ಕೆ ಗುರಿಯಾಗುವನೆಂಬುದನ್ನು ಈಗ ಹೇಳಲಿಕ
ಆಗುವುದಿಲ್ಲ.

ಅನೇಕಸ್ತ್ರೀಯರನ್ನೂ ಹುಡುಗರನ್ನೂ ವೃದ್ಧರನ್ನೂ ಕೊಂದು, "ಕುಂಬಾರನಿ
ವರುಷ, ದೊಣ್ಣೆಗೆ ನಿಮಿಷ" ಎಂಬಂತೆ ಲಕ್ಷಾವಧಿರೂಪಾಯಿಗಳನ್ನು ವೆಚ್ಚಮಾಡಿ
ವರ್ಷಾಂತರಗಳ ಹಿಂದೆ ಕಟ್ಟಿದ ಅನೇಕದೇವಾಲಯಗಳನ್ನೂ ಪುಸ್ತಕಾಲಯಗಳನ್ನೂ
ನಾಶಮಾಡಿದ ಜರ್ಮನಿಯ ಅರಸನಿಗೆ ನಿಶ್ಚಯವಾಗಿಯೂ ಅಪಜಯವಾಗುವುದೆಂಬು
ದನ್ನು ನಾವು ತಿರಿಗಿ ಹೇಳಬೇಕೇ? "ಅಧರ್ಮಕ್ಕೆ ಅಪಜಯವು."

ಈ ಯುದ್ಧವು ಹೇಗೆ ಪ್ರಾರಂಭವಾಯಿತು? ಇದರಲ್ಲಿ ನಮ್ಮ ಚಕ್ರವರ್ತಿಗಳವರು
ಪ್ರವೇಶಮಾಡಿದುದಕ್ಕೆ ಕಾರಣವೇನು?— ಎಂಬುದನ್ನು ಇಲ್ಲಿ ಸ್ವಲ್ಪ ಹೇಳುವೆವು
ಈ ಯುದ್ಧವು ಹುಟ್ಟುವುದಕ್ಕೆ ಅನೇಕ ಗುಪ್ತಕಾರಣಗಳು. ಆದರೆ "ಸೆರಾಜವೋ
ಎಂಬ ಪಟ್ಟಣದಲ್ಲಿ ಆಸ್ಟ್ರಿಯಾದೇಶದ ಯುವರಾಜನನ್ನೂ ಯುವರಾಜ್ಞಿಯನ್ನೂ
ಸರ್ವಿಯಾದೇಶದ ಒಬ್ಬ ತರುಣನು ಗುಂಡಿಸಿಂದ ಹೊಡೆದು ಕೊಂದುಹಾಕಿದ್ದೇ ಈ
ಯುದ್ಧದ ವ್ಯಕ್ತಕಾರಣವಾಗಿ ಸಂಭವಿಸಿತು. ಆಸ್ಟ್ರಿಯಾದೇಶದ ಅರಸನಿಗೆ ಇದ
ರಿಂದ ಬಹಳ ದುಃಖವಾಯಿತು. ಆದರೆ ಮಾಡುವುದೇನು? ಕೂಡಲೆ ಅರಸನು
ಸರ್ವಿಯಾದೇಶದ ಅರಸನಿಗೆ ಒಂದು ಕ್ರೂರವಾದ ಲೇಖನವನ್ನು ಬರೆದು, ಅದರಲ್ಲಿ
ಇರತಕ್ಕ "ಶರತು"ಗಳಿಗೆ ಒಪ್ಪದಿದ್ದರೆ ಯುದ್ಧಕ್ಕೆ ಸಿದ್ಧನಾಗೆಂದು ತಿಳುಹಿದನು
ಅದಕ್ಕೆ ಸರ್ವಿಯಾದೇಶದ ಅರಸನು ಒಪ್ಪದಿದ್ದುದನ್ನು ನೋಡಿ ಆಸ್ಟ್ರಿಯಾ ದೇಶದ
ಅರಸನು ಯುದ್ಧವನ್ನು ಪ್ರಕಟೀಕರಿಸಿದನು. ಸರ್ವಿಯಾದೇಶಕ್ಕೆ ರಷಿಯದವರ
ಸಹಾಯವಿದ್ದುದನ್ನು ನೋಡಿ ಜರ್ಮನಿಯ ಅರಸನು ರಷಿಯಾದ ಝಾರನ್ನು ಕುರಿತು
—"ನೀವು ಸೇನೆಯನ್ನು ಕೂಡಿಡಲು ಕಾರಣವೇನು?" ಎಂದು ಕೇಳಲು ಅದಕ್ಕೆ
"ನಾನು ಸುಮ್ಮನೆ ಕೂಡಿಡುತ್ತೇನೆ; ಹೊರಗೆ ಕಳುಹುವ ಉದ್ದೇಶವಿಲ್ಲ."—ಎಂದು
ಅವನು ಉತ್ತರಕೊಟ್ಟನು. ಆದರೆ ಈ ಉತ್ತರವು ಜರ್ಮನಿಗೆ ನಿಜವೆಂದು ತೋರಲಿಲ್ಲ

ರಷಿಯಕ್ಕೂ ಫ್ರಾನ್ಸಿಗೂ ಪರಸ್ಪರಸಹಾಯಕವಾದ ಒಪ್ಪಂದವಿರುವುದರಿಂದ
ಫ್ರಾನ್ಸಿನವರು ರಷಿಯಾದೇಶಕ್ಕೆ ಸಹಾಯಮಾಡಬೇಕಾಯಿತು. ಫ್ರಾನ್ಸಿನವರು ಸರ್ವಿ
ಯಾ ಹಾಗೂ ರಷಿಯಾದವರಿಗೆ ಸಹಾಯಮಾಡುತ್ತಾರೆಂಬ ವಾರ್ತೆಯನ್ನು ಕೇಳಿ
ಸಿಟ್ಟಿನಿಂದ ಜರ್ಮನಿ ಫ್ರಾನ್ಸಿನೊಡನೆ ಯುದ್ಧವನ್ನು ಪ್ರಕಟೀಕರಿಸಿತು.

ಅದುವರೆಗೆ ನಮ್ಮ ಬ್ರಿಟಿಷರು ಶಾಂತಿಸ್ಥಾಪನೆಗಾಗಿ ಬಹಳ ಪ್ರಯತ್ನಪಟ್ಟಿದ್ದರು
ಆದರೆ ಆ ಪ್ರಯತ್ನವು ಸಫಲವಾಗಲಿಲ್ಲ. ಮುಂದೆ ಜರ್ಮನಿ ಆಗಸ್ಟ ೪ನೆಯ

ತಾರೀಖಿನ ದಿವಸ ಇಂಗ್ಲಂಡಿನೊಡನೆ ಯುದ್ಧವನ್ನು ಹೂಡಿತು. ಅಲ್ಲಿಂದ ಈಚೆ ಆದ ವೃತ್ತಾಂತವನ್ನು ಅನೇಕರು ವರ್ತಮಾನಪತ್ರಿಕೆಗಳಸಹಾಯದಿಂದ ತಿಳಿದುಕೊಂಡಿರಬಹುದು.

ಬೆಲ್‌ಜಮ್‌ರಾಜ್ಯವು ಕ್ಷುದ್ರವಾದರೂ ಸ್ವತಂತ್ರರಾಜ್ಯವು. "ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು"-- ಎಂಬಂತೆ ಅನೇಕ ಮಹತ್ಕಾರ್ಯಗಳನ್ನು ಮಾಡಿ ತಾವು ಎಂಥವರೆಂಬುದನ್ನು ಬೆಲ್ಜಿಯನರು ಜರ್ಮನಿಗೆ ತೋರಿಸಿಕೊಟ್ಟರು.

ನಶ್ವರವಾದ ಈ ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ. ಕೇವಲ ಕೀರ್ತಿಯೊಂದೇ ಶಾಶ್ವತವಾಗಿ ನಿಲ್ಲತಕ್ಕದ್ದು. ಬೆಲ್‌ಜಮ್‌ದೇಶದ ಜನರೆಲ್ಲರೂ ಸತ್ಯಪ್ರತಿಜ್ಞೆಗಾಗಿ ತಮ್ಮ ಸಮಸ್ತಸೌಖ್ಯಗಳನ್ನು ತೃಣೀಕರಿಸಿ, ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿದರು. ಬೆಲ್‌ಜಮ್ ಜನರ ಕೀರ್ತಿ ಶಾಶ್ವತವಾಗಿ ಉಳಿಯಲಿ! ಬೆಲ್‌ಜಮ್ ದೇಶದವರು ಜರ್ಮನಿಗೆ ತಮ್ಮ ರಾಜ್ಯದೊಳಗಿಂದ ಸೇನೆಯನ್ನು ತೆಗೆದುಕೊಂಡು ಹೋಗುವುದಕ್ಕೆ ದಾರಿಯನ್ನು ಬಿಟ್ಟುಕೊಟ್ಟಿದ್ದರೆ ಈ ಯುದ್ಧದ ಚರಿತ್ರವೇ ಬೇರೆಯಾಗುತ್ತಿತ್ತು.

ಮೊದಲು ಜರ್ಮನಿಯವರು ೧೫ ದಿವಸಗಳಲ್ಲಿಯೇ ಪ್ಯಾರಿಸನ್ನು ಹಿಡಿಯಬೇಕೆಂದೂ, ಅನಂತರ ರಷಿಯಾದೇಶವನ್ನು ಹಸ್ತಗತಮಾಡಿಕೊಳ್ಳಬೇಕೆಂದೂ ಆಲೋಚಿಸಿದ್ದರು. ಆದರೆ ಅವರ ಆ ಆಲೋಚನೆ ಸಿದ್ಧಿಯಾಗಲಿಲ್ಲ. ಓಡುವವನ ಕಾಲಿಗೆ ಮುಳ್ಳು ಸಿಕ್ಕಿದಂತೆ ಬೆಲ್‌ಜಮ್‌ದೇಶದವರು ಆತಂಕಪಡಿಸಿದ್ದರಿಂದ ಅವರ ಎಲ್ಲ ಆಶೆಯೂ ಭಂಗವಾಗಿ ಏಕೆ ಯುದ್ಧವನ್ನು ಮಾಡಿದುದೆಂಬ ಬಗ್ಗೆ ಪಶ್ಚಾತ್ತಾಪ ಉಂಟಾಗುತ್ತಿದೆ.

ಪ್ರಕೃತ ನಮ್ಮ ಇಂಗ್ಲಿಷರು ಈ ಯುದ್ಧದಲ್ಲಿ ಪ್ರವೇಶಮಾಡಿರುವುದರಿಂದ ನಮ್ಮ ಭರತಖಂಡದ ಸಮಸ್ತರಾಜರೂ, ಸಮಸ್ತಪ್ರಜೆಗಳೂ ಏಕಮನಸ್ಕರಾಗಿ ಸಹಾಯಮಾಡಬೇಕೆಂದೂ, ರಣದೇವತೆ ಇವರನ್ನೇ "ವಿಜಯ"ವೆಂಬ ಹೂಮಾಲೆಯಿಂದ ಅಲಂಕರಿಸಬೇಕೆಂದೂ, ಅನನ್ಯಭಾವದಿಂದ ಪ್ರಾರ್ಥಿಸುವ!

ಸ್ನೇಹ.

"A friend in need is a friend indeed"

"उत्सवे व्यसने चैव दुर्भिक्षे शत्रुविग्रहे ।
राजद्वारे श्मशाने च यस्तिष्ठति स बांधवः ॥" -

—हितोपदेश

"He is a friend who holds the hand of a friend in distress and in affliction.
— *Maxim.*

ಸ್ನೇಹಿತರಿಲ್ಲದೆ ಕಾಲಕಳೆಯುವುದು ಕಷ್ಟ. ಸ್ನೇಹಿತನೇ ನಮ್ಮ ರಕ್ಷಕನು. ಆತನು ನಮ್ಮ ಅಜ್ಞಾನವನ್ನು ಪರಿಹರಿಸುವನು. "ಪ್ರಪಂಚದಲ್ಲಿ ಗೆಳೆತನವಿಲ್ಲದಿರುವುದು ಜಗತ್ತಿಗೆ ಸೂರ್ಯನಿಲ್ಲದಿರುವ ಹಾಗೆ"—ಎಂದು ಒಬ್ಬ ವಿದ್ವಾಂಸನೂ, "ಗೆಳೆಯರಿಲ್ಲದ ಪ್ರಪಂಚವು ಅರಣ್ಯದ ಹಾಗೆ"—ಎಂದು ಮತ್ತೊಬ್ಬ ವಿದ್ವಾಂಸನೂ ಹೇಳಿರುತ್ತಾರೆ.

ಮೇಲಣ ವಿವರಣೆಯಿಂದ ನಮಗೆ "ಸ್ನೇಹಿತರ ಆವಶ್ಯಕತೆ" ಈ ಪ್ರಪಂಚದಲ್ಲಿ ಎಷ್ಟಿರುತ್ತದೆಂಬುದು ಸಹಜವಾಗಿ ತಿಳಿಯುವಂತಿದೆ. ಇನ್ನು ನಿಜವಾದ ಸ್ನೇಹಿತನು ಯಾರು? ಎಂಬುದನ್ನು ವಿಚಾರಿಸುವ. ಹೊಗೆಬಂಡಿಯಲ್ಲಿ ನಮ್ಮೊಡನೆ ಕುಳಿತು ಪ್ರಯಾಣಮಾಡುತ್ತ ಒಂದೆರಡು ಮಾತನಾಡಿದವರೂ, ನಾವು ಊಟಮಾಡುವ ಸತ್ರದಲ್ಲಿ ಇಲ್ಲವೆ ಖಾನಾವಳಿಯಲ್ಲಿ ಊಟಕ್ಕೆ ಬಂದವರೂ, ನಮ್ಮನ್ನು ಎಲ್ಲಿಯಾದರೂ ಒಂದು ದಿವಸ ನೋಡಿ ಮಾತನಾಡಿದವರೂ, ಹಾದಿಯಲ್ಲಿ ಒಂದೆರಡು ಬಾರಿ ಕಲೆತವರೂ—ಈ ಬಗೆಯ ಅನೇಕ ಜನರನ್ನು ನಾವು ಮಿತ್ರರೆಂದು ಕರೆವೆವು. ಆದರೆ ಅವರು ನಿಜವಾದ ಮಿತ್ರರಲ್ಲ. ಇಂಥ ಸ್ನೇಹಿತರಿಗೆ "ಸ್ನೇಹದ ಪ್ರತಿಬಿಂಬಗಳು" ಎಂಬ ಹೆಸರನ್ನು ಒಬ್ಬ ಮಹಾಪಂಡಿತನು ಕೊಟ್ಟಿದ್ದಾನೆ. ಯಾವನು ಕಷ್ಟದಲ್ಲಿಯೂ ಸುಖದಲ್ಲಿಯೂ ಏಕರೀತಿಯಾಗಿದ್ದುಕೊಂಡು ನಮಗೆ ಹಿತವನ್ನೇ ಬಯಸುತ್ತಾ ನಮ್ಮ ಶ್ರೇಯಸ್ಸಿಗೆ ಕಾರಣವಾಗುತ್ತಾನೋ ಅವನೇ ನಿಜವಾದ ಸ್ನೇಹಿತನು.

ನಾವು ಚೆನ್ನಾಗಿ ಬಾಳುವುದೂ ಕೆಟ್ಟುಹೋಗುವುದೂ ಎಲ್ಲವೂ ನಾವು ಆರಿಸುವ ಮಿತ್ರರ ಮೇಲೆ ಅವಲಂಬಿಸಿರುವುದು. ಪ್ರಪಂಚದಲ್ಲಿ ಕೆಲವರು ನಮ್ಮಲ್ಲಿ ಹಣವಿರುವ ವರೆಗೆ ಸ್ನೇಹವನ್ನು ಬೆಳೆಯಿಸುತ್ತಾರೆ. ಹಣವು ತೀರಿತೆಂದರೆ "ನೀನು ಯಾರು?" ಎಂದು ಅಸಹನೀಯ ವಾಕ್ಯಗಳನ್ನಾಡುತ್ತಾರೆ. ಇದರ ಮೇಲಿಂದಲೇ "ಗಂಟಿರುವ ವರೆಗೆ ಗೆಳೆಯರು" ಎಂಬ ನಾಣ್ಣುಡಿ ಉಂಟಾಗಿದೆ. ಸಿಕ್ಕಸಿಕ್ಕ ಜನರ ಗುರುತನ್ನು ಮಾಡಿಕೊಳ್ಳಬಾರದು. ಏಕೆಂದರೆ ಜಗತ್ತಿನಲ್ಲಿರುವ ಜನರೆಲ್ಲರೂ ಯಾವ ಪ್ರಕಾರದವರಿರುತ್ತಾರೆಂಬುದು ನಮಗೆ ಗೊತ್ತಿರುವುದಿಲ್ಲ. ಆದುದರಿಂದ ನೀವು ಸಜ್ಜನರ ಸಹವಾಸದಲ್ಲಿಯೇ ಕಾಲಕಳೆಯುವ ಜನರ ಮಿತ್ರತ್ವವನ್ನು ಸಂಪಾದಿಸಿ, ನಿಮ್ಮ ಕರ್ತವ್ಯವನ್ನು ಯೋಗ್ಯರೀತಿಯಿಂದ ಮಾಡಿ ಕೀರ್ತಿಯನ್ನು ಸಂಪಾದಿಸಿ!! ಇದಕ್ಕಿಂತ ಈ ಜಗತ್ತಿನಲ್ಲಿ ಹೆಚ್ಚಿನದು ಯಾವುದು?

ಸುಭಾಷಿತಕುಸುಮಾವಲಿ

ಯಾವಾಗಲೂ ಸತ್ಯವನ್ನೇ ನುಡಿಯುವುದು, ಉದ್ಯೋಗದಲ್ಲಿ ತೊಡಗಿರುವುದು, ತನ್ನ ಕರ್ತವ್ಯವನ್ನು ದಕ್ಷತೆಯಿಂದ ಮಾಡುವುದು, ಪ್ರಾಮಾಣಿಕತೆಯಿಂದ ನಡೆಯುವುದು.—ಈ ಮೊದಲಾದ ಗುಣಗಳಿಂದ ಮಂಡಿತನಾದ ಮನುಷ್ಯನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಶಾಶ್ವತವಾದ ಕೀರ್ತಿಯನ್ನು ಅನುಭವಿಸುವನು.

* * *

ದೊಡ್ಡ ಮನೆತನದಲ್ಲಿ ಹುಟ್ಟಿದವರು ದುರ್ಮಾರ್ಗಿಗಳಾಗುವುದಿಲ್ಲವೆಂದು ಹೇಳಲಾಗದು. ಚಂದನವೃಕ್ಷದಿಂದ ಹುಟ್ಟಿದ ಬೆಂಕಿ ಸುಡುವುದಿಲ್ಲವೆನ್ನಬಹುದೇ?

* * *

ಸದಾಚಾರ, ಸೌಜನ್ಯ, ಆತ್ಮಸನ್ಮಾನ ಮೊದಲಾದ ಈ ಗುಣಗಳನ್ನು ಸ್ತ್ರೀಯರಿಂದಲೇ ಪುರುಷರು ಕಲಿತುಕೊಳ್ಳಬೇಕು.

* * *

ಆಮಂತ್ರಣವಿಲ್ಲದೆ ಹೋಗುವವನೂ, ಹೇಳದೆ ಕೇಳದೆ ಮಾತಾಡುವವನೂ, ಹಾದಿಯಲ್ಲಿ ತಿನ್ನುತ್ತ ಹೋಗುವವನೂ ಅತಿಮೂರ್ಖನು.

* * *

ಸ್ವಧರ್ಮದ ಮೇಲಣ ಅಭಿಮಾನದಿಂದ ಅದನ್ನು ಪ್ರಸಾರಗೊಳಿಸುವುದಕ್ಕಾಗಿ ಯಾರು ಪರಧರ್ಮವನ್ನು ನಿಂದಿಸುವರೋ ಅವರು ಸ್ವಧರ್ಮವೃದ್ಧಿಗೆ ವಿಘ್ನವನ್ನು ತಂದುಹಾಕುವರು. ಈ ನಡತೆ ತುಚ್ಛವಾಗಿದೆ. ಆದುದರಿಂದ ಯಾರೂ ಪರಧರ್ಮವನ್ನು ನಿಂದಿಸಬಾರದು.

* * *

ಸಾಧುಗಳನ್ನೂ, ಹಿರಿಯರನ್ನೂ, ಗುರುಗಳನ್ನೂ, ಅರಸರನ್ನೂ ಎಂದೂ ನಿಂದಿಸಬಾರದು. ಅವರೊಡನೆ ಅತಿಪ್ರಸಂಗವನ್ನು ಮಾಡಬಾರದು.

* * *

ಆಗರ್ಭಶ್ರೀಮಂತತೆ, ಅನುಪಮಸೌಂದರ್ಯ, ನೂತನತಾರುಣ್ಯ, ಅಲೌಕಿಕ ಸಾಮರ್ಥ್ಯ, ಇವುಗಳಲ್ಲಿ ಒಂದಿದ್ದರೆ ಮನುಷ್ಯನನ್ನು ನಾಶಗೊಳಿಸುವುದಕ್ಕೆ ಸಾಕು. ಇವೆಲ್ಲ ಒಂದೇ ಸ್ಥಳದಲ್ಲಿ ಒಟ್ಟುಗೂಡಿದರಂತೂ ಕೇಳುವುದೇನು?

* * *

ಐಶ್ವರ್ಯದಿಂದ ಪ್ರಾಪ್ತವಾದ ಮದವು ಐಶ್ವರ್ಯವು ಹೋದರೂ ಹೋಗುವುದಿಲ್ಲ. ತಾರುಣ್ಯದ ಯೋಗದಿಂದ ಪ್ರಾಪ್ತವಾದ ಮದವು ತಾರುಣ್ಯವು ನಷ್ಟವಾದರೂ

ಹೋಗುವುದಿಲ್ಲ. ಗರ್ವದಿಂದ ಹುಟ್ಟಿದ ತಾಪವು ಶೀತೋಪಚಾರಗಳಿಂದ ಶಾಂತವಾಗುವುದಿಲ್ಲ. ವಿಷಯವೆಂಬ ನಂಜಿನಿಂದ ಸಾಯುವುದು ನಿಶ್ಚಯವೆಂದು ತಿಳಿದಿದ್ದರೂ, ಮನುಷ್ಯನು ಅದರ ಸವಿಯನ್ನು ತೆಗೆದುಕೊಳ್ಳದೆ ಬಿಡುವುದಿಲ್ಲ.

* * *

ಸುಶಿಕ್ಷಿತರೆನಿಸಿಕೊಳ್ಳುವರು, ಬರೀ ತಮ್ಮ ಸೌಖ್ಯವನ್ನೇ ನೋಡಿಕೊಳ್ಳದೆ, ಲೋಕಕಲ್ಯಾಣಕ್ಕೂ ರಾಜ್ಯದ ಸುವ್ಯವಸ್ಥೆಗೂ ಕೈಯಿಂದಾದಷ್ಟು ಸಹಾಯ ಮಾಡಬೇಕು.

* * *

ಜೀವವು ಹೋಗುವಂಥ ಪ್ರಸಂಗವು ಬಂದರೂ "ಸುಳ್ಳಾಡಬಾರದು". ದೇವರು ನಮಗೆ ನಾಲಗೆಯನ್ನು ಕೊಟ್ಟದ್ದು ಸತ್ಯವನ್ನೇ ಆಡುವುದಕ್ಕೆ ಹೊರತು ಸುಳ್ಳನ್ನಾಡುವುದಕ್ಕೆ ಅಲ್ಲ.

* * *

ತಮಗಿಂತಲೂ ದೊಡ್ಡವರಿಗೆ ಸನ್ಮಾನವನ್ನು ಮಾಡಬೇಕು. ತಮ್ಮ ಸರಿಕರ ಮುಂದೆ ಹೆಮ್ಮೆಯನ್ನು ತೋರಿಸಬಾರದು. ಆತ್ಮಸ್ತುತಿಯನ್ನು ಮಾಡಿಕೊಳ್ಳಬಾರದು. ಪರರ ಛಿದ್ರಗಳನ್ನು ಎತ್ತಬಾರದು.

* * *

ನಾಲ್ಕು ಮಂದಿ ಸಂಭಾವಿತರು ಕುಳಿತಾಗ, ತಂಬಾಖುಸೇದಬಾರದು. ಪುಡಿಯೇರಿಸಬಾರದು. ನೈತುರಿಸಿಕೊಳ್ಳಬಾರದು. ಬಾಯಿಯೊಳಗೆ ಬೆಟ್ಟಿಡಬಾರದು.

* * *

ಒಂಟೆಯನ್ನು ಮಧುವನಕ್ಕೆ ಹೊಡೆದರೂ ಅದು ಬೇವಿನ ಸೊಪ್ಪನ್ನೇ ಹುಡುಕುವುದೆಂಬ ನುಡಿಯನ್ನು ಎಲ್ಲರೂ ಕೇಳಿರಬಹುದು. ಅದೇ ರೀತಿಯಲ್ಲಿ ನೀಚರಿಗೆ ಎಷ್ಟು ರೀತಿಯಿಂದ ಬೋಧಿಸಿದರೂ ಅವರ ಮನಸ್ಸು ದುರ್ಮಾರ್ಗದ ಕಡೆಗೇ ಸೆಳೆಯಲ್ಪಡುವುದೇ ಹೊರತು, ಬೇರೆ ಕಡೆಗೆ ತಿರುಗದು.

* * *

ಅರಸನು ಸಣ್ಣವನಾದರೂ ಮನುಷ್ಯನೆಂದು ತಿಳಿಯಕೂಡದು. ಆತನು ಮನುಷ್ಯರೂಪವನ್ನು ಧರಿಸಿದ ಮಹಾದೇವನೇ ಸರಿ! ಆದುದರಿಂದ ಜನರು ಭಯದಿಂದಲೂ ಭಕ್ತಿಯಿಂದಲೂ ನಡೆಯಬೇಕು.

* * *

ಯಾವ ಮನುಷ್ಯನು ತನ್ನ ಕೈಯೆತ್ತಿ ಒಂದು ಕಾಸನ್ನಾದರೂ ಬಡಬಗ್ಗರಿಗೆ ಕೊಡುವುದಿಲ್ಲವೋ ಅಥವಾ ಯಾವನು ತನ್ನ ಹಣದಿಂದ ಸುಖವನ್ನಾದರೂ ಉಪ

ಭೋಗಿಸುವುದಿಲ್ಲವೋ, ಅಂಥವನು ಕೂಡಿಸಿಟ್ಟ ಹಣಕ್ಕೆ ನಾಶದ ಹೊರತು ಮತ್ತೊಂದು ಗತಿಯಿಲ್ಲ.

* * *

ಕೇವಲ ಅಲ್ಪವಾದ ಪದಾರ್ಥಗಳೂ ಸದ್ಗುಣವುಳ್ಳ ವಸ್ತುವಿನೊಡನೆ ಸೇರಲು ಗೌರವವನ್ನು ಪಡೆಯುತ್ತವೆ. ಕೋಗಿಲೆಗಳ ಗುಂಪಿನಲ್ಲಿ ಕೂಗದೆ ಕುಳಿತಿರುವ ಕಾಗೆಯನ್ನು ಕೋಗಿಲೆಯೆಂದೇ ಹೇಳುತ್ತಾರಲ್ಲವೆ? ವಿದ್ವಾಂಸರ ಸಭೆಯಲ್ಲಿ ವಿದ್ವಾಂಸನಂತೆ ವಸ್ತ್ರಾಲಂಕಾರಗಳನ್ನು ಧರಿಸಿ, ಮೌನಭಾವವನ್ನು ವಹಿಸಿದ ಮನುಷ್ಯನನ್ನು ವಿದ್ವಾಂಸನೆಂದೇ ಜನರು ಭಾವಿಸುವರಲ್ಲವೇ?

* * *

ಅತ್ಯಧಿಕವಾದ ಅಭಿಲಾಷೆಯುಳ್ಳವನೇ ದರಿದ್ರನು. ಸದಾ ಸಂಪೂರ್ಣವಾದ ಸಂತೋಷದಲ್ಲಿ ಕಾಲಕಳೆಯುವವನೇ ಧನಿಕನು. ವಿಷಕ್ಕಿಂತಲೂ ವಿಷಯಾಭಿಲಾಷೆಯೇ ಹೆಚ್ಚಿನ ವಿಷವು. ಕೆಟ್ಟ ಭಾವನೆಗಳುಳ್ಳವನೇ ಕಳ್ಳನು. ಸದಾ ವಿಷಯ ಲಂಪಟನಾದವನೇ ದುಃಖಿ.

* * *

"ಸತ್ಯಕ್ಕೆ ಸಾವಿಲ್ಲ". "ಸುಳ್ಳಿಗೆ ಸುಖವಿಲ್ಲ". ಈ ಎರಡು ನಾಣ್ನುಡಿಗಳನ್ನು ಸಮಸ್ತರೂ ಕೇಳಿರಬಹುದು. ಯಾವಾಗಲೂ ಸತ್ಯವನ್ನೇ ನುಡಿಯಬೇಕು. ಸುಳ್ಳಿಗೆ ಎಂದೂ ಜಯವಾಗಲಾರದು. ಸುಳ್ಳಾಡುವುದರಿಂದ ಸ್ವಲ್ಪ ಕಾಲ ಇತರ ಜನರನ್ನು ಮೋಸಮಾಡಿ ಸ್ವಪ್ರಯೋಜನವನ್ನು ಪಡೆಯಬಹುದು. ಆದರೆ ಕೊನೆಗೆ ಸುಳ್ಳು ಹೊರಬಿದ್ದು ಅದರಿಂದ ಸುಳ್ಳಾಡುವನಿಗೆ ತಕ್ಕ ಅಪಮಾನವೂ ಹಾನಿಯೂ ನಿಜವಾಗಿ ಆಗುವುದು.

* * *

ಸಮಯವರಿತು ನಾಲಗೆಯನ್ನು ಬಿಗಿಹಿಡಿಯಬೇಕು. ಪರರನ್ನು ದೂಷಿಸಬೇಕೆಂದು ನಾಲಗೆ ಕುಣಿದಾಡುತ್ತಿದ್ದರೆ, ಅದನ್ನು ವಿಚಾರವೆಂಬ ಕಡಿವಾಣದಿಂದ ಬಿಗಿಹಿಡಿದು ಸುಮ್ಮನೆ ಇರಿಸಬೇಕು. ನಾಲ್ಕು ಮಂದಿ ಸಂಭಾವಿತರೊಳಗೆ ಮಾತಾಡುವಾಗ ಯಾರಿಗೂ ಅಪ್ರಿಯವಾಗದಂತೆ ಮಾತಾಡುತ್ತಿರಬೇಕು.

* * *

ಪರರ ಪತ್ರಗಳನ್ನು ಓದುವುದು, ಎರಡನೆಯವರ ಏಕಾಂತಕ್ಕೆ ಕಿವಿಗೊಡುವುದು, ಕೊಟ್ಟ ವಚನವನ್ನು ತಪ್ಪಿಸುವುದು, ತಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ಪೃಚ್ಛಾಪೃಚ್ಛೆ ಮಾಡುವುದು,— ಇತ್ಯಾದಿ ಅನೇಕ ಚಟಗಳಿಗೆ ಅಧೀನರಾದವರು, ತಮ್ಮ ವೇಳೆಯನ್ನು ಸಜ್ಜನರ ಸಹವಾಸದಲ್ಲಿ ಕಳೆದರೆ ಅವರ ದುಷ್ಪ್ರವೃತ್ತಿ ದೂರವಾಗುವುದು.

* * *

ಪರಾನ್ನವನ್ನು ಭುಂಜಿಸುವವನೂ, ಪರಗೃಹವಾಸವಮಾಡುವವನೂ, ನಿರುದ್ಯೋಗಿಯಾಗಿ ತನ್ನ ಕಾಲವನ್ನು ಸೋಮಾರಿತನದಲ್ಲಿ ಕಳೆಯುವವನೂ, ಪರರಿಗೆ ಮೋಸಮಾಡಿ ತನ್ನ ಮನೆಯನ್ನು ತುಂಬಿಕೊಳ್ಳುವವನೂ, ಬದುಕಿದ್ದರೂ ಸತ್ತವರು.

* * *

ಅಸಾಧ್ಯವಾದ ಅರ್ಥದ ನಿಮಿತ್ತ ಪ್ರಯತ್ನಮಾಡಬಾರದು. ಎರಡನೆಯವರ ಮನಸ್ಸಿಗೆ ಹತ್ತುವಂಥ ನಗೆಮಾತುಗಳನ್ನು ಎಂದಿಗೂ ಆಡಬಾರದು. ತಮಗಿಂತ ಕಡಮೆಯ ಯೋಗ್ಯತೆಯವರೊಡನೆ ವರ್ತಿಸುವಾಗ, ತಮ್ಮ ಮಾತಿನಿಂದಾಗಲಿ ಕೃತಿಯಿಂದಾಗಲಿ ತಾವು ಅವರಿಗಿಂತ ಹೆಚ್ಚಿನವರೆಂದು ತೋರಿಸಿಕೊಳ್ಳಬಾರದು.

* * *

ಮಾನಹಾನಿಯಾಗಿ ಜೀವಿಸುವುದಕ್ಕಿಂತ ಸಾಯುವುದು ಲೇಸು. ಅಸತ್ಯವನ್ನು ನುಡಿಯುವುದಕ್ಕಿಂತ ಮೌನಿಯಾಗಿರುವುದು ಒಳ್ಳೆಯದು. ಪರಧನವನ್ನು ಅಪಹರಿಸುವುದಕ್ಕಿಂತ ಭಿಕ್ಷವೆತ್ತುವುದು ಮೇಲು.

* * *

ಲೋಕಹಿತಕ್ಕಾಗಿ, ಸತ್ಯಕ್ಕಾಗಿ, ಅನಾಥಸಂರಕ್ಷಣೆಗಾಗಿ, ತಮ್ಮ ಪ್ರಾಣಗಳನ್ನು ಅರ್ಪಿಸುವ ಮನುಷ್ಯರೇ ನಿಜವಾದ ದೇಶಭಕ್ತರು. ಇಂಥವರಿಗೆ ನಾವು ನಮ್ಮ ಕೈಲಾದ ಮಟ್ಟಿಗೆ ಸಹಾಯಮಾಡಬೇಕು.

* * *

ರಾಷ್ಟ್ರೋನ್ನತಿಗಾಗಿ ನಮ್ಮ ನಾಗರೀಕರ ಕರ್ತವ್ಯಗಳು ಯಾವುವೆಂದರೆ:— ೧ ಜನರೊಳಗೆ ಹಬ್ಬಿರುವ ಅಜ್ಞಾನವನ್ನು ನಿವಾರಿಸುವುದು. ೨ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡುವುದು. ೩ "ಒಕ್ಕಟ್ಟೇ ಬಲವು"ಎಂಬ ಮಾತಿನ ಪ್ರಕಾರ ನಡೆಯುವುದು. ೪ ಜನರಲ್ಲಿ ರೂಢಿಯಾಗಿರುವ ಕೆಟ್ಟ ನಡತೆಗಳನ್ನು ಕಿತ್ತುಹಾಕಿ ಅವರನ್ನು ಸನ್ಮಾರ್ಗಕ್ಕೆ ತರುವುದು. ೫ ರಾಷ್ಟ್ರೋನ್ನತಿಗೆ ವ್ಯಾಪಾರವೂ ಒಂದು ಮುಖ್ಯಸಾಧನವಾಗಿರುವುದರಿಂದ, ವ್ಯಾಪಾರಸ್ಥರು ಸತ್ಯವನ್ನು ಸ್ಮರಿಸಿ ಅಪ್ರಮಾಣಿಕತೆಗೆ ಇಂಬುಗೊಡದೆ ನ್ಯಾಯಾನ್ಯಾಯಗಳನ್ನು ವಿಚಾರಿಸಿ ತಮ್ಮ ದೇಶಬಾಂಧವರೊಡನೆ ಒಮ್ಮನಸ್ಸಿನಿಂದಲೂ, ನಿಸ್ಪೃಹತೆಯಿಂದಲೂ, ನಡೆಯುವುದು.

* * *

ತಾಯಿ ತಂದೆ ಮೊದಲಾದ ಕುಲವೃದ್ಧರ ಸೇವೆಯನ್ನು ಭಕ್ತಿಯಿಂದ ಮಾಡುವ ಮನುಷ್ಯನ ಆಯುಷ್ಯ, ಬುದ್ಧಿ, ಕೀರ್ತಿ, ಶಕ್ತಿ, ನಾಲ್ಕೂ ಬೆಳೆಯುತ್ತವೆ. ಆದುದರಿಂದ ಪ್ರತಿಯೊಬ್ಬರೂ ತಮ್ಮ ತಾಯಿತಂದೆಗಳ ಸೇವೆಯನ್ನು ಭಕ್ತಿಯಿಂದ ಮಾಡಬೇಕು.

* * *

ಕೆಲವರು ತಮಗೆ ಯಾರಾದರೂ ಕೇಡುಬಗೆದರೆ, ಇಲ್ಲವೆ ಅವಮರ್ಯಾದೆ ಮಾಡಿದರೆ, ಸಮಯಸಾಧಿಸಿ ಅವರಿಗೆ ತಿರಿಗಿ ಕೇಡನ್ನಾಗಲಿ ಅವಮರ್ಯಾದೆಯನ್ನಾಗಲಿ ಮಾಡಿ ಸೇಡುತೀರಿಸಿಕೊಳ್ಳುವರು. ಈ ಸ್ವಭಾವವು ಬಹಳ ಕೆಟ್ಟದ್ದು. ಸುಜ್ಞರಾದವರು ಈ ದುಸ್ಸ್ವಭಾವಕ್ಕೆ ತಮ್ಮ ಮನಸ್ಸಿನಲ್ಲಿ ಎಡೆಗೊಡಬಾರದು.

* * *

ವಿಷಯಾಭಿಲಾಷೆ ವಿಷವೆಂತಲೂ, ಐಹಿಕಸುಖಸಾಧನವು ದುಃಖಕ್ಕೆ ತವುರೆಂತಲೂ, ಅದರ ಪರಿಣಾಮವು ಕ್ಷಣಭಂಗುರವೆಂತಲೂ, ಸಂಸಾರವು ನರಕ ಸದೃಶವೆಂತಲೂ, ತಿಳಿದುಕೊಂಡು, ಯಾವಾಗಲೂ ನ್ಯಾಯದಿಂದಲೇ ನಡೆದು, ದಯಾಘನನಾದ ಪರಮೇಶ್ವರನ ಪ್ರೀತಿಯನ್ನು ಸಂಪಾದಿಸಿ, ನಾವು ನಮ್ಮ ಈ ನರ ದೇಹದ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕು.

ವ್ಯವಹಾರಿಕ ಮಾಹಿತಿ

೧ ಹೇಗೆ ಓದಬೇಕು?

"ಹೇಗೆ ಓದಬೇಕು?" ಎಂಬ ವಿಷಯದಲ್ಲಿ ಒಬ್ಬ ಆಂಗ್ಲಪಂಡಿತನು ಈ ಕೆಳಗೆ ಬರೆದ ಸೂಚನೆಗಳನ್ನು ಮಾಡಿರುವನು. ಅವು ಯಾವುವೆಂದರೆ:—

(೧) ಓದಿದ್ದರ ಸಾರಾಂಶವನ್ನು ಬರೆಯಬೇಕು.

(೨) ಓದಬೇಕಾದ ಪುಸ್ತಕಗಳನ್ನು ಎರಡು ಸಾರಿ ಓದಬೇಕು. ಏಕೆಂದರೆ ಮೊದಲನೆಯ ಸಾರಿ ಓದುವಾಗ ಪುಸ್ತಕದೊಳಗಣ ವಿಷಯಗಳು ಮನಸ್ಸಿಗೆ ಹತ್ತದೆ ಇರಬಹುದು; ಇಲ್ಲವೆ ಕೆಲವು ತಪ್ಪುತಿಳಿವಳಿಕೆಗಳಾಗಿರಬಹುದು. ಮತ್ತೆ ಓದುವಾಗ ಅವೇ ವಿಚಾರಗಳು ನಮಗೆ ಸ್ಪಷ್ಟವಾಗಿಯೂ, ಮನೋರಂಜಕವಾಗಿಯೂ ಕಾಣುವುವು.

(೩) ಗ್ಲಾಡ್‌ಸ್ಟನ್, ಸ್ಟೆಡ್ ಇತ್ಯಾದಿ ಜಗತ್ಪ್ರಸಿದ್ಧ ಮುತ್ಸದ್ದಿಗಳು ಒಂದು ವಿಷಯವನ್ನು ಓದುವ ಮುಂಚೆ ತಮಗೆ ಆ ವಿಷಯದಲ್ಲಿ ಎಷ್ಟುಮಟ್ಟಿಗೆ ಜ್ಞಾನವುಂಟೆಂಬುದನ್ನು ಮನಸ್ಸಿನಲ್ಲಿ ಆಲೋಚಿಸುತ್ತಿದ್ದರು. ಈ ಪ್ರಕಾರ ವಿಚಾರಿಸುವುದರಿಂದ ಆ ವಿಷಯದ ಜ್ಞಾನವು ಮೊದಲಿಗಿಂತ ಎಷ್ಟು ಹೆಚ್ಚಿತೆಂಬುದು ತಿಳಿಯುವುದು.

(೪) ಸರ್ ವಿಲಿಯಮ್ ಹ್ಯಾಮಿಲ್‌ಟನನು ಹೇಳಿದಂತೆ ಪುಸ್ತಕದಲ್ಲಿ ಗುರುತುಗಳನ್ನು ಮಾಡುವುದು ಯೋಗ್ಯವು. ಇದಕ್ಕೆ ಹಲವು ಬಣ್ಣದ ಪೇನಸೀಲುಗಳನ್ನು ಉಪಯೋಗಿಸಬಹುದು. ಪುಸ್ತಕಗಳಲ್ಲಿ ಗುರುತುಮಾಡುವುದರಿಂದ ಪುಸ್ತಕಗಳಲ್ಲಿಯ

ಯುಕ್ತಿಗಳು, ದೃಷ್ಟಾಂತಗಳು, ಮುಂತಾದ ಅನೇಕ ಮುಖ್ಯಮುಖ್ಯಭಾಗಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟಂತಾಗುವುದು.

(೫) ಗಹನವಾದ ವಿಷಯಗಳ ಮೇಲಣ ಪುಸ್ತಕಗಳನ್ನು ಉಷಃಕಾಲದಲ್ಲಿ ಎದ್ದು ಓದಬೇಕು. ಆ ಕಾಲಕ್ಕೆ ನಮ್ಮ ಮನಸ್ಸು ಬಹಳ ಶಾಂತವಿರುವುದರಿಂದ, ಓದಿದ ವಿಷಯಗಳು ನಮ್ಮಲ್ಲಿ ದೃಢವಾಗಿ ನಿಲ್ಲುವುವು.

ಮೇಲೆ ಬರೆದ ನಿಯಮಗಳನ್ನು ಪಾಲಿಸುವುದರಲ್ಲಿ ವೇಳೆ ವ್ಯಯವಾಗುವುದೆಂಬುದು ನಿಜವು. ಆದರೆ ಪದ್ಧತಿಯನ್ನು ಅನುಸರಿಸಿ ಓದದಿದ್ದರೆ ನಾವು ಓದಿದ್ದರ ಪ್ರಯೋಜನವೇ ಆಗುವುದಿಲ್ಲ.

---

೨ ದೃಷ್ಟಿಮಾಂದ್ಯ.

ಈಗಿನ ಕಾಲದ ಪರಿಸ್ಥಿತಿಯನ್ನು ನೋಡಿದರೆ ವಿಶೇಷವಾಗಿ ೧೦-೧೫ ವರ್ಷದ ತರುಣಬಾಲಕರು ಕಣ್ಣುಗಳ ದೆಸೆಯಿಂದ ವ್ಯಥೆಪಡುವುದನ್ನೂ, ದೇವರು ದಯೆ ಪಾಲಿಸಿದ ನೇತ್ರಗಳಿರುತ್ತ ಉಪನೇತ್ರಗಳ ಸಹಾಯದಿಂದ ತಮ್ಮ ಸ್ವಾಭಾವಿಕಕರ್ತವ್ಯಗಳನ್ನು, ಸಾಗಿಸುವವರ ಸಮೂಹವೇ ಸಮಾಜದಲ್ಲಿ ಹೆಚ್ಚಾಗಿರುವುದನ್ನೂ ನೋಡಬಹುದು. ಈ ಪ್ರಕಾರ ಬಳಲುವ ಜನರಿಗಾಗಿ ಒಬ್ಬ ಅಮೇರಿಕದ ವಿದ್ವಾಂಸನು ಈ ಕೆಳಗೆ ಬರೆದ ಸೂಚನೆಗಳನ್ನು ಮಾಡಿರುವನು.

(೧) ಶುಭ್ರವಾದ ಬೆಳಕಿರುವ ಪ್ರದೇಶದಲ್ಲಿಯೆ ಓದಬೇಕು. ಮಲಗಿಕೊಂಡು ಓದಬಾರದು.

(೨) ಹೆಚ್ಚು ಸಮಯದ ವರೆಗೆ ಒಂದೇ ಕಡೆಗೆ ದೃಷ್ಟಿಸಿ ನೋಡುತ್ತಿರಬಾರದು. ಮದ್ಯಪಾನ, ತಂಬಾಖುಸೇವನ, ಇತ್ಯಾದಿವ್ಯಸನಗಳಿಗೆ ಒಳಗಾಗಿರಬಾರದು. ಕಣ್ಣುಗಳಿಗೆ ಸಾಕಷ್ಟು ವಿಶ್ರಾಂತಿ ಇರಬೇಕು.

(೩) ಕಣ್ಣುಗಳನ್ನು ದಿನಕ್ಕೆ ಎರಡು ಸಾರಿ ಸ್ವಚ್ಛವಾದ ನೀರಿನಿಂದ ತೊಳೆದುಕೊಳ್ಳಬೇಕು. ರೇಲ್ವೆಗಾಡಿಯೊಳಗೆ ಪ್ರವಾಸಮಾಡುವಾಗ, ಇಲ್ಲವೆ ಬಂಡಿಯಲ್ಲಿ ಹೋಗುವಾಗ ಪುಸ್ತಕಗಳನ್ನು ಸರ್ವಥಾ ಓದಬಾರದು.

ಮೇಲೆ ಬರೆದ ನಿಯಮಗಳನ್ನು ಅನುಸರಿಸಿ ನಡೆದರೆ ಅವರಿಗೆ ಯಾವ ತರದ ದೃಷ್ಟಿದೋಷದಿಂದಲೂ ಬಳಲುವ ಪ್ರಸಂಗವು ಬರಲಿಕ್ಕಿಲ್ಲ.

---

೩ ಫಲಾಹಾರ.

ಈಚೆಗೆ ಎಷ್ಟೋ ಪಾಶ್ಚಿಮಾತ್ಯವೈದ್ಯಶಾಸ್ತ್ರಜ್ಞರು ಅಜೀರ್ಣ, ಕಜ್ಜಿ, ಹೃದ್ರೋಗ ಮುಂತಾದ ಅನೇಕ ರೋಗಗಳಿಗೆ ಫಲಾಹಾರವೇ ಉಪಯುಕ್ತವಾದ ಔಷಧವೆಂದು

ನಿರ್ಣಯಿಸಿದ್ದಾರೆ. ಈಗಿನವರಿಗೆ ಮಾತ್ರ ಈ ಶೋಧವು ನೂತನವಾದದ್ದೆಂದು ತೋರುವುದು. ಆದರೆ ನಮ್ಮ ಜನರಿಗೆ ಈ ಕಲ್ಪನೆ ಅನಾದಿಯಿಂದಲೂ ಗೊತ್ತಿತ್ತು. ಅಜೀರ್ಣದಿಂದ ಪೀಡಿತರಾದವರು ಬಾಳೆ, ದಾಳಿಂಬ, ಕಿತ್ತಳೆ ಮೊದಲಾದ ಹಣ್ಣುಗಳನ್ನು ತಿನ್ನುವುದರಿಂದ ಅವರ ಪಚನಶಕ್ತಿ ಒಮ್ಮಿಂದೊಮ್ಮೆ ಪ್ರಜ್ವಲಿತವಾಗಿ ಮಿದುಳಿನ ಶಕ್ತಿಯೂ ಕಾಲಾನುಕ್ರಮದಿಂದ ಹೆಚ್ಚುವುದೆಂಬುದರಲ್ಲಿ ಸಂದೇಹವಿಲ್ಲ. ಕಜ್ಜಿ ಮೊದಲಾದ ಚರ್ಮರೋಗಗಳಿಂದ ಪೀಡಿತರಾದವರು ಕಿತ್ತಳೆಹಣ್ಣಿನ ಇಲ್ಲವೆ ಲಿಂಬೆಹಣ್ಣಿನ ರಸವನ್ನು ಸೇವಿಸಬೇಕು. ಈ ಪ್ರಕಾರ ಕೆಲವು ದಿವಸಗಳ ವರೆಗೆ ಸೇವನೆಮಾಡಿದರೆ ಅವರ ಚರ್ಮರೋಗಗಳು ಕ್ರಮೇಣ ನಾಶವಾಗಿಹೋಗುವುವು. ಇನ್ನೂ ಅನೇಕ ರೋಗಗಳು ಫಲಾಹಾರದಿಂದಲೇ ನಾಶವಾಗಿಹೋಗುವುವು.

---

೪. ವರದಕ್ಷಿಣೆಯಿಂದಾಗುವ ದುಷ್ಪರಿಣಾಮಗಳು.

ನಮ್ಮ ಸಮಾಜದಲ್ಲಿ ನೆಲೆಗೊಂಡಿರುವ ಅನೇಕ ಕೆಟ್ಟ ನಡತೆಗಳಲ್ಲಿ ಮಿತಿಮೀರಿ 'ವರದಕ್ಷಿಣೆ'ಯನ್ನು ತೆಗೆದುಕೊಳ್ಳುವ ನಡತೆ ಒಂದಾಗಿದೆ. ಈ ವಿಘಾತಕವಾದ ನಡತೆಯಿಂದ ಎಷ್ಟೋ ದೈವುಳ್ಳ ಮನೆತನಗಳು ಹಾಳಾಗಿಹೋಗಿವೆ. ಇದರ ಪ್ರಭಾವದಿಂದ ಎಷ್ಟೋ ಸುಶಿಕ್ಷಿತರ ಮನಸ್ಸುಗಳು ಬೆಂದುಹೋಗಿವೆ. ಎಷ್ಟೋ ತರುಣ ಯುವತಿಯರು ತಮ್ಮ ವಿವಾಹಕ್ಕಾಗಿ ತಮ್ಮ ತಂದೆ ಅನೇಕ ಅಸಹನೀಯವಾದ ದುಃಖಗಳನ್ನು ಅನುಭೋಗಿಸಬೇಕಾಗುತ್ತದೆಂದು ತಿಳಿದು ಆತ್ಮಹತ್ಯೆಯನ್ನು ಮಾಡಿಕೊಂಡರು.

ಸದ್ಯದ ಸ್ಥಿತಿಯನ್ನು ನಾವು ನಿಲ್ಲಿಸಲಿಕ್ಕೆ ಪ್ರಯತ್ನಮಾಡದಿದ್ದರೆ, ಮುಂದೆ ನಾವು ಯಾವ ತರದ ಕಷ್ಟಗಳನ್ನು ಅನುಭೋಗಿಸಬೇಕಾಗುತ್ತದೋ ಏನೋ ದೇವರೇ ಬಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಬಂಗಾಲದಲ್ಲಿ "ಸ್ನೇಹಲತಾ" ಎಂಬ ಒಬ್ಬ ೧೫ ವರುಷದ ಹುಡುಗಿ ಪ್ರಾಣತ್ಯಾಗವನ್ನು ಮಾಡಿದ ಸಂಗತಿ ಎಲ್ಲರಿಗೂ ಗೊತ್ತಿರಬಹುದು. ಈ ಹುಡುಗಿಯ ಆತ್ಮಯಾಗದಿಂದ ಬಂಗಾಲೀಜನರಲ್ಲಿ ಬಹಳ ಉದ್ವೇಗವುಂಟಾಗಿದೆ. ಅಲ್ಲಿಯ ಎಷ್ಟೋ ವಿದ್ಯಾರ್ಥಿಗಳು ತಾವು ವರದಕ್ಷಿಣೆಯನ್ನು ಸ್ವೀಕರಿಸಲಿಕ್ಕಿಲ್ಲವೆಂದು ಆಣೆಯನ್ನು ಇಟ್ಟುಕೊಂಡಿರುವರು.

ನಮ್ಮಲ್ಲಿಯಂತೂ ಈ ಚಟವು ಇನ್ನೂ ಕಡಿಮೆಯಾಗಲಿಲ್ಲ. ನಮ್ಮೊಳಗೆ ಸುಶಿಕ್ಷಿತರು ಈ ಕೆಟ್ಟ ನಡತೆಯ ಪ್ರಾಬಲ್ಯವನ್ನು ಕಡಿಮೆಮಾಡುವುದಕ್ಕೆ ಕೈಲಾದ ಮಟ್ಟಿಗೆ ಉಪಾಯಗಳನ್ನು ಮಾಡುವುದುಚಿತವು. ಆಧುನಿಕತರುಣರು ಈ ವಿಷಯದ ಕಡೆಗೆ ಪೂರ್ಣಲಕ್ಷ್ಯಕೊಡುವರೆಂದು ತುಂಬ ನಂಬಿದ್ದೇವೆ.

---

೫. ಪಶುಪಕ್ಷಿಗಳ ಸ್ಮರಣಶಕ್ತಿ.

ಆನೆಯ ಸ್ಮರಣಶಕ್ತಿಯ ವಿಷಯವಾಗಿ ಪ್ರಚಾರದಲ್ಲಿ ಅನೇಕ ಕಥೆಗಳಿರುವುವು. ಒಮ್ಮೆ ಒಂದು ಸಾಕಿದ ಆನೆ ಅಡವಿಯಲ್ಲಿ ಹೋಗುವಾಗ ಮಾವುತನನ್ನು ಕೆಳಗೆ ಒಗೆದು ಓಡಿಹೋಯಿತು. ೧೮ ವರುಷಗಳ ತರುವಾಯ ಆ ಆನೆಯ ಮಾವುತನು ಅಡವಿಯಲ್ಲಿ ತಿರುಗಾಡುತ್ತಿದ್ದ ತನ್ನ ಆನೆಯನ್ನು ಕರೆದನು. ಆಗ ಅದು ಬಂತು. ಮಾವುತನು ಕುಳಿತುಕೊಳ್ಳುವುದಕ್ಕೆ ಅಪ್ಪಣೆಯನ್ನು ಮಾಡಲು, ಅದು ತನ್ನ ಒಡೆಯನ ಅಪ್ಪಣೆಯನ್ನು ಮೀರದೆ ಅಲ್ಲಿಯೇ ಕುಳಿತಿತು. ಆ ಆನೆ ೧೮ ವರುಷಗಳ ಪೂರ್ವದಲ್ಲಿ ಕಲಿಸಿದ್ದ ಎಲ್ಲ ಸಂಕೇತಗಳನ್ನೂ ಇದುವರೆಗೂ ನೆನಪಿನಲ್ಲಿಟ್ಟುಕೊಂಡಿತ್ತು.

ಕುದುರೆನಾಯಿಗಳ ಸ್ಮರಣಶಕ್ತಿ ವಿಲಕ್ಷಣವಾದದ್ದು. ಆದರೆ ಗಿಳಿ, ಪಾರಿವಾಳ ಇತ್ಯಾದಿ ಪಕ್ಷಿಗಳ ಸ್ಮರಣಶಕ್ತಿ ಅದಕ್ಕೂ ಹೆಚ್ಚು ವಿಲಕ್ಷಣವಾದದ್ದು. ಗಿಳಿ ಮನುಷ್ಯರ ಮಾತುಗಳನ್ನು ಚೆನ್ನಾಗಿ ಅನುಕರಿಸುವುದು; ಪಾರಿವಾಳಗಳನ್ನು ನೂರಾರು ಮೈಲು ದೂರದಲ್ಲಿ ಅವುಗಳಿಗೆ ತಿಳಿಯದಂತೆ ಒಯ್ದುಬಿಟ್ಟರೂ, ಅವು ತಿರಿಗಿ ಮೊದಲ ಸ್ಥಳಕ್ಕೇ ಬರುವುವು.

---

೬. ದೀರ್ಘಜೀವಿತ್ವ.

ಲೋಕದ ಜನರೆಲ್ಲರೂ ತಾವು ಸಶಕ್ತರೂ, ಒಳ್ಳೆಯ ಮೈಕಟ್ಟಿನವರೂ ದೀರ್ಘಾಯುಷಿಗಳೂ ಆಗಬೇಕೆಂದು ಬಯಸುತ್ತಾರಷ್ಟೇ? ಆದರೆ ಮನುಷ್ಯನ ದೀರ್ಘಜೀವನಕ್ಕೆ ಅವಶ್ಯವಾದ ನಿಯಮುಗಳನ್ನು ತಿಳಿದುಕೊಂಡು ಅವುಗಳನ್ನು ಬಿಡದೆ ಆಚರಿಸುವವರು ಬಲುಕಡಿಮೆ. ಆರೋಗದೃಢಕಾಯರಾಗಿಯೂ, ದೀರ್ಘಾಯುಷಿಗಳಾಗಿಯೂ ಬದುಕಬೇಕೆಂಬ ಅಪೇಕ್ಷೆಯುಳ್ಳವರು ಈ ಕೆಳಗೆ ಬರೆದ ನಿಯಮಗಳನ್ನು ಅನುಸರಿಸಬೇಕು.

೧. ಅಪಕ್ವಪದಾರ್ಥವನ್ನು ತಿನ್ನಬೇಡ.
೨. ನಿರ್ಮಲವಾದ ನೀರನ್ನು ಕುಡಿ.
೩. ತಂಬಾಕುಸೇವನ, ಮದ್ಯಪಾನ, ಇತ್ಯಾದಿ ವ್ಯಸನಗಳಿಗೆ ಅಧೀನನಾಗಬೇಡ.
೪. ನಿತ್ಯವೂ ವ್ಯಾಯಾಮವನ್ನು ಮಾಡು.
೫. ೧೫ ದಿವಸಕ್ಕೊಮ್ಮೆ "ನಿರಾಹಾರ"ವನ್ನು ಮಾಡು.
೬. ನಸುಕಿನಲ್ಲಿ ಎದ್ದು ದೇವರ ಧ್ಯಾನವನ್ನು ಮಾಡು.
೭. ಗೋಡೆಗೆ ತಾಗಿ ಹಾಸಿಗೆಯನ್ನು ಹಾಕಿಕೊಳ್ಳಬೇಡ.
೮. ಚಹಾವನ್ನು ಮಿತವಾಗಿ ಸೇವಿಸು.
೯. ಸ್ವಚ್ಛವಾದ ಹವೆಯಲ್ಲಿರುವುದಕ್ಕೆ ಪ್ರಯತ್ನಪಡು.
೧೦ ದಿನಕ್ಕೆ ೭ ತಾಸು ನಿದ್ದೆಯನ್ನು ಮಾಡು.

---

೭. ಸಂಗೀತಶಾಸ್ತ್ರ.

"Music hath charms to sooth the savage breast,
To soften rocks or bend a knotted oak."

—*An English poet.*

साहित्यसंगीत कलाविहीनः ।
साक्षात् पशुः पुच्छविषाणहीनः ॥ —भर्तृहरि

ಈಗಿನ ಕಾಲದಲ್ಲಿ ಗಾಯನ ಅಥವಾ ಸಂಗೀತಶಾಸ್ತ್ರದ ಕಡೆಗೆ ಜನರ ಲಕ್ಷ್ಯವು ಇರತಕ್ಕಷ್ಟು ಇಲ್ಲದ್ದರಿಂದ ಒಂದು ಕಾಲದಲ್ಲಿ ಊರ್ಜಿತಾವಸ್ಥೆಯನ್ನು ಹೊಂದಿದ ಈ ಶಾಸ್ತ್ರವು ಈಗ ದಿನೇದಿನೇ ನಿತ್ರಾಣವಾಗತೊಡಗಿದೆಯೆಂಬ ಮಾತು ಎಲ್ಲರಿಗೂ ವಿದಿತವಾದದ್ದೇ. ಆದರೆ ಕಳೆದ ೪-೫ ವರ್ಷಗಳಿಂದ ಎಷ್ಟೋ ಸುಶಿಕ್ಷಿತಜನರು ಈ ಶಾಸ್ತ್ರದ ಅಭ್ಯುದಯಕ್ಕಾಗಿ ಅನೇಕ ತರದ ಕಷ್ಟಗಳನ್ನು ಅನುಭವಿಸುತ್ತಿರುವರೆಂಬುದು ಆನಂದದ ಸಂಗತಿಯೇ ಸರಿ. ಈಚೆಗೆ ಮುಂಬಯಿ, ಪುಣೆ ಇತ್ಯಾದಿ ದೊಡ್ಡದೊಡ್ಡ ಪಟ್ಟಣಗಳಲ್ಲಿ ಹಲವರು ಸಂಗೀತಶಾಸ್ತ್ರದ ಲಾಭವು ಜನರಿಗೆ ದೊರೆಯಬೇಕೆಂಬ ಇಚ್ಛೆಯಿಂದ ಹಲವು ಗಾಯನವಾದನದ ವಿದ್ಯಾಲಯಗಳನ್ನು ಸ್ಥಾಪಿಸಿರುವರು. ಸಂಗೀತಶಾಸ್ತ್ರದ ಅಧ್ಯಯನವನ್ನು ಮಾಡಲಿಚ್ಛಿಸುವವರು ಈ ವಿದ್ಯಾಲಯಗಳಲ್ಲಿ ಹೋಗಿ ಸೇರಬೇಕು.

ಇನ್ನು ಕೆಲವರು ಈ ಸಂಗೀತಶಾಸ್ತ್ರದ ಮಹತ್ವವನ್ನು ಅರಿಯದೆ ಈ ಶಾಸ್ತ್ರವು ಅತಿನೀಚವಾದದ್ದೆಂದೂ, ಈ ಶಾಸ್ತ್ರದ ಅಧ್ಯಯನದಿಂದ ಮನುಷ್ಯನು ಅನೇಕ ದುರ್ವ್ಯಸನಗಳಿಗೆ ಒಳಗಾಗುತ್ತಾನೆಂದೂ ಹೇಳುವುದುಂಟು. ಆದರೆ ಅವರು ಹೀಗೆ ಹೇಳುವುದು ಯೋಗ್ಯವಲ್ಲ. ಒಂದು ಶಾಸ್ತ್ರವು ಶ್ರೇಷ್ಠ ಇಲ್ಲವೆ ಕನಿಷ್ಠ ಎಂದು ಹೇಳಬೇಕಾದರೆ, ಅದರಿಂದಾಗುವ ಪ್ರಯೋಜನವನ್ನು ನೋಡಬೇಕಾಗುತ್ತದೆ. ಅವಿಚಾರದ ಮೂಲಕ ಸುಮ್ಮನೆ ಶಾಸ್ತ್ರಗಳ ಮೇಲೆ ಹೆಸರಿಡುವುದು ಸುಜ್ಞರ ಕರ್ತವ್ಯವಲ್ಲ.

ಇನ್ನು ಈ ಶಾಸ್ತ್ರದ ಯೋಜಕತ್ವದ ಕಡೆಗೆ ನೋಡುವ! ಕೇವಲ ಪಶುಪಕ್ಷಿಗಳು ಸಹ ಮಂಜುಳವಾದ ಧ್ವನಿಯಿಂದ ಮೋಹಿತವಾಗುವುವು. ಎಂದಮೇಲೆ ಸಮ್ಮಂಥ ಮನುಷ್ಯರು ಮೋಹಿತರಾಗುವುದೇನಾಶ್ಚರ್ಯ? ಆದುದರಿಂದಲೇ ಭರ್ತೃಹರಿ ಯಾರಿಗೆ ಗಾಯನದ ಅಭಿರುಚಿಯಿಲ್ಲವೋ ಅವರನ್ನು ಪಶುಗಳಲ್ಲಿ ಗಣನೆಮಾಡಿರುವನು; ಯಾರಿಗೆ ಈ ಶಾಸ್ತ್ರದ ಅಭಿರುಚಿ ಇಲ್ಲವೋ ಅಂಥವರ ಅಂತಃಕರಣವು ದುರ್ವಾಸನೆ, ನೀಚವಿಚಾರ ಇತ್ಯಾದಿ ಮನೋವಿಕಾರಗಳಿಂದ ತುಂಬಿರಲೇ ಬೇಕು ಎಂದು ಷೇಕ್ಸಪೀಯರೂ ಒಂದು ಕಡೆಯಲ್ಲಿ ಬರೆದಿರುವನು. ಎಳೆಂಟು ತಿಂಗಳ ಶಿಶು ಕೂಡ ಗಾಯನದ ಮಧುರಧ್ವನಿಯನ್ನು ಕೇಳಿ ಸಂತೋಷಪಡುವುದು. ಕ್ರೋಧಾಗ್ನಿ

ಯಿಂದ ತಪ್ತವಾದ ಭುಜಂಗಮುಗಳು ಸಹ, ಸುಸ್ವರವಾದ ಧ್ವನಿಯಿಂದ ಮೋಹಿತಗಳಾಗಿ ತಮ್ಮ ಹೆಡೆಯಾಡಿಸುವುದನ್ನು ಸಮಸ್ತರೂ ನೋಡಿರಬಹುದು. ಗೋವು ಇತ್ಯಾದಿ ಚತುಷ್ಪಾದಪ್ರಾಣಿಗಳು ಸಹ ಮಂಜುಳವಾದ ಧ್ವನಿಯಿಂದ ಲುಬ್ಧವಾಗಿ ಹೋಗುವುವು. ಈ ಪ್ರಕಾರ ಪ್ರತಿ ಒಬ್ಬನೂ ಕೂಡ ಮಂಜುಳಧ್ವನಿಯಿಂದ ಆನಂದಿತನಾಗುತ್ತಾನೆ.

"ಗಾಯನಂ ಪಂಚಮೋ ವೇದಃ" ಎಂದರೆ ಗಾಯನವು ಐಯ್ದನೆಯ ವೇದವಾಗಿರುತ್ತದೆ. ಇದಕ್ಕೆ "ಗಾಂಧರ್ವವೇದ"ವೆನ್ನುವ ರೂಢಿಯುಂಟು. ಈ ಶಾಸ್ತ್ರವು ನಮ್ಮಲ್ಲಿ ಬಹಳ ವರ್ಷಗಳಿಂದ ಪ್ರಚಾರದಲ್ಲಿದೆ. ಇದಲ್ಲದೆ ಈ ಶಾಸ್ತ್ರವು ಪ್ರತ್ಯಕ್ಷ್ಯ ಬ್ರಹ್ಮದೇವರಿಂದಲೇ ನಿರ್ಮಿತವಾದದ್ದು.

ಈ ಶಾಸ್ತ್ರವನ್ನು ಕಲಿಯುವವರು ತಮ್ಮ ಆರೋಗ್ಯದ ಕಡೆಗೆ ವಿಶೇಷಲಕ್ಷ್ಯವನ್ನು ಕೊಡಬೇಕು. ಮತ್ತೂ ಕಲಿಯುವ ವಿದ್ಯಾರ್ಥಿ ಮೊದಲು ಸಂಗೀತಶಾಸ್ತ್ರವೆಂದರೇನು? ಅದರ ಅಧ್ಯಯನದಿಂದಾಗುವ ಲಾಭಗಳೇನು? ಅದರ ಮಹತ್ವವೇನು? ಇತ್ಯಾದಿ ಅನೇಕಸಂಗತಿಗಳನ್ನು ಸುಜ್ಞರಾದ ಜನರಿಂದ ತಿಳಿದುಕೊಳ್ಳಬೇಕು.

---

೮. ಉಷಃಕಾಲದಲ್ಲಿ ಏಳುವುದರಿಂದುಂಟಾಗುವ ಲಾಭಗಳು.

"Early to bed and early to rise,
Makes a man healthy, wealthy and wise."

—An English Proverb.

ಆಯುಷ್ಯದ ರಕ್ಷಣಾರ್ಥವಾಗಿ ಪ್ರತಿ ಒಬ್ಬರೂ ಬ್ರಾಹ್ಮಮುಹೂರ್ತಕ್ಕೆ ಏಳಬೇಕೆಂದು ಸುಪ್ರಸಿದ್ಧವೈದ್ಯನಾದ ವಾಗ್ಭಟನು ತನ್ನ ಗ್ರಂಥದ ದಿನಚರ್ಯೆಯ ಅಧ್ಯಾಯದಲ್ಲಿ ಹೇಳಿರುವನು. ಆದರೆ ಈ ಆಜ್ಞೆಯಂತೆ ನಡೆಯುವವರು ಬಹಳ ಕಡಿಮೆ. ವಿಶೇಷವಾಗಿ ಸೂರ್ಯೋದಯವಾಗಿ ಬೆಳಕಿಂಡಿಗಳೊಳಗಿಂದ ಮೈಮೇಲೆ ಬಿಸಿಲು ಬಿದ್ದರೂ ಕೂಡ ಇನ್ನೂ ಸ್ವಲ್ಪ ಮಲಗಿಕೊಂಡು ಏಳುವ ಎಂಬ ಆಲೋಚನೆಯನ್ನು ಮಾಡಿ ಹೊದ್ದುಕೊಂಡ ಹಚ್ಚಡವನ್ನು ಮತ್ತಿಷ್ಟು ಮುದುರಿಕೊಂಡು, ಸ್ವಸ್ಥವಾಗಿ ೯ ಘಂಟೆಯ ವರೆಗೆ ಮಲಗುವ ಆಧುನಿಕರು ಅಲ್ಲಲ್ಲಿ ದೃಷ್ಟಿಗೆ ಬೀಳುತ್ತಾರೆ. ಅಯ್ಯೋ! ದುರ್ದೈವವೇ! ಇಂಥ ಜನರಿಗೆ ಸೂರ್ಯೋದಯದ ಸುಂದರಪ್ರಕಾಶವನ್ನೂ, ಪ್ರಾತಃಕಾಲದಲ್ಲಿ ಸುಳಿಯುವ ಶೀತಲವಾದ ಗಾಳಿಯನ್ನೂ, ಪಕ್ಷಿಗಳ ಮನೋಹರವಾದ ಕಿಲಕಿಲಧ್ವನಿಯನ್ನೂ, ಕೇಳುವ ಆಹ್ಲಾದಕರವಾದ ಸಮಯವು ಎಂದಿಗಾದರೂ ಒದಗುವುದೇ? ಎಂದೆಂದಿಗೂ ಇಲ್ಲ.

ಯಾವ ಮನುಷ್ಯರು ಉಷಃಕಾಲದಲ್ಲಿ ಏಳುವುದಿಲ್ಲವೋ ಅಂಥವರು ತಮ್ಮ ಆಯುಷ್ಯವನ್ನು ವ್ಯರ್ಥವಾಗಿ ಕಳೆಯಬೇಕಾಗುವುದು. ಹೊತ್ತಿಗೆ ಮುಂಚೆ ಏಳುವ

ವರು ಆರೋಗ್ಯವುಳ್ಳವರೂ, ಸಶಕ್ತರೂ, ಉದ್ಯೋಗನಿರತರೂ ಆಗುತ್ತಾರೆ. ಈ ಜಗತ್ತಿನಲ್ಲಿ ಈ ವರೆಗೆ ಇದ್ದ ಎಲ್ಲ ಪ್ರಸಿದ್ಧಜನರೂ ಹೊತ್ತಿಗೆ ಮುಂಚೆ ಏಳುವವರೇ ಆಗಿದ್ದರು. ಇದಲ್ಲದೆ ಈ ವೇಳೆಯಲ್ಲಿ ಗಹನವಿಷಯಗಳ ಅಧ್ಯಯನಮಾಡಲು ಅನುಕೂಲವಾಗುತ್ತದೆ. ಸಾರಾಂಶವೇನೆಂದರೆ— ಸಶಕ್ತರೂ, ದೀರ್ಘಾಯುಷಿಗಳೂ, ತೀಕ್ಷ್ಣಬುದ್ಧಿಯುಳ್ಳವರೂ ಆಗಬೇಕೆಂಬ ಇಚ್ಛೆಯುಳ್ಳ ಪ್ರತಿಯೊಬ್ಬರೂ ಬೇಗನೆ ಮಲಗಿಕೊಂಡು ಉಷಃಕಾಲದಲ್ಲಿ ಎದ್ದು ತಮ್ಮತಮ್ಮ ಉದ್ಯೋಗಗಳನ್ನು ಮಾಡಿ, ತಮ್ಮ ತಮ್ಮ ಮಕ್ಕಳ ಮತ್ತೂ ಭಾವೀಸಂತತಿಯ ಕಲ್ಯಾಣವನ್ನು ಮಾಡಿಕೊಳ್ಳತಕ್ಕದ್ದು.

---

೯. ಊಟವನ್ನು ಹೇಗೆ ಮಾಡಬೇಕು?

ಊಟವನ್ನು ಹೇಗೆ ಮಾಡಬೇಕೆಂದು ಎಷ್ಟೋ ಜನರಿಗೆ ತಿಳಿಯುವುದಿಲ್ಲ. ಇದಲ್ಲದೆ ಕೆಲವರು ಊಟದ ವಿಷಯದಲ್ಲಿ ಅವಶ್ಯವಾದ ನಿಯಮುಗಳನ್ನು ಉಲ್ಲಂಘನ ಮಾಡಿ ಕಡೆಗೆ ಅನೇಕ ತರದ ಕಷ್ಟಗಳನ್ನು ಅನುಭವಿಸುವರು. ಆದ್ದರಿಂದ ಈ ಕೆಳಗೆ ಬರೆದ ನಿಯಮುಗಳನ್ನು ಪ್ರತಿಯೊಬ್ಬರೂ ಲಕ್ಷ್ಯದಲ್ಲಿಟ್ಟುಕೊಂಡು ಅದರಂತೆ ವರ್ತಿಸಿದರೆ ಅವರಿಗೆ ಹೆಚ್ಚಾಗಿ ಯಾವ ತರದ ಕಷ್ಟಗಳನ್ನೂ ಅನುಭವಿಸುವ ಪ್ರಸಂಗವು ಬರಲಿಕ್ಕಿಲ್ಲ.

೧. ಊಟವನ್ನು ದಿನಕ್ಕೆ ಎರಡು ಬಾರಿ ಮಾಡಬೇಕು. ಬೆಳಗ್ಗೆ ೧೧ ಗಂಟೆಗೆ; ಸಂಜೆಗೆ ೭ ಗಂಟೆಗೆ.

೨. ಊಟಮಾಡುವಾಗ ನೀರನ್ನು ಕುಡಿಯಬಾರದು. ಏಕೆಂದರೆ ಊಟ ಮಾಡುವಾಗ ಕುಡಿದರೆ ಪಚನಮಾಡುವ ಪಾಚಕರಸಗಳು ತೆಳ್ಳಗಾಗುವುವು. ಆದರಿಂದ ಊಟಮಾಡಿದ ಅನ್ನವು ಪಚನವಾಗುವುದಿಲ್ಲ. ಊಟವಾದ ತರುವಾಯ ಎಂದರೆ ಸುಮಾರು ೧ ತಾಸಿನ ಮೇಲೆ ನೀರನ್ನು ಕುಡಿಯಬಹುದು.

೩. ಕೆಲವರು ಊಟಕ್ಕೆ ಕುಳಿತಾಗ ಚಕಾರಶಬ್ದವನ್ನಾದರೂ ಉಚ್ಚರಿಸದೆ ಸುಮ್ಮನೆ ಗಪಗಪ ತಿನ್ನುವದುಂಟು. ಇದು ಸರಿಯಲ್ಲ. ಉಲ್ಲಾಸದಿಂದ ವಿನೋದದ ಮಾತುಗಳನ್ನಾಡುತ್ತ ಭೋಜನವನ್ನು ಮಾಡುವುದು ಹಿತಕರವು.

೪. ಊಟವನ್ನು ಮಾಡಿದ ಬಳಿಕ ಯಾವ ಬಗೆಯ ಶಾರೀರಕ, ಹಾಗೂ ಮಾನಸಿಕಶ್ರಮವನ್ನಾದರೂ ಮಾಡಬಾರದು.

೫. ಪ್ರತಿ ಒಬ್ಬರೂ ಊಟವಾದ ಬಳಿಕ ಹಲ್ಲುಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಬಹಳ ತಣ್ಣಗಿರುವ ಪದಾರ್ಥಗಳನ್ನು ಸೇವಿಸಬಾರದು.

೬. ಅನ್ನವನ್ನು ಸಣ್ಣ ತುತ್ತುಗಳಾಗಿಯೇ ಉಣ್ಣಬೇಕು. ಹೀಗೆ ಊಟ ಮಾಡಿದರೆ ಉಂಡ ಅನ್ನವು ಚನ್ನಾಗಿ ಪಚನವಾಗುತ್ತದೆ.

೭. ಮಸಾಲೆಯ ಪದಾರ್ಥಗಳನ್ನು ಮಿತಿಮೀರಿ ತಿನ್ನಬಾರದು.

೮. ಊಟವನ್ನು ಮಾಡುವಾಗ ಹಣ್ಣು ಹಂಪಲುಗಳನ್ನು ಉಪಯೋಗಿಸಬೇಕು.

ಈ ನಿಯಮಗಳನ್ನು ಪ್ರತಿ ಒಬ್ಬರೂ ತಮ್ಮ ಭೋಜನಶಾಲೆಯ ಗೋಡೆಗಳ ಮೇಲೆ ಬರೆದಿಡಬೇಕು.

---

೧೦. ಚಹಾಪಾನದಿಂದುಂಟಾಗುವ ದುಷ್ಪರಿಣಾಮಗಳು.

ನಮ್ಮ ದೇಶದಲ್ಲಿ ಚಹಾವ್ಯಸನವು ಬಹಳ ಬಳೆದಿರುತ್ತದೆ. ಸೂರ್ಯೋದಯವಾಗುವುದೇ ತಡ. ಎಲ್ಲರೂ "ಚಹ" ಎಂಬ ದೇವತೆಯ ಆರಾಧನೆಯನ್ನು ಮಾಡುವರು. ಚಹಾವನ್ನು ಶೀತಪ್ರದೇಶಗಳಲ್ಲಿ ಮಿತವಾಗಿ ತೆಗೆದುಕೊಂಡರೆ ಆರೋಗ್ಯಕ್ಕೆ ಬಹಳ ಸಹಾಯವಾಗುತ್ತದೆ. ಆದರೆ ಹಿಂದುಸ್ಥಾನದಂಥ ಉಷ್ಣಪ್ರದೇಶದಲ್ಲಿ ಅದನ್ನು ಸೇವಿಸುವ ಆವಶ್ಯಕತೆ ಇಲ್ಲ. ಕಳೆದ ೨೦ ವರ್ಷಗಳಿಂದಲೂ ಈ ವ್ಯಸನವು ಬಹಳ ಬಳೆದಿದೆ. ಚಹಾವನ್ನು ಸೇವಿಸುವುದರಿಂದ ಮೈಯಲ್ಲಿ ಒಂದು ಜಾಗ್ರತೆ ಬರುತ್ತದೆ. ಆದರೆ ಈ ಜಾಗ್ರತೆ ಕ್ಷಣಿಕವಾದದ್ದು.

ಚಹಾವನ್ನು ಸೇವಿಸುವುದರಿಂದ ಜಠರಾಗ್ನಿ ಮಂದವಾಗಿ ಒಂದಲ್ಲ ಒಂದು ವಿಕಾರಕ್ಕೆ ಆಸ್ಪದವಾಗುತ್ತದೆ. ಸ್ನಾಯುಗಳು ಶಿಥಿಲವಾಗುತ್ತವೆ. ಶರೀರವು ನಿಸ್ತೇಜವಾಗುತ್ತದೆ. ಇಷ್ಟೇ ಅಲ್ಲ. ಬರುಬರುತ್ತ 'ಮಧುಮೇಹ' ಎಂಬ ಭಯಂಕರ ರೋಗವು ಉಂಟಾಗಿ ಕಡೆಗೆ ಮರಣಕ್ಕೆ ಒಳಗಾಗುತ್ತಾನೆ.

ಹೀಗೆ ಚಹಾವನ್ನು ಕುಡಿಯುವುದರಿಂದ ಅನೇಕದುಷ್ಪರಿಣಾಮಗಳಾಗುತ್ತವೆ. ಆದ್ದರಿಂದ ಪ್ರತಿ ಒಬ್ಬರೂ ಈ ವ್ಯಸನದಿಂದ ದೂರವಾಗಲು ಯತ್ನಿಸತಕ್ಕದ್ದು.

---

೧೧. ವಿವಿಧಜ್ಞಾನಸಂಗ್ರಹ.

ಕುದುರೆಗಳಿಗೆ ಹುಬ್ಬುಗಳಿರುವುದಿಲ್ಲ. ಮೊಲಗಳಿಗೆ ಕಣ್ಣನ್ನು ಮುಚ್ಚಿಕೊಳ್ಳುವುದಕ್ಕೆ ಬರುವುದಿಲ್ಲ; ಅವುಗಳಿಗೆ ರೆಪ್ಪೆಗಳಿರುವುದಿಲ್ಲ. ಆನೆಗೆ ಹಲ್ಲುಗಳಿರುವುದಿಲ್ಲ.

* * *

ಭೂಮಿಯ ತೂಕವು ಸುಮಾರು ೬೦೦೦೦೦೦೦೦೦೦೦೦೦ಟನ್ನುಗಳೆಂದು ಒಬ್ಬ ಅಮೇರಿಕದ ವಿದ್ವಾಂಸನು ಕಂಡುಹಿಡಿದಿದ್ದಾನೆ.

* * *

ಬಿಳೀ ಬಣ್ಣದ ಕುದುರೆಗಳು ಸುಮಾರು ೧೩ ವರುಷಗಳ ವರೆಗೂ ಕರೀ ಬಣ್ಣದ ಕುದುರೆಗಳು ಸುಮಾರು ೨೦ ವರುಷಗಳ ವರೆಗೂ ನರೆ ಬಣ್ಣದ ಕುದುರೆಗಳು

ಸುಮಾರು ೨೫ ವರುಷಗಳ ವರೆಗೂ ಬಾಳುತ್ತವೆಯೆಂದು ಒಬ್ಬ ಅಶ್ವಪರೀಕ್ಷಕನು ಹೇಳಿದ್ದಾನೆ.

* * *

ಮಿತಿಮೀರಿ ತಂಬಾಕುಸೇದುವವರಿಗೆ ಹೆಚ್ಚಾಗಿ "ಕೊಲೆರಾ" ಎಂಬ ರೋಗವು ಉಂಟಾಗುತ್ತದೆಂತಲೂ, ಮಿತಿಮೀರಿ ಚಹಾವನ್ನು ಸೇವಿಸುವವರಿಗೆ "ಮಧುಮೇಹ" ಎಂಬ ರೋಗವು ಉಂಟಾಗುತ್ತದೆಂತಲೂ, ಬಲ್ಲವರಾದ ವೈದ್ಯರು ಹೇಳುತ್ತಾರೆ.

* * *

ಹಿಂದೂಸ್ಥಾನದೊಳಗಣ ನೋಡತಕ್ಕಂಥ ಪಟ್ಟಣಗಳು:—ಮುಂಬಯಿ, ಕಲಕತ್ತಾ, ಮದ್ರಾಸು, ದಿಲ್ಲಿ, ಆಗ್ರಾ, ಲಾಹೋರು, ಕಾಶಿ, ಅಲಹಾಬಾದು, ಇಂದೂರು, ಗ್ವಾಲ್ಹೇರು, ಕಾಶ್ಮೀರ, ಬಡೋದೆ, ಹೈದರಾಬಾದು, ಮೈಸೂರು, ರಾಮೇಶ್ವರ, ಕರಾಚಿ, ವಿಜಾಪುರ, ಪಂಢರಪುರ, ಶ್ರೀರಂಗಪಟ್ಟಣ, ದ್ವಾರಕೆ, ಹರಿದ್ವಾರ, ರಂಗೂನು, ಗೋಕರ್ಣ, ಹಂಪೆ, ವಿಜಯನಗರ.

* * *

ಯುರೋಪುಖಂಡದೊಳಗಣ ನೋಡತಕ್ಕಂಥ ಪಟ್ಟಣಗಳು:— ಲಂಡನ್, ಪಾರಿಸ್, ಸೆಂಟ್‌ಪೀಟರ್ಸ್‌ಬರ್ಗ್, ಲ್ಲಿವರ್‌ಪೂಲ್, ಗ್ಲಾಸ್ಗೊ, ಡಬ್ಲಿನ್, ಬರ್ಲಿನ್, ಲಿವ್‌ಝಿಗ್, ರೋಮ್, ವ್ಹಿಯೆನ್ನಾ, ಕಾನ್‌ಸ್ಟಾಂಟಿನೋಪಲ್, ಬ್ರುಸೆಲ್ಸ್, ಕೋಪನ್‌ಹೇಗನ್, ಸ್ಟೊಕ್‌ಹೋಮ್, ಎಡಿನ್‌ಬರ್ಗ್, ಹ್ಯಾಂಬರ್ಗ್.

* * *

ಇಡೀ ಜಗತ್ತಿನ ಜನಸಂಖ್ಯೆ ಸುಮಾರು ೧೪೦೦೦೦೦೦೦೦ ಇರುವುದು. ಅದರಲ್ಲಿ ಪ್ರತಿವರ್ಷದ ಮೃತ್ಯುಸಂಖ್ಯೆ ಸುಮಾರು ೩೫ ಕೋಟಿ; ಮತ್ತೂ ಜನನಸಂಖ್ಯೆ ಸುಮಾರು ೩೭ ಕೋಟಿ ಇರುತ್ತದೆಂದು ಒಬ್ಬ ಶೋಧಕನು ಹುಡುಕಿತೆಗೆದಿದ್ದಾನೆ.

* * *

'ಲಿವ್‌ಝಿಗ್' ಎಂಬ ಪಟ್ಟಣದಲ್ಲಿರುವ ರೇಲ್ವೆ ಸ್ಟೇಶನು ಇಡೀ ಜಗತ್ತಿನೊಳಗಣ ಎಲ್ಲ ಸ್ಟೇಶನುಗಳಿಗಿಂತ ದೊಡ್ಡದು. ಈ ಸ್ಟೇಶನನ್ನು ಕಟ್ಟಲಿಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳು ವೆಚ್ಚವಾದುವಂತೆ.

* * *

ಮನುಷ್ಯನ ಶರೀರದೊಳಗಣ ಎಲ್ಲ ರಕ್ತದ ತೂಕವು ಸುಮಾರು ೧೨ ಪೌಂಡು ಆಗುತ್ತದೆ. ನಮ್ಮ ದೇಹದೊಳಗೆ ಸುಮಾರು ೨೧೦ ಎಲುಬುಗಳು ಇರುತ್ತವೆ.

ಗಂಡಸರ ಮಿದುಳಿನ ತೂಕವು ಸುಮಾರು ೫೦ ಔನ್ಸು ಮತ್ತೂ ಸ್ತ್ರೀಯರ ಮಿದುಳಿನ ತೂಕವು ಸುಮಾರು ೪೫ ಔನ್ಸು.

* * *

ಪಶುಪಕ್ಷಿಗಳ ಆಯುರ್ಮರ್ಯಾದೆ:—ಆನೆಗಳು ೨೦೦ ವರ್ಷ, ಕುದುರೆಗಳು ೨೫ ವರ್ಷ, ನಾಯಿಗಳು ೧೫ ವರ್ಷ, ಆಕಳುಗಳು ೨೦ ವರ್ಷ, ಹುಲಿ ೮೦ ವರ್ಷ, ಸಿಂಹ ೭೦ ವರ್ಷ, ಕಾಗೆ ೨೦೦ ವರ್ಷ, ಗರುಡಪಕ್ಷಿ ೧೫೦ ವರ್ಷ, ಗಿಳಿ ೨೫ ವರ್ಷ ಬೆಕ್ಕು ೧೨ ವರ್ಷ ಬಾಳುತ್ತದೆ.

---

೧೨. ಲಕ್ಷ್ಯದಲ್ಲಿಡತಕ್ಕ ೧೦ ನಿಯಮಗಳು.

(೧) ದುಷ್ಟವಾದ ಅನ್ನಪಾನಾದಿಗಳನ್ನು ಸೇವಿಸಬಾರದು.

(೨) ನಸುಕಿಗೆ ಏಳಬೇಕು.

(೩) ಪರಸ್ತ್ರೀಯರನ್ನು ಅಕ್ಕತಂಗಿಯರಂತೆ ಭಾವಿಸಬೇಕು.

(೪) ಯಾವಾಗಲೂ ಸತ್ಯವನ್ನೇ ನುಡಿಯಬೇಕು.

(೫) ಅಹಂಕಾರ, ಕೋಪ, ಹೊಟ್ಟೆಕಿಚ್ಚು ಇತ್ಯಾದಿ ದುರ್ಗುಣಗಳಿಗೆ ಅಧೀನನಾಗಬಾರದು.

(೬) ಯಾವಾಗಲೂ ದೇವರಲ್ಲಿ ಭಕ್ತಿಯನ್ನಿಟ್ಟು, ಆಯುಷ್ಯವನ್ನು ಸಜ್ಜನರ ಸಹವಾಸದಲ್ಲಿಯೇ ಕಳೆಯಬೇಕು.

(೭) ಕಾಮ, ಕ್ರೋಧ, ಮದ, ಮಾತ್ಸರ್ಯ ಇತ್ಯಾದಿ ಮೋಹವಿಕಾರಗಳಿಗೆ ಒಳಗಾಗಬಾರದು.

(೮) ಮಾಡತಕ್ಕ ಕೆಲಸಗಳನ್ನು ಯಾವ ಕಾಲಕ್ಕೆ ಮಾಡತಕ್ಕದ್ದೋ ಆ ಕಾಲಕ್ಕೇ ಮಾಡಬೇಕು.

(೯) ಕುರುಡರನ್ನೂ, ಕುಂಟರನ್ನೂ, ಮೂಕರನ್ನೂ, ಹೆಳವರನ್ನೂ, ಅನಾಥಜನರನ್ನೂ ಕೈಲಾದ ಮಟ್ಟಿಗೆ ಉಪಕರಿಸಬೇಕು.

(೧೦) ತಾಯಿ-ತಂದೆ-ಗುರು-ಹಿರಿಯರೊಡನೆಯೂ, ಸ್ನೇಹಿತರೊಡನೆಯೂ, ಪ್ರೀತಿಯಿಂದಲೂ ಆದರದಿಂದಲೂ ವರ್ತಿಸಬೇಕು.

ನೀತಿಬೋಧಾಮೃತ

ನಿಜಲಿಂಗಶತಕ

(ವಾರ್ಧಕಷಟ್ಪದಿ.)

ಕೊಟ್ಟ ಬಳಿಕಿನ್ನು ಮನದೊಳಗೆ ಕುದಿವನು ಮೂರ್ಖ;
ಕೆಟ್ಟ ಪಿಸುಣಿಗನಂಟನನು ಸೇರುವನು ಮೂರ್ಖ;
ನಿಷ್ಠೆವಂತರ ನೋಡಿ ನಿಂದಿಸುವನತಿಮೂರ್ಖ; ದಯೆಯೊಳಾಳುವನೊಡೆಯನ ||
ಬಿಟ್ಟಾಡಿ ದೂರಿಕೊಳ್ಳುವನೀಗ ಕಡುಮೂರ್ಖ;
ಸೃಷ್ಟಿಗೀಶ್ವರ ನಿಮ್ಮ ಜಾನವನು ಮನದೊಳಗೆ
ಬಿಟ್ಟೋಡುವನು ಮೂರ್ಖ; ನಿಜಲಿಂಗ ಭವಭಂಗ. || ೧ ||

ಏಕಾಂತವಾಡುವಲ್ಲಿಗೆ ಹೋಗದವ ಜಾಣ;
ಲೋಕದೊಳಗವರವರ ತೆರದಿ ನಡೆವನು ಜಾಣ;
ಕಾಕುಮನುಜರನು ಸರಿಗಟ್ಟಿಕೊಳದವ ಜಾಣ; ಭೂಕಾಂತರಾಸ್ಥಾನದಿ ||
ಜೋಕೆಯೊಡನೇಕಚಿತ್ತದೊಳಿರುವವನು ಜಾಣ;
ಲೋಕೇಶ ನಿಮ್ಮ ಪಾದವ ನಂಬಿದವ ಜಾಣ;
ಕಾಕೋದರಾಭರಣ; ನಿಜಲಿಂಗ ಭವಭಂಗ. || ೨ ||

ಮನೆಯ ಕದನವನು ಪರರೊಳು ಹೇಳದವ ಜಾಣ;
ತನುಜರನುಜರೊಳು ಕೋಪವ ಹಿಡಿಯದವ ಜಾಣ;
ಧನವಿರಲು ಧರ್ಮವನು ಗಳಿಸಿಕೊಳುವವ ಜಾಣ; ದುರ್ಜನರು ಹಳಿವುತಿರಲು ||
ಮನದೊಳಗೆ ಹಿಡಿದ ವ್ರತಗಳನು ಬಿಡದವ ಜಾಣ;
ಅನಲಾಕ್ಷ ನಿಮ್ಮ ಜಾನವ ಬಿಡದೆ ಮಾಡುತಿರು
ವನು ಜಾಣ; ನಿಜಲಿಂಗ ಭವಭಂಗ. || ೩ ||

ಸತಿಯರಿಗೆ ಸಲುಗೆಯನು ಕೊಡದವನು ಬಲುಜಾಣ;
ಚತುರನುಡಿ ಬಾರದಿರೆ ಸುಮ್ಮನಿರುವನು ಜಾಣ;
ಗತಿಯಿಲ್ಲದವಗೆ ಹೊಣೆಯಾಗದವ ಕಡುಜಾಣ; ಯೋಗ್ಯವಲ್ಲದ ನುಡಿಗಳ ||
ಶ್ರುತಿಗೊಟ್ಟು ಕೇಳಲೊಲ್ಲದೆ ತೊಲಗುವನು ಜಾಣ;
ಶಿತಿಕಂಠ ನಿಮ್ಮ ಶ್ರೀಪಾದವನು ನಂಬಿದವ
ಕ್ಷಿತಿಯಲ್ಲಿ ಕಡುಜಾಣ; ನಿಜಲಿಂಗ ಭವಭಂಗ || ೪ ||

ಚೋರ ನಿಂದಿಸಲಾಗಿ ಚಂದ್ರಂಗೆ ಕುಂದೇನು?
ಪೋರ ನಿಂದಿಸಲಾಗಿ ಪ್ರಾಜ್ಞಂಗೆ ಕುಂದೇನು?
ದಾರಿದ್ರ್ಯ ನಿಂದಿಸಲು ಧನವಂತನಿಗೆ ಬಂದ ಕುಂದೇನು? ಹುಟ್ಟಂಧಕ ||

ಭೂರಿ ಕೋಪದಿ ಪಳಿಯೆ ಭಾಸ್ಕರಗೆ ಕುಂದೇನು?
ಮಾರಾರಿ ನಿಮ್ಮ ನಿಂದಿಸುವವನು ನರಕದೊಳು
ಸೇರುವನು ಸತ್ಯವಿದು; ನಿಜಲಿಂಗ ಭವಭಂಗ. ॥ ೫ ॥

ಮಂದಮತಿ ನಿಂದಿಸಲು ತಾಳಿಕೊಂಡವ ಜಾಣ
ನೊಂದೆ ಮನದಲಿ ಧರ್ಮವನು ಮಾಡುವವ ಜಾಣ;
ಬಂದ ಕಡುಚಿಂತೆಯಲಿ ಧೈರ್ಯವಿಡುವನು ಜಾಣ; ಹೊಂದಿನಿಂ ಕಲಹಂಗಳು ॥
ಸಂದಿಸಲು ಶಾಂತಗುಣವನು ತಾಳಿದವ ಜಾಣ;
ಇಂದುಶೇಖರ ನಿಮ್ಮ ಪೂಜಿಪನು ಬಲುಜಾಣ;
ಅಂಧಕಾಸುರಹರನೆ! ನಿಜಲಿಂಗ ಭವಭಂಗ ॥ ೬ ॥

ಸರಿಯಲ್ಲದರ ಕೂಡೆ ವಾದಿಸುವನತಿಮೂರ್ಖ;
ಗುರುಹಿರಿಯರುಸಿರ್ದ ವಾಕ್ಯವ ಮೀರುವನು ಮೂರ್ಖ;
ಗರುವತನವನು ತಳೆದು ಹಮ್ಮನಾಡುವ ಮೂರ್ಖ; ಗಾಡಿಕಾತಿಯರೊಲವನು ॥
ನೆರೆನಂಬಿ ನಿಜವೆಂದು ಮರುಳುಗೊಳುವನು ಮೂರ್ಖ;
ಕರುಣನಿಧಿ ಭಕ್ತವತ್ಸಲ ನಿಮ್ಮ ನಾಮವನು
ಸ್ಮರಿಸದವ ಕಡುಮೂರ್ಖ; ನಿಜಲಿಂಗ ಭವಭಂಗ ॥ ೭ ॥

ಧನವಿರಲು ಧರ್ಮಮಾರ್ಗವ ಬಿಟ್ಟು ಮದದಿಂದ
ತನಗಾರು ಸರಿ ಇಲ್ಲವೆನುತ ಗರ್ವಿಸುತಿಹರು;
ಮನೆಗೆ ಯಾಚಕರು ಬರಲವರಿಗೊಂದರೆಕಾಸು ಕೊಡದೆ ಹೊರಯಿಕೆ ನೂಕಿಸಿ ॥
ಮನಕೆ ಬಂದಂತೆ ಸುಜ್ಞಾನಿಗಳ ನಿಂದಿಸುವ
ಘನಮದೋನ್ಮತ್ತದುರ್ಜನರಿರವ ಸೀನೆನಗೆ
ಇನಿತ ತೋರದೆ ಸಲಹು; ನಿಜಲಿಂಗ ಭವಭಂಗ. ॥ ೮ ॥

ಸಂಗರಕೆ ಭೀತಿಗೊಳುವಾ ಬಂಟನಿದ್ದೇನು?
ಮುಂಗಂಡ ಮಾತನಾಡದ ಸಚಿವನಿದ್ದೇನು?
ಇಂಗಿತವನರಿದು ನಡೆಯದಗೇನದಿದ್ದೇನು? ವಿಮಲಶಾಸ್ತ್ರಾಗಮವನು ॥
ಅಂಗೈಸಿ ಓದಿಕೊಳ್ಳದ ಪಾರ್ವನಿದ್ದೇನು?
ಅಂಗಭವಹರ ನಿಮ್ಮ ನುತಿ ಮಾಡದಿರ್ದ ಪಾ
ಪಂಗಾತ್ಮನಿದ್ದೇನು? ನಿಜಲಿಂಗ ಭವಭಂಗ. ॥ ೯ ॥

ಕ್ಷುಧೆಯಿಲ್ಲದಾರೋಗಣೆಯ ಮಾಡದವ ಜಾಣ;
ಮಧುರನುಡಿಯಾಡಿಯಹುದೆನಿಸಿಕೊಳುವನು ಜಾಣ;
ಅಧಿಕಕೋಪಿಗಳೊಡನೆ ಸೋತು ಬರುವನು ಜಾಣ; ಚೂರ್ಣ ಕೈಸೇರದನಕ ॥

ವದನದಲಿ ಕ್ರಮುಕವನು ಹಾಕಿಕೊಳದವ ಜಾಣ;
ಹೃದಯದೊಳಗಾಗಳುಂ ನಿಮ್ಮ ಜಪವನ್ನು ತ
ಪ್ಪದೆ ಮಾಳ್ಪವನು ಜಾಣ; ನಿಜಲಿಂಗ ಭವಭಂಗ. ॥ ೧೦ ॥

ಬಲುಲೋಭಿಗಳ ಬಳಿಯ ಧನವಿರ್ದು ಫಲವೇನು?
ಕಲ ಇಲ್ಲದವಗೆ ಆಯುಧವಿರ್ದು ಫಲವೇನು?
ನೆಲೆಯರಿಯುತೋದಲರಿಯದನ ಬಳಿಯೊಳು ಕಾವ್ಯಸಾರಂಗಳಿರ್ದರೇನು? ॥
ಹೊಲಬನರಿಯದನ ಬಳಿ ಸಂಜೀವವಿರ್ದೇನು?
ಮಲಹರನೆ! ನಿಮ್ಮ ಭಜಿಸದೆಯೆ ಮನುಜರ ಜನ್ಮ
ದಲಿ ಬಂದು ಫಲವೇನು? ನಿಜಲಿಂಗ ಭವಭಂಗ. ॥ ೧೧ ॥

ನೀತಿಯನು ಹಿಡಿಯರೊಲ್ಲರು; ಗುರುಹಿರಿಯರುಗಳ
ಮಾತು ಕೇಳರು; ಸಜ್ಜನರನು ಪೀಡಿಸುತಿಹರು;
ಮಾತಾಪಿತರ ಬೈದು ಬಳಲಿಸುವ ದುರ್ಜನರೊಳೆಂತು ಜೀವಿಸಲು ಬೇಕು? ॥
ಭೂತನಾಥನು ನೀನು ಮೋಕ್ಷದಾಯಕನೆಂದು
ನಾ ತಿಳಿದು ನಿನ್ನ ಪದಪದ್ಮವನು ನಂಬಿದೆನು;
ಪ್ರೀತಿಯಲಿ ಸಲಹೆನ್ನ; ನಿಜಲಿಂಗ ಭವಭಂಗ ॥ ೧೨ ॥

ನೀತಿವಚನಗಳು

ಚ. ವೃ॥ ಹರಣಮೆ ಪೋದೊಡಂ ದುರಿತಕೃತ್ಯವ ಗೆಯ್ಯದೆ ನೀತಿನಿಷ್ಠೆಗೋ।
ಸರಿಸದೆ ಬೇಡದಲ್ಪಧನರೆಂದೆನಿಪಾಪ್ತರುಮಂ ದುರಾತ್ಮರಂ ॥
ಎರೆಯದೆ ಕಷ್ಟದಿಂದೆ ಧೃತಿಗುಂದದೆ ಸತ್ಪುರುಷಾನುಕೂಲಮಾ ।
ಗಿರುವ ಸುದುಷ್ಕರವ್ರತವನಾರ್ಸುಜನರ್ಗುಪದೇಶವಿತ್ತರೋ? ॥ ೧ ॥

ಚ. ವೃ॥ ಕುಡದನ ವಿತ್ತವಸ್ಥಿರನ ಪೆಂಪು ಕೃತಘ್ನನ ಸತ್ಯ ಮೋಹಮಂ ।
ಬಿಡದನ ಯೋಗವಂಜುವನ ಧೀರತೆ ಕೊಲ್ವನ ಧರ್ಮವಿಚ್ಛೆಯಿಂ ॥
ನಡೆವನ ಕಾರ್ಯ ಲುಬ್ಧಕನ ಮಿತ್ರತೆ ನೀತಿವಿಹೀನನಾಶ್ರಯಂ ।
ಬಡವನ ವಾಂಛಿತಂ ಕಡೆಗೆ ನಿಷ್ಫಲಮೈ ಸುಜನೈಕಬಾಂಧವಾ! ॥ ೨ ॥

ಚ. ವೃ॥ ಮುನಿಸಿರೆ ಕಿಚ್ಚದೇಕೆ? ದಯೆಯುಳ್ಳೊಡೆ ದಾನಮದೇಕೆ? ಸಂತಸಂ ।
ಜನಿಯಿಸಲರ್ಥಮೇಕೆ? ಗುಣಮುಳ್ಳೊಡೆ ಭೂಷಣಮೇಕೆ? ಮೋಹಬಂ-॥

ಧನಮಿರೆ ಪಾಶಮೇಕೆ? ಜಡಭಾವಮಿರಲ್ ಶತ್ರುವೇಕೆ? ತತ್ವಭಾ-|
ವನೆ ತನಗಾಗೆ ಮಿಕ್ಕರಿತವೇಕೆ? ವಿಚಾರಪರಂಗೆ ಲೋಕದೋಳ್ || ೩ ||

ಕಂದ || ಓದಿನೊಳಲ್ಲದೆ ಇಹಪರ |
ಸಾಧನಸಂಪತ್ತುಮಾಗದದು ಕಾರಣದಿಂ ||
ದೋದುವುದೆ ಸಕಲಶ್ರುತಮುಂ |
ಭೇದಿಸಲಳವಪ್ಪುದಲ್ತೆ ಚೂಡಾರತ್ನಾ! || ೪ ||

ಕಂದ || ಸಾಲಕ್ಕೆ ಭೀತನಾಗಿರು; |
ನಾಲಗೆಯುಂಟೆಂದು ಬರಿದೆ ಗಳಹದಿರೆಂದುಂ; ||
ಆಲಸಮೆಂಬುದ ನೀಂ ಕಳೆ-|
ಯಾಲೋಕಿಸಬೇಡ ವಾರಿಯೊಳ್ ಪಡಿನೆಳಲಂ || ೫ ||

ಕಂದ || ನಡೆವೆಡೆಯೊಳ್ ನುಡಿವೆಡೆಯೊಳ್ |
ಕುಡುವೆಡೆಯೊಳ್ ತನಗೆ ನಿಂದೆ ಪೊರ್ದದ ತೆರದಿಂ ||
ನಡೆವುದು ನುಡಿವುದು ಕೂಡುವುದು |
ಪಡೆವುದು ಸತ್ಕೀರ್ತಿಯಂ ವಿದಗ್ಧಲಲಾಮಾ! || ೬ ||

ಕಂದ || ವಚನದೊಳಿಹಪರಸುಖಮುಂ |
ವಚನದೊಳಂ ದೈವಗತಿಯೆ ದುರ್ಗತಿಯಕ್ಕುಂ; ||
ವಚನದೊಳರಿಮಿತ್ರತೆಯುಂ; |
ವಚನಾಮೃತದಿಂದೆ ತುಷ್ಟನೀಶ್ವರನರಿಯಾ. || ೭ ||

ಕಂದ || ಅಡವಿಯೊಳಿರೆ ವಿದ್ವಾಂಸಂ |
ಪಡೆವಂ ಪೂಜ್ಯತೆಯ; ಧನಿಕನೆಲ್ಲಿದ್ದೊಡಮೇಂ? ||
ಸುಡುಗಾಡಿನೊಳಿರ್ಪ ಶಿವಂ |
ಪಡೆದಂ ಪೂಜ್ಯತೆಯನಾ ಕುಬೇರಂ ವ್ಯರ್ಥಂ. || ೮ ||

ಕಂದ || ಪರರೊಡವೆಗಾಸೆಗೈಯ್ಯದೆ |
ಪರನಿಂದೆಯ ಮಾಡದಾಡದನೃತಮನೆಂದುಂ ||
ಪರರಂ ದ್ವೇಷಿಸದಿರ್ದೊಡೆ |
ಧರೆಯೊಳ್ ನೆರೆ ಸಾಧುವಾತನೊರ್ವನೆ ನಿಸದಂ. || ೯ ||

ಕಂದ || ಬಡವಾದೊಡಲಂ ಕಾಣುತೆ |
ಕಡೆಗಣಿಸಿದಿರಾರುಮಂ ವರಾಕರೆನುತ್ತಂ ||
ಕಡಿಯದೆ ಕಿತ್ತುಳಿ ಕಲ್ಲಂ |
ಕುಡಿಯನೆ ಕೆನ್ನಂ ಕಡಂಗಿ ಕಿತ್ತಡಿ ಕಡಲಂ? || ೧೦ ||

ಪರಲೋಕವಾಸಿಯಾದ ಬಾಬು ರಮೇಶಚಂದ್ರ ದತ್ತ.

ನಮ್ಮ ಭರತಖಂಡದ ದೇಶಭಕ್ತರಲ್ಲೆಲ್ಲಾ ಬಾಬು ರಮೇಶಚಂದ್ರರು ಅಗ್ರಗಣ್ಯರೆಂಬ ಮಾತು ಜಗದ್ವಿಖ್ಯಾತವಾದದ್ದು. ಇವರು ಬರೆದ ಗ್ರಂಥಗಳೂ, ಇವರು ಮಾಡಿದ ಅನೇಕಸಂಸ್ಕರಣಗಳೂ ಇವರ ಹೆಸರನ್ನು ಸ್ಥಿರಗೊಳಿಸದಿರಲಾರವು. ತಮ್ಮ ಅದ್ವಿತೀಯವಾದ ಪಾಂಡಿತ್ಯದಿಂದಲೂ, ಅಪ್ರತಿಮದೇಶಾಭಿಮಾನದಿಂದಲೂ ಸತ್ಕೀರ್ತಿಯನ್ನು ಪಡೆದ ಈ ಮಹನೀಯರ ಜೀವನಚರಿತ್ರವನ್ನು ನಮ್ಮ ರಸಿಕವಾಚಕರಿಗಾಗಿ ಇಲ್ಲಿ ಬರೆಯಲು ಪ್ರಾರಂಭಿಸುವೆವು.

ನಮ್ಮ ಚರಿತ್ರನಾಯಕರು ಸನ್ ೧೮೪೮ನೇ ಇಸವಿಯ ಅಗಸ್ಟ್ ತಿಂಗಳ ೧೩ನೇ ತಾರೀಖಿನ ದಿವಸ ಕಲಕತ್ತಾ ನಗರದಲ್ಲಿ ಜನಿಸಿದರು. ಇವರ ವಂಶವು ಕುಲೀನವಾಗಿ ಪಾಂಡಿತ್ಯವನ್ನೂ, ಕೀರ್ತಿಯನ್ನೂ ಪಡೆದದ್ದಾಗಿತ್ತು. ಬಾಲ್ಯದಲ್ಲಿಯೇ ತಂದೆತಾಯಿಗಳು ತೀರಿಹೋದುದರಿಂದ, ರಮೇಶಚಂದ್ರರು ತಮ್ಮ ಸೋದರರೊಂದಿಗೆ ಚಿಕ್ಕಪ್ಪನಾದ ಶಶೀಚಂದ್ರನ ಪೋಷಣೆಯಲ್ಲಿದ್ದರು. ಇವರ ಪ್ರೌಢವಿದ್ಯಾಭ್ಯಾಸವು ಕಲಕತ್ತೆಯಲ್ಲಿಯೇ ನಡೆಯಿತು. ೧೮೬೪ನೇ ಇಸವಿಯಲ್ಲಿ ಮೆಟ್ರಿಕ್ಯೂಲೇಶನ್‌ಪರೀಕ್ಷೆಯಲ್ಲಿಯೂ, ೧೮೬೬ನೇ ಇಸವಿಯಲ್ಲಿ ಎಫ್. ಎ. ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು.

ಸನ್ ೧೮೬೮ನೇ ಇಸವಿಯ ಮಾರ್ಚ್ ತಿಂಗಳ 3ನೇ ತಾರೀಖಿನ ದಿವಸ ರಮೇಶಚಂದ್ರನು ಬಿಹಾರಿಲಾಲಗುಪ್ತನೆಂಬ ಸಹಾಧ್ಯಾಯಿಯೊಡನೆ ಮನೆಯವರಾರಿಗೂ ತಿಳಿಸದೆ ಇಂಗ್ಲಂಡಿಗೆ ಹೊರಟುಹೋದನು. ಸುಪ್ರಸಿದ್ಧದೇಶಭಕ್ತರಾದ ಸುರೇಂದ್ರನಾಥಬಾನರ್ಜಿಯವರು ತಂದೆಯ ಅನುಮತಿಯನ್ನು ಪಡೆದುಬಂದು, ಇವರಿಬ್ಬರ ಜತೆಯಲ್ಲಿ ಸೇರಿಕೊಂಡರು. ಮುಂದೆ ಸನ್ ೧೮೬೯ನೇ ಇಸವಿಯಲ್ಲಿ ಮೂವರೂ ಸಿವ್ಹಿಲ್‌ಸರ್ವಿಸ್‌ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಮುನ್ನೂರುಮಂದಿ ಯೂರೋಪಿಯನ್‌ತರುಣರಿದ್ದರೂ, ರಮೇಶಚಂದ್ರನು ಲೆಕ್ಕಿಸದೆ, ಪರೀಕ್ಷೆಯಲ್ಲಿ ಮೂರನೆಯವನಾಗಿ ತೇರ್ಗಡೆಯಾದನಲ್ಲದೆ, ಇಂಗ್ಲೀಷುಭಾಷೆಯ ಪರೀಕ್ಷೆಯಲ್ಲಿ ಎಲ್ಲರಿಗಿಂತಲೂ ಉಚ್ಚಸ್ಥಾನವನ್ನು ಪಡೆದುಕೊಂಡನು. ಅನಂತರ ಯೂರೋಪಿನೊಳಗಣ ಅನೇಕಾನೇಕದೇಶಗಳನ್ನು ನೋಡಿ, ಅಲ್ಲಿ ಎಷ್ಟೋ ಯೂರೋಪಿಯನ್ ಸ್ನೇಹಿತರನ್ನು ಸಂಪಾದಿಸಿ ಸನ್ ೧೮೭೧ರಲ್ಲಿ ಸ್ನೇಹಿತರೊಂದಿಗೆ ತನ್ನ ಮಾತೃಭೂಮಿಗೆ ಮರಳಿ ಬಂದನು.

ಸನ್ ೧೮೭೧ರಿಂದ ಸನ್ ೧೮೮೨ರ ವರೆಗೆ ಸರಕಾರದವರು ರಮೇಶಚಂದ್ರನನ್ನು ಅಸಿಸ್ಟಂಟ್ ಕಲೆಕ್ಟರನ್ನಾಗಿ ನೇಮಿಸಿದರು. ಮುಂದೆ ಸನ್ ೧೮೮೩ನೇ ಇಸವಿಯಲ್ಲಿ ಈತನಿಗೆ ಜಿಲ್ಲಾಕಲೆಕ್ಟರ ಪದವಿ ಸಿಕ್ಕಿತು. ಬಹುಕಾಲ ಜಿಲ್ಲಾಧಿಕಾರವನ್ನು ವಹಿಸಿಕೊಂಡ ಹಿಂದೂಗಳಲ್ಲಿ ಈತನೇ ಮೊದಲನೆಯವನು.

ನಮ್ಮ ಚರಿತ್ರನಾಯಕರ ಕೀರ್ತಿಯನ್ನು ಶಾಶ್ವತಗೊಳಿಸಲಿಕ್ಕೆ ಅವರು ಮಾಡಿದ ಸಂಸ್ಕರಣಪ್ರಯತ್ನಗಳೋ ಅವರು ಬರೆದ ಗ್ರಂಥಗಳೋ ಕಾರಣಗಳೆಂಬುದನ್ನು ನಿರ್ಣಯಿಸುವುದು ಬಹುಕಷ್ಟವಾಗಿದೆ. ಸುಪ್ರಸಿದ್ಧಕಾದಂಬರೀಕರ್ತರಾದ ಬಂಕಿಮಚಂದ್ರರು ಬಂಗಾಲೀಕಾದಂಬರಿಗಳನ್ನು ಬರೆಯುವುದಕ್ಕೆ ರಮೇಶಚಂದ್ರರನ್ನು ಪ್ರೇರೇಪಿಸಿದರು. 'ವಂಗವಿಜೇತಾ', 'ಸಂಸಾರ', 'ಮಾಧವೀಕಂಕಣ' ಇತ್ಯಾದಿ ಸುಪ್ರಸಿದ್ಧ ಕಾದಂಬರಿಗಳನ್ನು ಬರೆದವರು ನಮ್ಮ ಕಥಾನಾಯಕರೇ. ಅಲ್ಲದೆ ರಮೇಶಚಂದ್ರರು ಇಂಗ್ಲೀಷುಭಾಷೆಯಲ್ಲಿಯೂ ಅನೇಕ ಉದ್ಗ್ರಂಥಗಳನ್ನು ಬರೆದು ಪ್ರಕಟೀಕರಿಸಿರುವರು. ಇತಿಹಾಸಲೇಖಕರಲ್ಲಿ ಇವರಷ್ಟು ಪ್ರಾವೀಣ್ಯವನ್ನು ಯಾರೂ ಪಡೆದಿಲ್ಲ. "ಪ್ರಾಚೀನ ಹಿಂದೂದೇಶದ ಸಂಕ್ಷಿಪ್ತ ಇತಿಹಾಸ" ("History of Ancient India," "ಹಿಂದೂದೇಶದ ಇಂಗ್ಲಿಷರಾಜ್ಯಭಾರದ ಆಯವ್ಯಯಸಂಬಂಧವಾದ ಇತಿಹಾಸ" ("Economic History of British India")ಇವೇ ಮೊದಲಾದ ಇಂಗ್ಲೀಷು ಭಾಷೆಯ ಇತಿಹಾಸಗಳು ದೇಶಭಕ್ತರಾದ ಸರ್ವರಿಗೂ ಸಂಗ್ರಾಹ್ಯವಾಗಿರುವುವು. ಇದಲ್ಲದೆ ಇವರು ಬರೆದಿರುವ "ರಾಮಾಯಣ"—"ಮಹಾಭಾರತ"ಗಳ ಸಂಗ್ರಹರೂಪವಾದ ಇಂಗ್ಲೀಷುಭಾಷೆಯ ಪದ್ಯಕಾವ್ಯಗಳು ಇವರ ಭಾಷಾನೈಪುಣ್ಯವನ್ನು ಚೆನ್ನಾಗಿ ವ್ಯಕ್ತಪಡಿಸುವುವು. ಸಂಸ್ಕೃತಭಾಷಾಪ್ರವೀಣನಾದ ಮ್ಯಾಕ್ಸ್‌ಮುಲ್ಲರ್ ಸಾಹೇಬನೂ ರಮೇಶಚಂದ್ರರ ಭಾಷಾಪ್ರಾವೀಣ್ಯವನ್ನೂ, ವಿದ್ವತ್ಪ್ರಭಾವವನ್ನೂ ಅನನ್ಯಾದೃಶವೆಂದು ಹೊಗಳಿರುವನು.

ಸನ್ ೧೮೯೫ರಲ್ಲಿ ಓಡಿಸಾಪ್ರಾಂತದ ಕಮಿಷನರಾಗಿ ನಮ್ಮ ಕಥಾನಾಯಕರು ನಿಯಮಿಸಲ್ಪಟ್ಟರು. ಮುಂದೆ ಸನ್ ೧೮೯೭ರಲ್ಲಿ ಸರಕಾರದವರ ಸಂಪೂರ್ಣ ಮರ್ಯಾದೆಯೊಡನೆ ಸರಕಾರೀವೃತ್ತಿಯಿಂದ ನಿವೃತ್ತರಾದರು. ೧೯೦೪ರಲ್ಲಿ ರಮೇಶಚಂದ್ರರು ಸುಪ್ರಸಿದ್ಧದೇಶಹಿತೈಷಿಗಳಾದ ಬಡೋದೆಯ ಶ್ರೀಸಯಾಜಿರಾವ್‌ಗಾಯಕವಾಡರವರ ಪ್ರೇಮಭಾವದ ನಿಮಂತ್ರಣವನ್ನು ಅನುಮೋದಿಸಿ, ಸಂಸ್ಥಾನದ ದಿವಾನಪದವಿಯನ್ನು ಕೈಕೊಂಡರು. ಈ ಕೆಲಸವನ್ನು ಮೂರು ವರ್ಷಗಳ ವರೆಗೂ ನಿರ್ವಹಿಸಿ, ರಾಜ್ಯಭಾರವನ್ನು ಯೋಗ್ಯವಾಗಿ ಮಾರ್ಪುಗೊಳಿಸಿದರು. ಮುಂದೆ ಸನ್ ೧೯೦೭ರಲ್ಲಿ ಬಡೋದೆಯನ್ನು ಬಿಟ್ಟು ಹೊರಡುವಾಗ "ಪ್ರಿಯಸ್ನೇಹಿತ"ರ ಅಗಲಿಕೆಗಾಗಿ ಇಡೀ ಬಡೋದಾನಗರದ ನಿವಾಸಿಗಳೆಲ್ಲರೂ ದುಃಖಾಶ್ರುಗಳನ್ನು ಸೂಸಿದುದರಲ್ಲಿ ಆಶ್ಚರ್ಯವೇನು?

ರಮೇಶಚಂದ್ರರ ಅದ್ವಿತೀಯವಾದ ಪಾಂಡಿತ್ಯವೂ, ವಿನಯಸಂಪನ್ನವಾದ ವರ್ತನವೂ, ಅನುಸರಣೀಯವಾದ ದೇಶಾಭಿಮಾನವೂ, ಲೋಕಪ್ರಸಿದ್ಧವಾಗಿರುವುದರಿಂದ ಸರಕಾರದವರು ಇವರ ಮೇಲೆ ತಮಗಿರುವ ಪೂಜ್ಯಬುದ್ಧಿಯನ್ನು ಪ್ರದರ್ಶಿಸುವುದ

ಕ್ಕಾಗಿ ಸನ್ ೧೮೯೫ರಲ್ಲಿ ಇವರಿಗೆ "ಸಿ. ಐ. ಇ" ಎಂಬ ಬಹುಮಾನದ ಬಿರುದನ್ನು ಕೊಟ್ಟು ಮನ್ನಿಸಿದರು.

ವಿಶೇಷವಾದ ಪಾಂಡಿತ್ಯವು ಅನೂನವಾದ ಸದ್ಗುಣಗಳೊಡನೆ ಕೂಡಿರುವುದು ಬಹಳಮಟ್ಟಿಗೆ ಅಪರೂಪವೇ ಸರಿ. ಈ ಎರಡೂ ಗುಣಗಳು ರಮೇಶಚಂದ್ರರ ಪ್ರಕೃತಿಯಲ್ಲಿ ತುಂಬಿ ಸ್ಪರ್ಧಿಸುತ್ತಿವೆ. ವಿನಯಜನ್ಯವಾದ ಶಾಂತತೆಯು ಇವರ ಮುಖಭಾವದಲ್ಲಿ ತೇಲುತ್ತಿರುವುದು. ಆರ್ದ್ರಹೃದಯಜನಿತವಾದ ಕೋಮಲತೆಯು ಇವರ ನೇತ್ರಗಳಲ್ಲಿ ಪ್ರವಹಿಸುತ್ತಿರುವುದು. ಇವರನ್ನು ನೋಡಿದ ಮಾತ್ರದಿಂದಲೇ ಇವರ ಮೇಲೆ ಒಂದು ಬಗೆಯ ಪೂಜ್ಯಬುದ್ಧಿಯುಂಟಾಗುವದು. ಒಮ್ಮೆ ಅಸೂಯಾ ಪರರಾದ ಎಷ್ಟೋ ದುರಭಿಮಾನಿಗಳು ಸಂಸ್ಕರಣವಿಷಯದಲ್ಲಿಯೂ ಗ್ರಂಥರಚನಾ ಕಾರ್ಯದಲ್ಲಿಯೂ ನಮ್ಮ ಚರಿತ್ರನಾಯಕರನ್ನು ಹೇರಳವಾಗಿ ದೂಷಿಸಿ ಕೆರಳಿಸಬೇಕೆಂದು ಪ್ರಯತ್ನಮಾಡಿದರು. ಆದರೆ ಅದು ಸಾರ್ಥಕವಾಗುವದರ ಬದಲಾಗಿ ಅವರ ಸದ್ಗುಣಗಳ ಮಹತ್ವವನ್ನೇ ಪುಟಕ್ಕಿಟ್ಟು ಪರೀಕ್ಷಿಸಿದಂತಾಯಿತು. ದೇಶೋದ್ಧಾರಕ್ಕಾಗಿ ನಮ್ಮ ಕಥಾನಾಯಕರು ಅನೇಕ ಮಹತ್ವದ ಕಾರ್ಯಗಳನ್ನು ಮಾಡಿರುವರು. ಸ್ಥಳಸಂಕೋಚದ ದೆಸೆಯಿಂದ ಅವುಗಳನ್ನು ಇಲ್ಲಿ ಹೇಳಲಾಗುವುದಿಲ್ಲ. ಇಲ್ಲಿ ಇಷ್ಟು ಹೇಳಿದರೆ ಸಾಕು. ಮಾತೃದೇಶದ ಉದ್ಧಾರವೇ ಗಮ್ಯಸ್ಥಾನವೆಂದು ತಿಳಿದು, ತಮ್ಮ ನಿಜಕರ್ತವ್ಯಗಳನ್ನು ನೆರವೇರಿಸಿದ್ದರಿಂದ ನಮ್ಮ ಚರಿತ್ರನಾಯಕರ ಕೀರ್ತಿ ಆಚಂದ್ರಾರ್ಕವಾಗಿರುವುದು.

ಇಂಥ ಮಹನೀಯರು ಕಳೆದ ಸನ್ ೧೯೦೯ನೇ ನವಂಬರ್ ತಿಂಗಳ ೩೦ನೇ ತಾರೀಕಿನ ದಿವಸ ಈ ನಶ್ವರವಾದ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಪ್ರಯಾಣ ಮಾಡಿದರು. ಈಶ್ವರೀಸಂಕೇತಕ್ಕೆ ಯಾರು ಏನು ಮಾಡಬಲ್ಲರು? ಈ ಮಹಾ ಪುರುಷರ ಆತ್ಮಕ್ಕೆ ಶಾಂತಿಯನ್ನು ದಯೆಪಾಲಿಸಲೆಂದೂ, ಇಂಥ ದೇಶಾಭಿಮಾನಿಗಳು ಇನ್ನೂ ಅನೇಕರು ಈ ನಮ್ಮ ಮಾತೃಭೂಮಿಯಲ್ಲಿ ಜನಿಸಿ ಈ ದೇಶವನ್ನುದ್ಧರಿಸುವ ಕಾರ್ಯದಲ್ಲಿ ಪ್ರವೃತ್ತರಾಗಬೇಕೆಂದೂ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುವ.

ಪ್ರೌಢವಿವಾಹ

ವಿವಾಹವು ವ್ಯಕ್ತಿಗಳ ಆಯುಷ್ಯಕ್ರಮದೊಳಗಣ ಒಂದು ಮಹತ್ವದ ಸಂಗತಿಯಾಗಿದೆ. ಭಾವೀ ಆಯುಷ್ಯದೊಳಗಣ ಸುಖದುಃಖಗಳಿಗೆ ವಧೂವರರೇ ಬಾಧ್ಯರಾಗುವುದರಿಂದ ವಿವಾಹದ ವಿಷಯದಲ್ಲಿ ಅವರ ತಂದೆತಾಯಿಗಳು ಬಲಾತ್ಕಾರ

ಪೂರ್ವಕವಾಗಿ ಯಾವ ಕಾರ್ಯವನ್ನೂ ಮಾಡುವುದು ಯೋಗ್ಯವೆನಿಸುವುದಿಲ್ಲ. ಆದರೆ ಈಚೀಚೆಗೆ ಎಷ್ಟೋ ಜನರು ಚಿಕ್ಕ ವಯಸ್ಸಿನಲ್ಲಿ ತಮ್ಮ ಮಕ್ಕಳ ಮದುವೆಯನ್ನು ಮಾಡಿಬಿಟ್ಟರೆ ತಮ್ಮ ನರದೇಹದ ಸಾರ್ಥಿಕ್ಯವಾಯಿತೆಂದು ತಿಳಿದುಕೊಳ್ಳುತ್ತಾರೆ. ಇನ್ನು ಎಷ್ಟೋ ಜನರು ಕೂಸುಗಳು ತೊಟ್ಟಿಲಲ್ಲಿರುವಾಗಲೇ ವಾಙ್ನಿಶ್ಚಯವನ್ನು ಮಾಡಿಬಿಡುವರು. ಇಂಥ ಬಾಲವಿವಾಹದಿಂದ ನಮ್ಮ ಕನ್ನಿಕೆಯರು ಪ್ರೌಢಾವಸ್ಥೆಯನ್ನು ಹೊಂದುವುದಕ್ಕಿಂತ ಮೊದಲೇ ಋತುಮತಿಯರಾಗಿ ಸಂಸಾರವನ್ನು ಮಾಡತೊಡಗುವುದರಿಂದ ನಮ್ಮ ಸಂತತಿ ದಿನೇದಿನೇ ದುರ್ಬಲವಾಗತೊಡಗಿದೆ. ಇಷ್ಟೇ ಅಲ್ಲ. ಈ ಬಾಲವಿವಾಹದಿಂದ ಎಷ್ಟೋ ತರುಣಸ್ತ್ರೀಪುರುಷರು ಅಕಾಲದಲ್ಲಿ ಮರಣಕ್ಕೊಳಗಾಗಿರುವರು. ಈ ಮಹತ್ವದ ವಿಷಯವಾಗಿ ನಮ್ಮ ಸಮಾಜಸುಧಾರಕರು ಇನ್ನೂ ಚೆನ್ನಾಗಿ ವಿಚಾರಮಾಡದಿರುವುದನ್ನು ಕಂಡು ನಮ್ಮ ಮನಸ್ಸಿಗೆ ಖೇದವಾಗುತ್ತಿದೆ. ಸಮಾಜದ ಉನ್ನತಿಯೂ, ಅವನತಿಯೂ, ಮುಂದೆ ಆಗುವ ಸಂತತಿಯನ್ನೇ ಅವಲಂಬಿಸಿರುವುದು. ಸಾರಾಂಶವೇನೆಂದರೆ:—ಪ್ರೌಢವಿವಾಹವು ಪ್ರಚಾರದಲ್ಲಿ ಬಂದ ಹೊರತು ಸಮಾಜದ ಉನ್ನತಿಯಾಗಲಿಕ್ಕಿಲ್ಲವೆಂಬುದು ನಿಜವು.

'ಪ್ರೌಢವಿವಾಹ'ವೆಂದರೆ ಸಜ್ಞಾನ ಅಥವಾ ತಿಳಿವಳಿಕೆಯುಳ್ಳ ವಧೂವರರ ಲಗ್ನವು. ಗಂಡುಹೆಣ್ಣುಮಕ್ಕಳು ದೊಡ್ಡವರಾಗಿ ತಮ್ಮ ಹಿತಾಹಿತವನ್ನು ತಿಳಿದುಕೊಳ್ಳಲಿಕ್ಕೆ ತಕ್ಕವರಾದ ಮೇಲೆ ಮಾಡಿಕೊಳ್ಳತಕ್ಕ ವಿವಾಹಕ್ಕೆ ಈ ಹೆಸರು ಕೊಟ್ಟಿದೆ. ನಮ್ಮ ಪೌರಾಣಿಕ ವೇದಶಾಸ್ತ್ರಗಳಲ್ಲಿಯಾದರೂ ಹೇಳಿರುವುದೇನೆಂದರೆ:—

ऊनषोडशवर्षायामप्राप्तः पंचविंशतिम् ।
यद्याधत्ते पुमान् गर्भं कुक्षिसः स विपद्यते ॥
जातो वा न चिरंजीवेज्जीवेद्वा दुर्बलेंद्रियः ।
तस्मादत्यंतबालानां गर्भाधानं न कारयेत् ॥ १ ॥

ಇದರ ಅರ್ಥವೇನೆಂದರೆ, ೨೫ ವರ್ಷಕ್ಕಿಂತ ಕಡಿಮೆವಯಸ್ಸುಳ್ಳ ಪುರುಷನೂ ೧೬ ವರ್ಷಕ್ಕಿಂತ ಕಡಿಮೆವಯಸ್ಸುಳ್ಳ ಸ್ತ್ರೀಯೂ—ಇವರಿಬ್ಬರ ಸಂಬಂಧವಾದರೆ ಗರ್ಭಾಶಯದಲ್ಲಿಯೇ ಗರ್ಭವು ನಾಶಹೊಂದುವುದು; ಒಂದುವೇಳೆ ಆ ಗರ್ಭವು ಜನ್ಮಹೊಂದಿದರೂ ಅದು ಬಹುಕಾಲ ಬದುಕಲಾರದು; ಮತ್ತೂ ಅದರ ಅವಯವಗಳೆಲ್ಲಾ ಅಶಕ್ತವಾಗಿರುವವು. ಆದುದರಿಂದ ಪ್ರೌಢಾವಸ್ಥೆಗೆ ಬರುವುದಕ್ಕೆ ಮುಂಚೆ ಗರ್ಭಾಧಾನವನ್ನು ಮಾಡಬಾರದು.

ಪ್ರೌಢವಿವಾಹವು ಪ್ರಚಲಿತವಾದರೆ ವಧೂವರರು ತಮ್ಮ ಮೇಲಿರುವ ಜವಾಬುದಾರಿಯನ್ನು ತಿಳಿದುಕೊಂಡು ವರ್ತಿಸುವರು. ವಿವಾಹಬಂಧನವು ಎಷ್ಟು ಪವಿತ್ರವಾದದ್ದೂ, ಎಷ್ಟು ಮಹತ್ವವುಳ್ಳದ್ದೂ ಆಗಿರುವುದೆಂಬುದನ್ನು ತಿಳಿದುಕೊಳ್ಳುವ ಬುದ್ಧಿ

ಬಲವು ಪ್ರೌಢತ್ವದಲ್ಲಿ ಬರುವಂತೆ ಬಾಲ್ಯದಲ್ಲಿ ಹೇಗೆ ಬಂದೀತು? ಪ್ರೌಢವಿವಾಹದಿಂದಲೇ ಸಮಾಜದಲ್ಲಿರುವ ನೀತಿಯೂ ಶೀಲವೂ ವೃದ್ಧಿಹೊಂದುವುದು. ಪ್ರೌಢವಿವಾಹವು ರೂಢವಾಯಿತೆಂದರೆ ಬಾಲವಿಧವೆಯರ ಸಂಖ್ಯೆ ಬಹಳಕಡಿಮೆಯಾಗುವುದೆಂಬುದರಲ್ಲಿ ಆಶ್ಚರ್ಯವೇನು? ಸಾಂಪ್ರತಕಾಲದ ಪರಿಸ್ಥಿತಿಯನ್ನು ಅವಲೋಕಿಸಿದರೆ, ನಮ್ಮ ಸಮಾಜದಲ್ಲಿ ಬಾಲವಿಧವೆಯರ ಸಂಖ್ಯೆ ದಿನೇದಿನೇ ಹೆಚ್ಚುತ್ತಾ ನಡೆದಿರುವುದು. ಅವರು ತಮ್ಮ ಆಯುಷ್ಯವನ್ನು ಕಷ್ಟದಿಂದ ಕಳೆಯುತ್ತಿರುವರು. ಅಂಥ ಬಾಲಿಕೆಯರನ್ನು ಬಾಲ್ಯದಲ್ಲಿ ಲಗ್ನಮಾಡಿಕೊಡುವುದರಿಂದ ಅವರನ್ನು ಇಂಥ ದುಃಖ ಸಾಗರದಲ್ಲಿ ಮುಳುಗಿಸಿದುದಕ್ಕೆ ಅವರ ತಾಯಿತಂದೆಗಳೇ ಜವಾಬುದಾರರು.

ಸಂಸಾರವು ಸುಖಸಮಾಧಾನದಿಂದ ಸಾಗಬೇಕಾದರೆ ಸ್ತ್ರೀಯರೂ ಪುರುಷರಂತೆ ಶಿಕ್ಷಣವನ್ನು ಪಡೆಯಲೇ ಬೇಕು. ಶಿಕ್ಷಣದಿಂದಲೇ ಸತಿ ತನ್ನ ಪತಿಗೆ ತಕ್ಕವಳಾಗುವಳು. ಆದರೆ ಶಿಕ್ಷಣಸಂಪಾದನೆಗೆ ತಕ್ಕ ಕಾಲವಾದ ಬಾಲ್ಯದಲ್ಲಿಯೇ ನಮ್ಮ ಬಾಲಿಕೆಯರ ವಿವಾಹವಾಗುವ ಕಾರಣ ಶಿಕ್ಷಣಸಂಪಾದನೆಯು ಅವರಿಗೆ ವರ್ಜ್ಯವಾಗುತ್ತದೆ. ಅದೇ ಸ್ತ್ರೀಯರು ಪ್ರೌಢರಾಗುವ ವರೆಗೆ ಅವಿವಾಹಿತರಾಗಿದ್ದರೆ ಶಿಕ್ಷಣದಿಂದ ಅವರ ತಿಳಿವಳಿಕೆ ವೃದ್ಧಿಹೊಂದುವುದು. ಹಾಗೂ ಪತಿ ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಸಹಾಯಮಾಡಲಿಕ್ಕೆ ಅನುಕೂಲವಾಗುವುದು.

ಒಟ್ಟಿನಲ್ಲಿ ಹೇಳುವುದೇನಂದರೆ ಸಮಾಜದಲ್ಲಿ ಶಿಕ್ಷಣಕ್ಕೆ ಅಡ್ಡಿಬರುವ ಬಾಲವಿವಾಹ ಮೊದಲಾದ ಅನಿಷ್ಟರೂಢಿಗಳನ್ನು ತೆಗೆದುಹಾಕಬೇಕು. ತಂದೆತಾಯಿಗಳು ಯೋಗ್ಯಕಾಲದಲ್ಲಿ ತಮ್ಮ ಬಾಲಬಾಲಿಕೆಯರ ಶಿಕ್ಷಣವು ಸಮಾಪ್ತವಾದನಂತರ ವಿವಾಹಮಾಡುವೆವೆಂದು ಪ್ರತಿಜ್ಞೆಮಾಡಬೇಕು. ಸಾಮಾನ್ಯವಾಗಿ ವಿವಾಹಕಾಲಕ್ಕೆ ವರನ ವಯಸ್ಸು ೨೧ಕ್ಕಿಂತ ಕಡಿಮೆ ಇರಕೂಡದೆಂತಲೂ, ವಧುವಿನ ವಯಸ್ಸು ೧೪ ವರ್ಷಕ್ಕಿಂತ ಕಡಿಮೆ ಇರಕೂಡದೆಂತಲೂ ನಿರ್ಬಂಧಮಾಡುವುದರಿಂದ ಸಮಾಜೋತ್ಕರ್ಷಕ್ಕೆ ಬಹಳ ಸಹಾಯವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಸಮಾಪ್ತ.